Advocacy, policy and support on male sexualities
Naz Foundation International

# ಅಭಿವೃದ್ಧಿ ಕೈಪಿಡಿ

ಪುರುಷ-ಪುರುಷ ಲೈಂಗಿಕರು, ಅವರ ಸಂಗಾತಿಗಳು ಹಾಗು ಕುಟುಂಬದವರ, ಎಚ್ ಐ ವಿ / ಏಡ್ಸ್, ಲೈಂಗಿಕ ಆರೋಗ್ಯ, ಕ್ಷೇಮಾಭಿವೃದ್ಧಿ ಮತ್ತು ಮಾನವ ಹಕ್ಕು ಸಮಸ್ಯಗಳನ್ನು ಸಂಭೋಧಿಸಲು ಸಮುದಾಯ ಆಧರಿತ ಸಂಘಟನೆಗಳ ಅಭಿವೃದ್ಧಿ.



## ಪುಸ್ತಕ 4

## ಎರಡನೇ ಹಂತ : ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರ ಲೈಂಗಿಕ ಆರೋಗ್ಯ ಯೋಜನೆ

# ಅಭಿವೃದ್ಧಿ ಕೈಪಿಡಿ

ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರು, ಅವರು ಪೋಷಕರು ಮತ್ತು ಕುಟುಂಬಗಳಿಗಾಗಿ ಎಚ್ಐವಿ/ಏಡ್ಸ್, ಲೈಂಗಿಕ ಆರೋಗ್ಯ, ಕಲ್ಯಾಣ ಮತ್ತು ಮಾನವ ಹಕ್ಕುಗಳ ವಿಷಯಗಳ ಮೇಲೆ ಬೆಳಕು ಚೆಲ್ಲುವ ಸಮುದಾಯ ಆಧಾರಿತ ಸಂಘಟನೆಗಳ ಅಭಿವೃದ್ಧಿ.

## ಪುಸ್ತಕ - 4

ಎರಡನೇ ಹಂತ : ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಸಮರ್ಪಣೆ

ಏಡ್ಸ್‌ನಿಂದಲೇ ಮೃತಪಟ್ಟ ಮತ್ತು ಆರೈಕೆ ಇಲ್ಲದ ಎಲ್ಲ ನತದೃಷ್ಟರಿಗೆ, ಅವರ ಪೋಷಕರು ಹಾಗೂ ಕುಟುಂಬ ವರ್ಗದವರಿಗೆ ಈ ಸರಣಿ ಪುಸ್ತಕಗಳನ್ನು ಸಮರ್ಪಿಸಲಾಗಿದೆ.

## ಕೃತಜ್ಞತೆಗಳು

ಸಾಮಾಜಿಕ ಮತ್ತು ಅಗತ್ಯ ಪರಿಗಣನೆಗಳು, ಲೈಂಗಿಕ ಆರೋಗ್ಯ ಯೋಜನೆಗಳು, ಸಂದರ್ಶನಗಳು, ಕಾರ್ಯಾಗಾರಗಳಲ್ಲಿ ಭಾಗವಹಿಸಿ ಅವರ ಪೋಷಕರನ್ನು ಭೇಟಿಯಾಗಿ ಸಂದರ್ಶನ ನಡೆಸಿದವರಿಗೆ, ಪ್ರಾಮಾಣಿಕವಾಗಿ, ಮುಕ್ತವಾಗಿ ಮತ್ತು ಸ್ನೇಹದಿಂದ ಅನುಭವಗಳನ್ನು ಹಂಚಿಕೊಂಡವರಿಗೆ, ಪಾರ್ಕ್‌ಗಳಲ್ಲಿ, ಟೀ ಸ್ಟಾಲ್‌ಗಳಲ್ಲಿ, ರಸ್ತೆ ತಿರುವಿನಲ್ಲಿ, ರೆಸ್ಟೋರೆಂಟ್‌ಗಳಲ್ಲಿ, ರಿಕ್ಷಾಗಳಲ್ಲಿ ಹಾಗೂ ಹೋಟೆಲ್ ಲಾಬಿಗಳಲ್ಲಿ ತಮ್ಮ ಕತೆಗಳನ್ನು ತಾಳ್ಮೆಯಿಂದ ಹೇಳಿದವರಿಗೆಲ್ಲ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರಿಗಾಗಿ ಬರೆಯಲ್ಪಟ್ಟ ಕೈಪಿಡಿಯಲ್ಲಿ ವ್ಯಕ್ತಪಡಿಸಲಾದ ಅಗತ್ಯತೆಗಳಿಗೆ ಪೂರಕವಾದ ಅಭಿವೃದ್ಧಿಯ ಸೂಕ್ತ ಸೇವೆಗಳ ಸವಾಲುಗಳನ್ನು ಸ್ವೀಕರಿಸಿದ ವ್ಯಕ್ತಿಗಳು ಮತ್ತು ಸಂಘಟನೆಗಳಿಗೂ ನಾವು ಕೃತಜ್ಞತೆಗಳನ್ನು ಸಲ್ಲಿಸಲು ಇಚ್ಛಿಸುತ್ತೇವೆ. ಅವರಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ.

ಈ ಸಂಪನ್ಮೂಲವನ್ನು ಇನ್ನಷ್ಟು ಉತ್ತಮಗೊಳಿಸಲು ಆರ್ಥಿಕ ಸಹಕಾರ ಮತ್ತು ಪ್ರೋತ್ಸಾಹ ನೀಡಿದ ಯುಎನ್ಏಡ್ಸ್ (UNAIDS)ಗೂ ಸಹ ನಾವು ಕೃತಜ್ಞತೆ ಸಲ್ಲಿಸಲು ಬಯಸುತ್ತೇವೆ.

***ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್***

**ಪ್ರಕಟಣೆ ಮಾಹಿತಿ**

ಪ್ರಕಟಣೆ : ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್ 2005

© ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್ 2005

ಈ ಪುಸ್ತಕ ಮತ್ತು ಸರಣಿಯ ಉಳಿದ ಪುಸ್ತಕಗಳನ್ನು www.nfi.net ಅಥವಾ ಕೆಳಕಂಡ ನಮ್ಮ ಭಾರತದ ಕಚೇರಿಯಿಂದ ಪಡೆಯಬಹುದು. ಹೆಚ್ಚುವರಿ ಭಾಷೆಗಳ ಆವೃತ್ತಿಗಳು ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ಸಂಪರ್ಕಿಸಿ.

**ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್**
**ದಕ್ಷಿಣ ಏಷ್ಯಾ ಪ್ರಾದೇಶಿಕ ಕಚೇರಿ**
9 ಗುಲ್ಜಾರ್ ಕಾಲೋನಿ, ನ್ಯೂ ಬೆರ್ರಿ ಲೈನ್
ಲಕ್ನೋ 226 001, ಭಾರತ
ದೂರವಾಣಿ : +91 (O) 522 2205781/2
ಫ್ಯಾಕ್ಸ್ : +91 (O) 522 2205783
ಈ-ಮೇಲ್ : lucknow@nfi.net

**ಪ್ರಧಾನ ಕಚೇರಿ**
**ಪಾಲಿಂಗ್ಸ್‌ವಿಕ್ ಹೌಸ್**
241 ಕಿಂಗ್ ಸ್ಟ್ರೀಟ್
ಲಂಡನ್ ಡಬ್ಲ್ಯು 6 9ಎಲ್‌ಪಿ, ಯುಕೆ
ದೂರವಾಣಿ : +44 (O) 20 8563 0191
ಫ್ಯಾಕ್ಸ್ : +44 (O) 20 8741 9841
ಈ-ಮೇಲ್ : london@nfi.net

ಎರಡನೇ ಹಂತ : ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

# ಪರಿವಿಡಿ

ಪುಟ


1. ಪುಸ್ತಕ ಮತ್ತು ಸರಣಿಯ ಪರಿಚಯ
3. ಸ್ವ-ಸಹಾಯ ಎಂಎಸ್ಎಂ ಸಮುದಾಯ-
   ಆಧರಿತ ಸಂಘಟನೆಗಳ ಅಭಿವೃದ್ಧಿಗಾಗಿ ಎನ್ಎಫ್ಐ ಪ್ರಕ್ರಿಯೆ
5. ಎಂಎಸ್ಎಂ ಸಿಬಿಒ ಲೈಂಗಿಕ ಆರೋಗ್ಯ ಮಧ್ಯಸ್ಥಿಕೆ ಅಭಿವೃದ್ಧಿ
13. ಎರಡನೇ ಕಾರ್ಯಾಗಾರ
15. ಯೋಜನಾ ಅಭಿವೃದ್ಧಿ ಪಾರಿಭಾಷಿಕ ಕೋಶ
19. ಕಾರ್ಯಾಗಾರ ಎರಡು ಕಾರ್ಯಸೂಚಿ
21. ಮಾದರಿ ವೇಳಾಪಟ್ಟಿ
25. ಮೊದಲ ದಿನ : ಚೌಕಟ್ಟು ಅಭಿವೃದ್ಧಿ
33. ಎರಡನೇ ದಿನ : ಯೋಜನಾ ಅಭಿವೃದ್ಧಿ ಒಂದು
43. ಮೂರನೇ ದಿನ : ಯೋಜನಾ ಅಭಿವೃದ್ಧಿ ಎರಡು
53. ನಾಲ್ಕನೇ ದಿನ : ಯೋಜನಾ ನಿರ್ವಹಣೆ ಒಂದು
61. ಐದನೇ ದಿನ : ಯೋಜನಾ ನಿರ್ವಹಣೆ ಎರಡು
75. ಅನುಸರಣೆ
77. ಸಂಕ್ಷಿಪ್ತ ರೂಪ
79. ಗ್ರಂಥ ಋಣ


ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್

## ಪುಸ್ತಕ ಮತ್ತು ಸರಣಿಯ ಪರಿಚಯ

ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರು (Males who have sex with males - MSM) ಮೇಲೆ ಪರಿಣಾಮ ಉಂಟುಮಾಡುವ ವಿಷಯಗಳ ಬಗ್ಗೆ ಬೆಳಕು ಚೆಲ್ಲುವ ಸಮುದಾಯ ಆಧರಿತ ಸಂಘಟನೆಗಳ ಪ್ರಾಯೋಗಿಕ ರಚನೆ ಮತ್ತು ಹಂತ-ಹಂತದ ಕ್ರಮದ ಮಾಹಿತಿ ಒದಗಿಸುವ ಕೈಪಿಡಿ ಸರಣಿಯಲ್ಲಿ ಇದು ನಾಲ್ಕನೇ ಪುಸ್ತಕ. ಎಂಎಸ್‌ಎಂಗೆ ಕಾರಣವಾಗುವ ಅಂಶಗಳ ಕುರಿತು ದಕ್ಷಿಣ ಏಷ್ಯಾದಲ್ಲಿ ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್ ಕೈಗೊಂಡ ವ್ಯಾಪಕ ಸಮುದಾಯ ಅಭಿವೃದ್ಧಿ ಕಾರ್ಯಗಳಿಂದ ಈ ಕೈಪಿಡಿಹೊರಬಂದಿದೆ. ಪುರುಷರ ಜೊತೆ ಪುರುಷರು ನಡೆಸುವ ಲೈಂಗಿಕ ಕ್ರಿಯೆಯ ಪರಿಣಾಮಗಳ ಬಗ್ಗೆ 1996ರಿಂದ ಸರಣಿಯಲ್ಲಿರುವ ಮಾದರಿ ಸವಿವರವನ್ನು 30ಕ್ಕೂ ಹೆಚ್ಚು ಯೋಜನೆಗಳನ್ನು ಅಭಿವೃದ್ಧಿಗೊಳಿಸಲು ಬಳಸಲಾಗಿದೆ. ಎಲ್ಲ ಎಂಎಸ್‌ಎಂಗಳಿಗೆ ಸೂಕ್ತ ಲೈಂಗಿಕ ಆರೋಗ್ಯ, ಎಚ್‌ಐವಿ/ಏಡ್ಸ್ ನಿಯಂತ್ರಣ, ಸುರಕ್ಷತೆ ಮತ್ತು ಕಲ್ಯಾಣ ಸೇವೆಗಳು ದೊರೆಯುವಂತಾಗಲು, ಇನ್ನೂ ಹೆಚ್ಚಿನ ಅಭಿವೃದ್ಧಿ ಸಾಧಿಸಲು ಈ ಹೊಸ ವಿಧಾನ ನೆರವಾಗಲಿದೆ ಎಂದು ನಾವು ಆಶಿಸುತ್ತೇವೆ.

**ಪುಸ್ತಕ 1:** ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್‌ನ ಮೂಲ ಪರಿಚಯ ಮತ್ತು ದಕ್ಷಿಣ ಏಷ್ಯಾದಲ್ಲಿ ಲೈಂಗಿಕತೆ ಮತ್ತು ಲೈಂಗಿಕ ಆರೋಗ್ಯದ ಸೈದ್ಧಾಂತಿಕ ಚೌಕಟ್ಟಿನೊಂದಿಗೆ ಸರಣಿಯಲ್ಲಿ ಬಳಸಲಾದ ಪದಗಳಿಗೆ ವಿವರಣಾ ಕೋಶವನ್ನು ನೀಡುತ್ತದೆ.

**ಪುಸ್ತಕ 2:** ದಕ್ಷಿಣ ಏಷ್ಯಾದಲ್ಲಿ ಪುರುಷ-ಪುರುಷರ ಲೈಂಗಿಕ ಕ್ರಿಯೆಗೆ ಸಾಮಾಜಿಕ-ಸಾಂಸ್ಕೃತಿಕ ಹಿನ್ನಲೆ ಒದಗಿಸುತ್ತದೆ. ಎಂಎಸ್‌ಎಂ ಜನಸಂಖ್ಯೆ ಸೂಕ್ತ ಲೈಂಗಿಕ ಆರೋಗ್ಯ ಮತ್ತು ಎಚ್‌ಐವಿ/ಏಡ್ಸ್ ಸೇವೆಗಳನ್ನು ಪಡೆಯುವಂತಾಗಲು ಅಗತ್ಯವಾದ ಅಭಿವೃದ್ಧಿ ಪ್ರಕ್ರಿಯೆಗಳನ್ನು ಇದು ನೀಡುತ್ತದೆ.

ಸ್ವ-ಸಹಾಯ ಮತ್ತು ಸಮುದಾಯ ಆಧರಿತ ಸಂಘಟನೆಯ ಅತ್ಯಂತ ಸೂಕ್ತ ರೂಪರೇಷೆಯಿಂದ ಆರೋಗ್ಯ ಹೊಂದುವ ನಡವಳಿಕೆ ಸುಧಾರಣೆ ಹಾಗೂ ಎಂಎಸ್‌ಎಂ ಹಾಗೂ ಅವರ ಮಹಿಳಾ ಲೈಂಗಿಕ ಜೊತೆಗಾತಿಯರಿಗೆ ತಗುಲುವ ಲೈಂಗಿಕ ರೋಗ ಸೋಂಕು / ಎಚ್‌ಐವಿ ಸೋಂಕಿನ ಅಪಾಯ ಕಡಿಮೆ ಮಾಡಲು ಸಾಧ್ಯ ಎಂದು ಎನ್‌ಎಫ್‌ಐ ದೃಢವಾಗಿ ನಂಬಿದೆ. ತಮ್ಮ ಲೈಂಗಿಕ ಆರೋಗ್ಯ ಸೇವೆಗಳನ್ನು ಅಭಿವೃದ್ಧಿಗೊಳಿಸಲು ಎಂಎಸ್‌ಎಂ ಜಾಲವನ್ನು ಬಲಗೊಳಿಸುವುದು ಎಂದು ಇದರ ಅರ್ಥ.

ಆರಂಭದಲ್ಲಿ ಪುರುಷ-ಪುರುಷ ಲೈಂಗಿಕರಿಗಾಗಿ ಬೇಕಾಗಿರುವ ಲೈಂಗಿಕ ಆರೋಗ್ಯ ಕಾರ್ಯಕ್ರಮಗಳಿಗಾಗಿ ಎನ್‌ಜಿಓ ಮತ್ತು ಸರ್ಕಾರಿ ಸಂಸ್ಥೆಗಳು, ಎಂಎಸ್‌ಎಂ ಅಲ್ಲದವರನ್ನು ಬಳಸಿಕೊಳ್ಳಬೇಕಾಗುತ್ತದೆ. ಇಂಥ ಎಂಎಸ್‌ಎಂ ಸ್ವಸಹಾಯ ಸಂಘಟನೆಗಳು ಇಲ್ಲದಿರುವುದರಿಂದ ಮಧ್ಯಸ್ಥಿಕೆಗಾಗಿ ಇಂಥ ಸಂಸ್ಥೆಗಳನ್ನು ಅಭಿವೃದ್ಧಿಗೊಳಿಸಬೇಕೆಂಬುದನ್ನು ಎನ್‌ಎಫ್‌ಐ ದೃಢವಾಗಿ ನಂಬಿದೆ. ಇದರಿಂದಾಗಿ ಮಧ್ಯಸ್ಥಿಕೆಯ ನಿರ್ವಹಣೆ ಮತ್ತು ಸೇವೆಗಳು ಲಭಿಸುತ್ತವೆ. ಗಂಡಾಂತರದಿಂದ ಪಾರಾಗಲು ಎಂಎಸ್‌ಎಂ ಸಮುದಾಯಗಳಿಗೆ ಅನುವು ಮತ್ತು ಅವಕಾಶ ಕಲ್ಪಿಸುವ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ಚೌಕಟ್ಟಿಗೆ ಬೇಕಾದ ಅಗತ್ಯ ಅಂಶವನ್ನು ಇಂಥ **ಧೋರಣೆಗಳು** ಒದಗಿಸುತ್ತವೆ.

ಎನ್.ಎಫ್.ಐ ಕಾರ್ಯತಂತ್ರದೊಳಗಿರುವ ಮತ್ತೊಂದು ಮಹತ್ವದ ಪರಿಕಲ್ಪನೆ ಎಂದರೆ, ಲೈಂಗಿಕ ಆರೋಗ್ಯ ಕೇವಲ ರೋಗ ನಿಯಂತ್ರಣ ಮಾತ್ರವಲ್ಲ. ಇದು ಉತ್ತಮ ಇದರುವಿಕೆಯ ಪ್ರವರ್ತನವೂ ಹೌದೆಂಬ ಬಲವಾದ ನಂಬಿಕೆ. ಲೈಂಗಿಕ ನಡವಳಿಕೆಯಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಧಾರ್ಮಿಕ, ಕೌಟುಂಬಿಕ, ದೈಹಿಕ ಮತ್ತು ವೈಯಕ್ತಿಕ ಅಂಶಗಳನ್ನು ಅರ್ಥೈಸಿಕೊಳ್ಳುವುದು ಅಗತ್ಯ ಎಂಬುದು ಇದರ ಅರ್ಥ. ಅಂದರೆ, ಗಂಡಸುತನ ಮತ್ತು ಲೈಂಗಿಕತೆಯ ಪರಿಕಲ್ಪನೆಗಳ ಅನ್ವೇಷಣೆ ಹಾಗೂ ವರ್ಗ, ಬಡತನ ಮತ್ತು ಶಿಕ್ಷಣ ಚೌಕಟ್ಟಿನ ಭಿನ್ನತೆ ಎಂಬುದು ಇದರ ಅರ್ಥ.

**ಪುಸ್ತಕ 3:** ನಿರ್ದಿಷ್ಟ ನಗರ ಅಥವಾ ಪಟ್ಟಣದಲ್ಲಿ ಸಹವರ್ತಿ ನೇತೃತ್ವದ ಮಧ್ಯಸ್ಥಿಕೆ ವ್ಯವಸ್ಥೆಯ ಅಭಿವೃದ್ಧಿಯು ಮೊದಲ ಹಂತವನ್ನು ತಿಳಿಸುತ್ತದೆ. ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಎಂಎಸ್‌ಎಂ ಎಂಬ ಸಮುದಾಯ ಇಲ್ಲದಿರುವುದು. ಆದರೆ ಲೈಂಗಿಕತೆ ಮತ್ತು ಅಸ್ತಿತ್ವ ಭಿನ್ನತೆಯ ಸ್ವಾಯತ್ತ ಜಾಲಗಳಿರುತ್ತವೆ. ದಕ್ಷಿಣ ಏಷ್ಯಾದಲ್ಲಿ, ಪ್ರಾಥಮಿಕ ಚೌಕಟ್ಟು, ಲಿಂಗದ ಪಾತ್ರ, ಪದ್ಧತಿ ಮತ್ತು ಕಾರ್ಯರೂಪದ ಮೇಲೆ ಅವಲಂಭಿಸಿರುವುದನ್ನು ಕಾಣಬಹುದು. ಆದ್ದರಿಂದ ಪುರುಷ-ಪುರುಷರ ಲೈಂಗಿಕ ನಡವಳಿಕೆಗಳಲ್ಲಿ ತೊಡಗುವವರು ಮತ್ತು ಜಾಲಗಳ ಭಿನ್ನತೆಗೆ ಸಂಬಂಧಿಸಿದಂತೆ ಯಾವುದೇ ಕಾರ್ಯಕ್ರಮ ಅಭಿವೃದ್ಧಿಗೊಳಿಸುವುದಕ್ಕೂ ಮೊದಲು, ಯಾವ ಜಾಲ ಅಸ್ತಿತ್ವದಲ್ಲಿರಬೇಕು ಮತ್ತು ಯಾವ ಲೈಂಗಿಕ ಪದ್ಧತಿ ನಡೆಯುತ್ತಿದೆ. ಲೈಂಗಿಕ ಆರೋಗ್ಯ ಕಾಳಜಿ, ಜ್ಞಾನದ ಮಟ್ಟ ಮತ್ತು ಅವರ ಧೋರಣೆ ಮತ್ತು ನಡವಳಿಕೆಗಳನ್ನು ತಿಳಿಯುವುದು ಅಗತ್ಯವಾಗಿದೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ಎಂಎಸ್‌ಎಂ ವ್ಯಕ್ತಿಗಳ ಸಾಮಾಜಿಕ ಸ್ಥಿತಿ ಮತ್ತು ಗಂಡಾಂತರ ಅಂದಾಜನ್ನು ನಡೆಸುವುದು ಅಗತ್ಯ.

*-ನಾಜ್ ಫೌಂಡೇಷನ್ ಇಂಟರ್‌ನ್ಯಾಷನಲ್*

ಎರಡನೇ ಹಂತ: ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ ಸರಣಿ

ಎಂಎಸ್‌ಎಂ ಮತ್ತು ಸಂಬಂಧಪಟ್ಟ ವಿಷಯಗಳೊಂದಿಗೆ ಸಮುದಾಯ ಆಧರಿತ ಪುರುಷ ಲೈಂಗಿಕ ಆರೋಗ್ಯ ಕಾರ್ಯಕ್ರಮ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಈ ಕೈಪಿಡಿಗಳ ಸರಣಿ ಸಮಗ್ರ ಮಾರ್ಗದರ್ಶನ ಮತ್ತು ಮಾಹಿತಿ ಒದಗಿಸುತ್ತದೆ.

ಎಂಎಸ್‌ಎಂ ಮತ್ತು ಸಂಬಂಧಪಟ್ಟ ವಿಷಯಗಳಿಗಾಗಿಯೇ ಈ ಸರಣಿಯನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದ್ದು, ಸ್ವ-ಸಹಾಯ ಮತ್ತು ಸಹಾಯ ಮತ್ತು ಸಹವರ್ತಿ ಶಿಕ್ಷಣ ತತ್ತ್ವಗಳನ್ನು ಇದು ಆಧರಿಸಿದೆ. ಅದರಲ್ಲೂ ಮುಖ್ಯವಾಗಿ ಹೆಣ್ತನ ಆರೋಪಿಸಿಕೊಂಡ, ಕೋಜಾಗಳೆಂದು ಗುರುತಿಸಿಕೊಳ್ಳುವವರಿಗಾಗಿ ಉದ್ದೇಶಿಸಿಲಾಗಿದೆ. ತರಬೇತಿ ಪಡೆದ ಎಂಎಸ್‌ಎಂ ವ್ಯಕ್ತಿಗಳನ್ನು ಬಳಸಿ, ಇತರರು ತಮ್ಮದೇ ಆದ ಸೇವೆಗಳನ್ನು ಅಭಿವೃದ್ಧಿಗೊಳಿಸಲು ತರಬೇತು ನೀಡಲಾಗುವುದು.

ಒಮ್ಮೆ ತರಬೇತು ಪಡೆದು, ಸೂಕ್ತ ಸೇವೆ ಅಭಿವೃದ್ಧಿಗೊಂಡಲ್ಲಿ, ಈ ವ್ಯಕ್ತಿಗಳು ತಮ್ಮಂಥವರನ್ನು ಸಂಪರ್ಕಿಸುವುದರ ಜೊತೆಗೆ ತಮ್ಮ ಪೋಷಕರು ಮತ್ತು ಇತರ ಎಂಎಸ್‌ಎಂಗಳನ್ನು ತಲುಪಿ, ಪುರುಷರ ಸಮಗ್ರ ಲೈಂಗಿಕ ಆರೋಗ್ಯ ಕಾರ್ಯಕ್ರಮ ನಿರ್ಮಾಣಕ್ಕೆ ನೆರವಾಗುತ್ತಾರೆ.

ಈ ಸರಣಿ ಆರು ಪುಸ್ತಕಗಳನ್ನು ಒಳಗೊಂಡಿದೆ:

**ಪುಸ್ತಕ ಒಂದು:** ಪೀಠಿಕೆ

**ಪುಸ್ತಕ ಎರಡು:** ಹಿನ್ನೆಲೆ ಸಂದರ್ಭ ರೂಪಿಸುವಿಕೆ

**ಪುಸ್ತಕ ಮೂರು:** ಮೊದಲ ಹಂತ: ಸಾಮಾಜಿಕ ಮತ್ತು ಅಗತ್ಯ ಮಾಪನ

**ಪುಸ್ತಕ ನಾಲ್ಕು:** ಎರಡನೇ ಹಂತ: ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

**ಪುಸ್ತಕ ಐದು:** ನಿರ್ವಹಣಾ ಪರಿಕರಗಳು

**ಪುಸ್ತಕ ಆರು:** ಇತರ ಸಂಪನ್ಮೂಲಗಳು

ಎನ್‌ಎಫ್‌ಐ ನಡೆಸಿದ ಅನೇಕ ಕಾರ್ಯಾಗಾರಗಳಿಂದ ಸಿದ್ಧಪಡಿಸಲಾದ ವೇಳಾಪಟ್ಟಿ ಮತ್ತು ಕಾರ್ಯಸೂಚಿಯ ಸವಿವರ ಅನುಸರಣೆಯನ್ನು ಕಾರ್ಯಾಗಾರಗಳು ಸೂಚಿಸುತ್ತವೆ. ಎಚ್.ಐ.ವಿ/ ಏಡ್ಸ್

ಸಮುದಾಯ ಆಧರಿತ ಕಾರ್ಯ ಅಥವಾ ಲೈಂಗಿಕ ಆರೋಗ್ಯ ಸುಧಾರಣೆ ಕುರಿತ ಹಿನ್ನೆಲೆಯನ್ನು ಅರ್ಥೈಸಿಕೊಳ್ಳುವ ಬಗ್ಗೆ ಬಹುತೇಕರಿಗೆ ಅನುಭವವಿಲ್ಲದಿರುವ ಕುರಿತು ಪ್ರಮುಖವಾಗಿ ತಿಳಿಸುತ್ತದೆ. ಆದಾಗ್ಯೂ, ಇಂಥ ವೇಳಾ ಪಟ್ಟಿಗಳು ಮತ್ತು ಕಾರ್ಯಸೂಚಿಗಳನ್ನು ಅಗತ್ಯವಿದ್ದಾಗ ತಿದ್ದುಪಡಿ ಮಾಡಲಾಗುವುದು.

ಎನ್.ಎಫ್.ಐ., ಎಂ.ಎಸ್.ಎಂ ಲೈಂಗಿಕ ಆರೋಗ್ಯ ಕಾರ್ಯಕ್ರಮಗಳ ಅಭಿವೃದ್ಧಿಯನ್ನು ಅನುಷ್ಠಾನಗೊಳಿಸಲು ತನ್ನದೇ ಆದ ತರಬೇತುಪಡೆದ ತರಬೇತುದಾರರನ್ನು ಬಳಸುತ್ತದೆ. ಈ ಸಂಪನ್ಮೂಲ ಬಳಸಲು ಬಯಸುವವರು, ಕಾರ್ಯಪ್ರವೃತ್ತರಾಗುವುದಕ್ಕೂ ಮುನ್ನ ಎಂಎಸ್ಎಂ ನಡವಳಿಕೆಗಳು, ಅಸ್ತಿತ್ವ, ಲೈಂಗಿಕತೆ ಮತ್ತು ಗಂಡಸುತನಗಳ ಬಗೆಗಿನ ಪ್ರಾಯೋಗಿಕ ದೃಷ್ಟಿಕೋನ, ಭಾಷೆ ಮತ್ತು ಚೌಕಟ್ಟಿನ ಆಳ ಅರ್ಥದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿರಬೇಕು. ಎನ್.ಎಫ್.ಐನ ತರಬೇತುದಾರರನ್ನು ಪಡೆಯಲು ಇಚ್ಛಿಸುವವರು ದಯವಿಟ್ಟು ಎನ್ಎಫ್ಐನನ್ನು ಸಂಪರ್ಕಿಸಿ.

## ಸ್ವ-ಸಹಾಯ ಎಂಎಸ್ಎಂ ಸಮುದಾಯ ಆಧರಿತ ಸಂಘಟನೆಗಳ ಅಭಿವೃದ್ಧಿಗಾಗಿ ಎನ್ಎಫ್ಐ ಪ್ರಕ್ರಿಯೆಗಳು

- ಸ್ಥಳೀಯ ಪ್ರಮುಖ ವ್ಯಕ್ತಿ /ಯೋಜನಾ ವ್ಯವಸ್ಥಾಪಕ (ಎಲ್ಎಫ್ಪಿ/ ಪಿಎಂ)ಗುರುತಿಸುವಿಕೆ ಮತ್ತು ನೇಮಕ.
- ಸ್ಥಳೀಯ ಪ್ರಮುಖ ವ್ಯಕ್ತಿಯಿಂದ, ಸ್ಥಳೀಯ ಎಂಎಸ್ಎಂ ಜಾಲಗಳಿಂದ ಯೋಜನೆಯ ತರಬೇತಿ ಮತ್ತು ಅಂದಾಜು ಕಾರ್ಯಕ್ರಮಗಳಿಗಾಗಿ ಭಾಗವಹಿಸುವವರ ಗುರುತಿಸುವಿಕೆ ಮತ್ತು ನೇಮಕಾತಿ
- ಕಾರ್ಯಾಗಾರ ಸಾಮಗ್ರಿಗಳ ಸಂಗ್ರಹ ಮತ್ತು ಅಗತ್ಯವಿದ್ದೆಡೆ ಅನುವಾದ
- ಕಾರ್ಯಾಗಾರದ ಸ್ಥಳ ನಿಗದಿ ಮತ್ತು ಏರ್ಪಾಡು
- ಪ್ರಥಮ ಸಾಮಾಜಿಕ ಸಭೆ ಆಯೋಜನೆ
- ಏಳು ದಿನಗಳ ಮಾಪನ ಕಾರ್ಯಾಗಾರ ಆಯೋಜಿಸಿ
- ಕಾರ್ಯಾಗಾರದಲ್ಲಿ ಭಾಗವಹಿಸಿದ 10-15 ಮಾಪನ ತಂಡ ಸದಸ್ಯರ ಗುರುತಿಸುವಿಕೆ ಮತ್ತು ನೇಮಕಾತಿ
- ಅಂದಾಜು ಕಾರ್ಯ ನಡೆಸಲು ಮತ್ತು ಸಾಮಾಜಿಕ ಹಾಗೂ ಸಂಪರ್ಕ ಜಾಲ ಸಭೆ ಸಂಘಟಿಸಲು ತಕ್ಷಣಕ್ಕೆ ಲಭ್ಯವಿರುವ ಕೇಂದ್ರ ಮತ್ತು ಸುರಕ್ಷಿತ ಸ್ಥಳಗಳ ಆಯ್ಕೆ
- ಅಂದಾಜು ಮಾಡುವಿಕೆ
- ಆರಂಭಿಕ ಜಾಲ ಮತ್ತು ಕಾರ್ಯದ ಅನುಷ್ಠಾನ
- ಅಂದಾಜು ಮಾಹಿತಿ ವಿಶ್ಲೇಷಣೆ
- ವರದಿ ಮಂಡನೆ ಮತ್ತು ಪ್ರಸರಣ ಸಭೆ ನಡೆಸುವಿಕೆ
- ರಾಜ್ಯ ಸಂಸ್ಥೆಗಳು ಮತ್ತು ಎನ್‌ಜಿಓಗಳ ಸಲಹಾ ಕಾರ್ಯಗಳು
- ಮಾಪನ ತಂಡದಿಂದ ಎರಡನೇ ತರಬೇತಿ ಕಾರ್ಯಾಗಾರ ಅಭ್ಯರ್ಥಿಗಳ ಗುರುತಿಸುವಿಕೆ
- ಎರಡನೇ ಕಾರ್ಯಾಗಾರ ನಡೆಸುವಿಕೆ
- ನೋಂದಾಯಿತ ಸಂಸ್ಥೆಯಾಗಿ ಸಮೂಹದ ಅಭಿವೃದ್ಧಿ(ಟ್ರಸ್ಟ್ ಅಥವಾ ಸೊಸೈಟಿ ಇತ್ಯಾದಿ)
- ಎರಡನೇ ಕಾರ್ಯಾಗಾರ ಅಭ್ಯರ್ಥಿಗಳಿಂದ ಸಮರ್ಥ ಸಿಬ್ಬಂದಿಯ ಗುರುತಿಸುವಿಕೆ
- ಯೋಜನಾ ಪ್ರಸ್ತಾವನೆ ಅಭಿವೃದ್ಧಿ ಮತ್ತು ಸಲ್ಲಿಕೆ

- ★ ಹಣಕಾಸು ಕ್ರೋಢಿಕರಣ
- ★ ಯೋಜನಾ ಅನುಷ್ಠಾನ
- ★ ಎನ್‌ಎಫ್‌ಐನಿಂದ ತಾಂತ್ರಿಕ ನೆರವು ಮತ್ತು ಬೆಂಬಲ

## ಎಂಎಸ್‌ಎಂ ಸಿಬ್ಬಂದಿ ಲೈಂಗಿಕ ಆರೋಗ್ಯ ಕಾರ್ಯಕ್ರಮ ಅಭಿವೃದ್ಧಿ ಪ್ರಕ್ರಿಯೆ

ಎಚ್‌ಐವಿ/ ಏಡ್ಸ್ ಒಡ್ಡಿರುವ ಸವಾಲುಗಳನ್ನು ಜಗತ್ತಿನ ಎಲ್ಲ ರಾಷ್ಟ್ರಗಳು ಮತ್ತು ಸಮುದಾಯಗಳು ಎದುರಿಸುತ್ತಿವೆ. ಆಫ್ರಿಕಾ ರಾಷ್ಟ್ರಗಳಲ್ಲಂತೂ ಏಡ್ಸ್‌ನಿಂದ ಸಾಯುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳು (ಇತರ ಏಷ್ಯಾ ಪ್ರಾಂತ್ಯಗಳು ಸಹ ) ಈ ಅನಿಯಂತ್ರಿತ ಸೋಂಕು ರೋಗದ ಪ್ರಪಾತದ ಮುಂದೆ ನಿಂತಿವೆ. ಎಚ್‌ಐವಿ ಸೋಂಕಿನ ನಿಯಂತ್ರಣ ಮತ್ತು ನಿರ್ವಹಣೆಗೆ ಪರಿಣಾಮಕಾರಿ ಕಾರ್ಯತಂತ್ರ ರೂಪಿಸುವ ಯಾವುದಾದರೂ ಭರವಸೆ ಇದ್ದರೆ, ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಮತ್ತು ಸಮುದಾಯ ಆಧರಿತ ಸಂಘಟನೆಗಳು ಹಾಗೆಯೇ ಇತರ ಸಂಸ್ಥೆಗಳು ಈ ಸವಾಲನ್ನು ಎದುರಿಸಲು ಒಗ್ಗೂಡಬೇಕಾದದು ಅಗತ್ಯ ಎಂಬುದು ಸ್ಪಷ್ಟ. ಇದರಿಂದ ಸೋಂಕು ಮತ್ತು ಏಡ್ಸ್ ಮಟ್ಟ ಮತ್ತು ಪ್ರಮಾಣವನ್ನು ತಗ್ಗಿಸಲು ಸಾಧ್ಯ. ಎಲ್ಲ ಗಂಡಾಂತರಕಾರಿ ಲೈಂಗಿಕ ನಡವಳಿಕೆ ಮತ್ತು ಪದ್ಧತಿಯನ್ನು ತಡೆಯಲು ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಪರಿಣಾಮಕಾರಿ ಎಚ್‌ಐವಿ ಮತ್ತು ಲೈಂಗಿಕ ರೋಗ ಸೋಂಕು ನಿಯಂತ್ರಣ ಕಾರ್ಯತಂತ್ರ ಅಭಿವೃದ್ಧಿಗೊಳಿಸಬೇಕಾದದು ಏಕೈಕ ಆಶಾಕಿರಣ ಎಂಬುದು ಸ್ಪಷ್ಟವಾಗಿದೆ. ದೇಶದೊಳಗೆ ನಡೆಯುತ್ತಿರುವ ಅನೈತಿಕ ಅಕ್ರಮ ಅಥವಾ ಸಂಸ್ಕೃತಿಗೆ ವಿರುದ್ಧವಾದ ಗಂಡಾಂತರಕಾರಿ ಲೈಂಗಿಕ ಪದ್ಧತಿ ಎಂದು ಬಿಂಬಿತವಾಗಿರಲಿ ಅಥವಾ ಲೈಂಗಿಕ ನಡವಳಿಕೆ ಕಳಂಕವನ್ನಾಗಲಿ ಯಾವುದೇ ರಾಷ್ಟ್ರ ಅದನ್ನು ನಿರ್ಲಕ್ಷಿಸಬಾರದು ಅಥವಾ ಅಲ್ಲಗಳಿಯಬಾರದು. ಇಂಥ ಉಪೇಕ್ಷೆ, ನಿರ್ಲಕ್ಷ್ಯತೆ ಮತ್ತು ಕಳಂಕದಿಂದ ದೇಶಾದ್ಯಂತ ಎಚ್‌ಐವಿ ಸೋಂಕು ತೀವ್ರಗತಿಯಲ್ಲಿ ವ್ಯಾಪಿಸಲು ಪೂರಕ ವಾತಾವರಣ ಸೃಷ್ಟಿಸಿದಂತಾಗುತ್ತದೆ.

ಪುರುಷ -ಪುರುಷರ ನಡುವೆ ಲೈಂಗಿಕತೆ ಮತ್ತು ನಡವಳಿಕೆ ತೀವ್ರ ಆತಂಕಕ್ಕೆ ಎಡೆ ಮಾಡಿಕೊಟ್ಟಿದೆ. ದಕ್ಷಿಣ ಏಷ್ಯಾ ಪ್ರಾಂತ್ಯಾದ್ಯಂತ ಇದನ್ನು ಅಲ್ಲಗಳೆಯುತ್ತಿರುವುದು ಮತ್ತು ಇದರ ಅಗೋಚರತೆ ಇದಕ್ಕೆ ಪ್ರಮುಖ ಕಾರಣವಾಗಿದೆ. ಇಂಥ ನಡವಳಿಕೆಗಳು ಅಸ್ತಿತ್ವದಲ್ಲಿದ್ದು, ಯಾವುದೇ ಲೈಂಗಿಕ ಆರೋಗ್ಯ ಕಾರ್ಯಕ್ರಮ ಇದನ್ನು ನಿರ್ಲಕ್ಷಿಸಿದಲ್ಲಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತಿದೆ.

ನಾಜ್ ಫೌಂಡೇಶನ್ ಇಂಟರ್‌ನ್ಯಾಷನಲ್, ದಕ್ಷಿಣ ಏಷ್ಯಾ ಪ್ರಾಂತ್ಯದ ಅನೇಕ ರಾಷ್ಟ್ರಗಳಲ್ಲಿನ ಜಾಲಗಳು ಮತ್ತು ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷ ಸಮೂಹಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದು, ಇಂಥ ಪುರುಷರು ತಮ್ಮದೇ ಆದ ಎಚ್‌ಐವಿ/ ಏಡ್ಸ್ ನಿಯಂತ್ರಣ ಸೇವಾ ಸಂಸ್ಥೆಗಳನ್ನು ರೂಪಿಸಲು ಅನುವಾಗುವ ಪ್ರಕ್ರಿಯೆಯನ್ನು ಅಭಿವೃದ್ಧಿಗೊಳಿಸಿದೆ. ಸಮುದಾಯ ನಿರ್ಮಾಣ ಪ್ರಕ್ರಿಯೆ ಮತ್ತು ಕ್ರೋಢೀಕರಣ, ತಮ್ಮದೇ ಆದ ಲೈಂಗಿಕ ಆರೋಗ್ಯ ಸೇವೆಗಳನ್ನು ಒದಗಿಸಲು ಮತ್ತು ನಿರ್ವಹಿಸಲು ಎಂಎಸ್‌ಎಂಗಳಿಗೆ ನೆರವಾಗುತ್ತದೆ.

ಈ ಭಾಗವು, ಯಾವುದೇ ಲೈಂಗಿಕ ಆರೋಗ್ಯ ಉತ್ತೇಜನ ಕಾರ್ಯಕ್ರಮಕ್ಕೆ ಅನುಗುಣವಾಗಿ ಪುರುಷ - ಪುರುಷರ ಲೈಂಗಿಕ ನಡವಳಿಕೆಗಳನ್ನು ಪರಿವರ್ತಿಸುವ ಸಮಾಂತರ ಪ್ರಕ್ರಿಯೆಯಾಗಿದೆ. ಎನ್‌ಎಫ್‌ಐ ಎರಡು ಕಾರ್ಯತಂತ್ರಗಳನ್ನು ಪ್ರವರ್ತನಗೊಳಿಸಿದೆ.

1. ಹೋಲಿಕೆಯ ನಡವಳಿಕೆ ಮತ್ತು ಚೌಕಟ್ಟು ಹೊಂದಿರುವ ಇತರರು ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡರೆ ಎಂಎಸ್‌ನಿಂದ ಸಮುದಾಯ ನಿರ್ಮಾಣ ಮತ್ತು ಉಸ್ತುವಾರಿ ಇರಬೇಕು. ಸ್ವತಃ ಲಿಂಗ ಪತ್ತೆ ಮತ್ತು ನಡವಳಿಕೆ ಪ್ರಶ್ನೆಗಳ ಹಂಚಿಕೆ ಪಡೆದರೂ, ಎಂಎಸ್‌ಎಂ ವ್ಯಕ್ತಿಗಳಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಸಮುದಾಯ

ಜಾಲ ಬಳಕೆ ಪ್ರಕ್ರಿಯೆ ಇದ್ದರೂ ಸಮುದಾಯ ನಿರ್ಮಾಣದ ಹೊಣೆ ಇರಬೇಕು. ಇದು 'ಗೆ' ಎಂದು ಗುರುತಿಸಿಕೊಂಡವರೆಗೂ ನೆರವಾಗುತ್ತದೆ.

2. ಸಂತಾನೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯ ಕಾರ್ಯಕ್ರಮಗಳನ್ನು ಉತ್ತೇಜಿಸುತ್ತಾ, ಲೈಂಗಿಕ ಸೋಂಕು ರೋಗ ಚಿಕಿತ್ಸಾ ಕೇಂದ್ರಗಳು ಮತ್ತು ಎಚ್.ಐ.ವಿ/ ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳು ಗುದ ಸಂಭೋಗ(ಪುರುಷರ ನಡುವೆ ಹಾಗೆಯೇ ಪುರುಷ-ಸ್ತ್ರೀಯರ ನಡುವೆ) ನಡವಳಿಕೆಗಳನ್ನು ಶೈಕ್ಷಣಿಕ, ಚಿಕಿತ್ಸಕ ಮತ್ತು ಸೇವೆಗಳಿಗಾಗಿ ಪರಿವರ್ತಿಸಬೇಕು. ಕೋವೆ ಎಂದು ಗುರುತಿಸಿಕೊಂಡು ಪುರುಷ-ಪುರುಷ ಲೈಂಗಿಕರೂ ಸೇರಿದಂತೆ ಲೈಂಗಿಕ ಕ್ರಿಯೆಗಾಗಿ ಇತರ ಪುರುಷರನ್ನು ಹೊಂದುವಂಥ ವ್ಯಕ್ತಿಗಳನ್ನು ಸಾಮಾನ್ಯ ಪುರುಷ ಜನಸಂಖ್ಯೆಯಿಂದ ಗುರುತಿಸಲು ಇದರಿಂದ ಸಾಧ್ಯವಾಗುತ್ತದೆ.

ಈ ದಾಖಲೆಯು ಹಿಂದಿನ ಕಾರ್ಯತಂತ್ರವನ್ನು ಒಳಗೊಂಡಿದ್ದು, ಲೈಂಗಿಕ ರೋಗ ಸೋಂಕು/ಎಚ್ಐವಿ ಮತ್ತು ಏಡ್ಸ್‌ನ ನಿಯಂತ್ರಣ ಮತ್ತು ಚಿಕಿತ್ಸೆಗಾಗಿ ಸಮುದಾಯ ಆಧಾರಿತ ರೂಪುರೇಷೆಗಳನ್ನು ರೂಪಿಸುವತ್ತ 'ಕೋವೆ' ಗಳೊಂದಿಗೆ ಪ್ರಾಥಮಿಕವಾಗಿ ಕಾರ್ಯನಿರ್ವಹಿಸಿದೆ. ದಕ್ಷಿಣ ಏಷ್ಯಾದಲ್ಲಿ ಹಲವಾರು ಸಮುದಾಯ -ಆಧರಿತ ಕೋವೆ ಲೈಂಗಿಕ ಆರೋಗ್ಯ ಯೋಜನೆಗಳಿಗೆ ತಾಂತ್ರಿಕ ನೆರವು ಒದಗಿಸಿದ ಅನೇಕ ವರ್ಷಗಳ ಕಾರ್ಯ ಅನುಭವದಿಂದ ಈ ಅಭಿವೃದ್ಧಿ ಪ್ರಕ್ರಿಯೆ ಹುಟ್ಟುಕೊಂಡಿದೆ.

## ಕಾರ್ಯತಂತ್ರದ ಗುರಿ

ದಕ್ಷಿಣ ಏಷ್ಯಾದಲ್ಲಿ ಎಂಎಸ್ಎಂ ಮತ್ತು ಇತರ ಲೈಂಗಿಕ ಸಂಗಾತಿಗಳಲ್ಲಿ ಲೈಂಗಿಕ ರೋಗ ಸೋಂಕು/ ಎಚ್ಐವಿ ಸೋಂಕಿನ ಆಪಾಯ ಕಡಿಮೆ ಮಾಡುವುದು ಹಾಗೂ ಲೈಂಗಿಕ ರೋಗ ಸೋಂಕು /ಎಚ್ಐವಿ ಮತ್ತು ಏಡ್ಸ್ ರಕ್ಷಣೆ ಮತ್ತು ಬೆಂಬಲ ಸೇವೆಗಳು ಸೂಕ್ತವಾಗಿ ಲಭಿಸುವಂತೆ ಮಾಡುವುದು.

## ಈ ಕಾರ್ಯತಂತ್ರದ ಉದ್ದೇಶ

ಸ್ವ ಸಹಾಯ ಸಂಘಟನೆ ಮೂಲಕ ತಮ್ಮದೇ ಆದ ಲೈಂಗಿಕ ಆರೋಗ್ಯ ಮತ್ತು ಕಲ್ಯಾಣ ಸೇವೆಗಳನ್ನು ಅಭಿವೃದ್ಧಿಗೊಳಿಸಲು ಎಂಎಸ್ಎಂಗಳನ್ನು ಸಶಕ್ತಗೊಳಿಸುವುದು.

ನಂಬಿಕೆ: ಪುರುಷ -ಪುರುಷ ಲೈಂಗಿಕರಲ್ಲಿ ಸುರಕ್ಷಿತ ಲೈಂಗಿಕ ಅಭ್ಯಾಸವನ್ನು ಪ್ರೋತ್ಸಾಹಿಸಬೇಕು ಮತ್ತು ನಿರ್ವಹಿಸಬೇಕೆಂಬುದರಲ್ಲಿ ಎನ್ಎಫ್ಐಗೆ ನಂಬಿಕೆ ಇದೆ. ಈ ಗುರಿ ಸಾಧನೆಗಾಗಿ ನಾವು ಸುರಕ್ಷಿತ ಲೈಂಗಿಕ ವಿಧಾನವನ್ನು ಸಮುದಾಯ ಮಾದರಿಯನ್ನಾಗಿ ಅಳವಡಿಸಿಕೊಳ್ಳುವ ಅಗತ್ಯವಿದೆ. ಇಂಥ ಸುರಕ್ಷಿತ ಲೈಂಗಿಕ ವಿಧಾನಗಳ ಉತ್ತೇಜನ ಮತ್ತು ಅಳವಡಿಕೆಗಾಗಿ ಪುರುಷ -ಪುರುಷಲೈಂಗಿಕ ಸಮುದಾಯ ಸಕ್ರಿಯವಾಗಿ ಭಾಗವಹಿಸುವ ಅಗತ್ಯವಿದೆ. ಇದು ಕಾರ್ಯರೂಪಕ್ಕೆ ಬರಬೇಕಾದರೆ ಎಂಎಸ್ಎಂ ಸಮುದಾಯದ ಸ್ಪಷ್ಟ ಗುರುತು ಮತ್ತು ಅವರನ್ನು ತಲುಪಬೇಕಿದೆ. ಆದರೆ ಈ ಕೆಲಸ ಆಗುತ್ತಿಲ್ಲ. ಆದಾಗ್ಯೂ ವಿವಿಧ ಸ್ಥಳಗಳಲ್ಲಿ ಚಾಲ್ತಿಯಲ್ಲಿರುವ ಲೈಂಗಿಕ ಮತ್ತು ಸಾಮಾಜಿಕ ಜಾಲಗಳು ಅಸ್ತಿತ್ವದಲ್ಲಿದ್ದರೂ, ಇವುಗಳನ್ನು ಸಮುದಾಯ ನಿರ್ಮಾಣಕಾಗಿ ಅಗತ್ಯ ಭಾಗಗಳನ್ನಾಗಿ ಬಳಸಿಕೊಳ್ಳಬೇಕು. ಇಂಥ ಸಮುದಾಯ ಸ್ಥಳ, ಉದ್ಯೋಗ, ಜಾತಿ ಅಥವಾ ಧರ್ಮದ ಮೇಲೆ ತುಂಬಾ ಅವಲಂಬಿಸಬಾರದು. ಆದರೆ ಅನನ್ಯತೆ ಗುರುತಿಸುವಿಕೆ ಮೂಲಕ ಸಮುದಾಯ ರೂಪುಗೊಳ್ಳಬೇಕು.

## ಸಮುದಾಯ ನಿರ್ಮಾಣ

ಹಾಗಾದರೆ ಯಾವ ರೀತಿಯ ಸಮುದಾಯದ ಅಗತ್ಯವಿದೆ? ಯಾವ ಆಧಾರದ ಮೇಲೆ ಕಾಲ್ಪನಿಕ ಸಮುದಾಯ ರೂಪುಗೊಳ್ಳುತ್ತದೆ? ಇಂಥ ಸಮುದಾಯ ಅಭಿವೃದ್ಧಿಯಾಗುತ್ತದೆಯೇ? ಇಂಥ ಸಮುದಾಯದಲ್ಲಿ ಜನರು ಏನನ್ನು ಹಂಚಿಕೊಳ್ಳುತ್ತಾರೆ?

## ಎರಡನೇ ಹಂತ : ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರ ಲೈಂಗಿಕ ಆರೋಗ್ಯ ಯೋಜನೆ

ದಕ್ಷಿಣ ಏಷ್ಯಾದಲ್ಲಿನ ಪುರುಷ -ಪುರುಷರ ಲೈಂಗಿಕ ಪರಿಸರವನ್ನು ಈ ಹಿಂದೆ ಉಲ್ಲೇಖಿಸಲಾಗಿದೆ. ಪುರುಷ-ಪುರುಷ ನಡುವಣ ಲೈಂಗಿಕ ನಡವಳಿಕೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಡೆಸಲಾಗುವ ಲೈಂಗಿಕ ಆರೋಗ್ಯ ಯೋಜನೆಗಳಿಂದಲೇ ಅಸ್ತಿತ್ವಕ್ಕೆ ಬರುವ ಸಮೂಹಗಳು ಇಂಥ ಸಮುದಾಯವನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ಕೆ ಸಮರ್ಥವಾಗಬಹುದು. ಕೋವೆ ಎಂದು ಸ್ವಯಂ ಗುರುತಿಸಿಕೊಂಡ 'ಗೇ'ಗಳಿಗೆ ಸಂಬಂಧಿಸಿದ ವಿಚಾರಗಳನ್ನು ಅನ್ವೇಷಿಸುತ್ತದೆ. ಆದಾಗ್ಯೂ ಮುಖ್ಯವಾಗಿ ಕೋವೆಗಳೆಂದು ಗುರುತಿಸಿಕೊಂಡವರು ಸಾಮಾನ್ಯವಾಗಿ ಸಮುದಾಯವನ್ನು ರೂಪಿಸಿಕೊಳ್ಳುವುದಿಲ್ಲ.

ದಕ್ಷಿಣ ಏಷ್ಯಾದಲ್ಲಿ ಸ್ಥಳ ಮತ್ತು ಲೈಂಗಿಕ ಚಟುವಟಿಕೆ ನಡೆಯುವ ಬಡಾವಣೆಗಳ ಆಧಾರದ ಮೇಲೆ 'ಕೋವೆ'ಗಳು ಪುಟ್ಟ ಸಾಮಾಜಿಕ /ಸ್ನೇಹ ವೈಯಕ್ತಿಕ ಜಾಲದೊಳಗಿರುತ್ತಾರೆ. ಜಾಲಗಳು ಒಂದರ ಮೇಲೊಂದು ಸೇರಬಹುದು. ಒಂದು ಜಾಲದ ಸದಸ್ಯರು ಇನ್ನೊಂದು ಜಾಲಕ್ಕೆ ಸೇರಿದ ಸದಸ್ಯರೊಂದಿಗೆ ಕೂಡಿಕೊಂಡಿರಬಹುದು.

ಕೋವೆಗಳಿಗೆ ಸ್ತ್ರೀ ರೂಪದ ಮತ್ತು ಶಿಶ್ನತೂರಿಸಿಕೊಳ್ಳುವಿಕೆಯ ಆಸಕ್ತಿಹೊಂದಿದ ಪುರುಷರೆಂಬ ಕಳಂಕ ಹಚ್ಚಲಾಗಿದೆ. ಅವರನ್ನು ಪುರುಷ ಅಥವಾ ಸ್ತ್ರೀಯನ್ನಾಗಿ ಪರಿಗಣಿಸುವುದಿಲ್ಲ. ಅನೇಕ ವಿಧದಲ್ಲಿ ಇವರನ್ನು ಪುರುಷನಲ್ಲದ /ಸ್ತ್ರೀಯರಲ್ಲದ ಲಿಂಗವಾಗಿ ಪರಿಗಣಿಸಲಾಗುತ್ತದೆ. ಇಂಥ ಗುಣಲಕ್ಷಣಗಳಿಂದಾಗಿ ಇವರು ತಮ್ಮನ್ನು ಯಾವುದೇ ಲಿಂಗದವರಲ್ಲ ಎಂದು ಗುರುತಿಸಿಕೊಳ್ಳುತ್ತಾರೆ. ಇವರು ಪರಸ್ಪರರನ್ನು ಬಯಕೆ ನಡವಳಿಕೆ ಮತ್ತು ಲೈಂಗಿಕತೆ ಗುಣಗಳಿಂದ ಸಹ ಗುರುತಿಸಿಕೊಳ್ಳುತ್ತಾರೆ. ಆದರೂ ಅನೇಕ ಕೋವೆ ತಮ್ಮ ಈ ಲಿಂಗಪಾತ್ರ ಮತ್ತು ಅಭ್ಯಾಸವನ್ನು ಒಂದು ಸ್ಥಳಕ್ಕೆ ಮಾತ್ರ ಸೀಮಿತಗೊಳಿಸುತ್ತಾರೆ ಎಂಬುದು ಇಲ್ಲಿ ಗಮನಿಸಬೇಕಾದ ಸಂಗತಿ. ಇವರು ಈ ಕ್ರಿಯೆಯನ್ನು ಇತರ ಸನ್ನಿವೇಶ ಮತ್ತು ಸ್ಥಳಗಳಲ್ಲಿ ಮುಂದುವರಿಸುವುದಿಲ್ಲ. ಉದಾಹರಣೆಗೆ ಮನೆಯಲ್ಲಿದ್ದಾಗ, ಪತ್ನಿ ಜೊತೆಯಲ್ಲಿದ್ದಾಗ, ಕೆಲಸದಲ್ಲಿ ನಿರತರಾಗಿದ್ದಾಗ ಇತ್ಯಾದಿ....

ದಕ್ಷಿಣ ಏಷ್ಯದಲ್ಲಿನ ಪ್ರಾಥಮಿಕ ಸಮುದಾಯ ಚೌಕಟ್ಟು ಮತ್ತು ಸಾಮಾಜಿಕ ಪರಿಸ್ಥಿತಿಯು ಕುಟುಂಬ (ಅವಿಭಕ್ತ ಮತ್ತು ವಿಸ್ತರಿತ ಕುಟುಂಬ ವ್ಯವಸ್ಥೆ) ಗ್ರಾಮೀಣ ಮೂಲ ಅಂದರೆ ಗ್ರಾಮ ಅನುಭವಗಳ ಹಂಚಿಕೆ. ಸ್ಥಳ (ವಾಸಿಸುವಿಕೆ) ವೃತ್ತಿ(ಟ್ರಕ್ ಚಾಲಕ, ಆಟೋರಿಕ್ಷಾ ಚಾಲಕ, ವಿದ್ಯಾರ್ಥಿ ಇತ್ಯಾದಿ) ಹಾಗೂ ವಿವಾಹ ಮತ್ತು ಮಕ್ಕಳ ಸುತ್ತವೇ ಸುತ್ತುವುದರಿಂದ ಸಮುದಾಯ ನಿರ್ಮಾಣಕ್ಕೆ ಆಧಾರವಾಗಿ ನಡವಳಿಕೆ ಗುಣಗಳನ್ನು ಹಂಚಿಕೊಳ್ಳುವುದು ಸವಾಲಾಗಿ ಪರಿಣಮಿಸಿದೆ.

ಕೋವೆಗಳು ಪುರುಷ -ಪುರುಷ ನಡುವಣ ಲೈಂಗಿಕ ಕ್ರಿಯೆಯಿಂದಾಗಿ ಸೋಂಕು ಮತ್ತು ಲೈಂಗಿಕ ರೋಗಕ್ಕೆ ಸುಲಭವಾಗಿ ತುತ್ತಾಗುತ್ತಾರೆ. ಬಹುಜನರೊಂದಿಗೆ ಲೈಂಗಿಕ ಸಂಪರ್ಕ, ಬಹು ಸಂಗಾತಿಗಳು, ಲೈಂಗಿಕ ಕ್ರಿಯೆ ಸಂದರ್ಭದಲ್ಲಿ ಸಂಗಾತಿಗಳ ನಡುವೆ ತೀರಾ ಕಡಿಮೆ ಕಾಂಡೋಮ್ ಬಳಕೆ, ಲೈಂಗಿಕ ಜ್ಞಾನದ ಕೊರತೆ, ಲೈಂಗಿಕ ಸೋಂಕು ರೋಗ ಚಿಕಿತ್ಸಾ ಸೇವೆಗಳ ಅಲಭ್ಯತೆ, ಗುದದ್ವಾದಲ್ಲಿ ವಿಪರೀತ ರಕ್ತಸ್ರಾವ ಮತ್ತು ಲೈಂಗಿಕ ಕ್ರಿಯೆಗೆ ಕಡಿಮೆ ಲೂಬ್ರಿಕೆಂಟ್ (ಜಾರು ದ್ರವದ )ಬಳಕೆ (ಲಾವಾ ರಸ ಹೊರತುಪಡಿಸಿ) ಇದಕ್ಕೆ ಕಾರಣ. ಇದಲ್ಲದೇ ಬಹುತೇಕ ಕೋವೆಗಳು ತಮ್ಮ ಸಂಗಾತಿಗಳಂತೆ ಸಾಮಾಜಿಕ ಅಗತ್ಯಕ್ಕಾಗಿ ಮದುವೆಯಾಗಿ ಮಕ್ಕಳನ್ನು ಪಡೆಯುತ್ತಾರೆ.

ಸಮುದಾಯ ನಿರ್ಮಾಣ ಮತ್ತು ಅಭಿವೃದ್ಧಿ ವಿಷಯದಲ್ಲಿ ಹೇಳುವುದಾದರೆ ಕೋವೆಗಳಿಗೆ ತಮ್ಮ ಲೈಂಗಿಕ ನಡವಳಿಕೆ ವಿಧಾನಗಳನ್ನು ಬದಲಿಸಿಕೊಳ್ಳಲು ಉತ್ತಮ ಪರಿಣಾಮಕಾರಿ ಅವಕಾಶವಿದೆ. ಅವರ ಲೈಂಗಿಕ ಆಯ್ಕೆಗಳು ವಿವಿಧ ಸಾಮಾಜಿಕ -ವೃತ್ತಿನಿರತ ಸಮುದಾಯ ಮತ್ತು ಸಮಾಜದ ಒಂದು ಭಾಗದ ಇತರ ಪುರುಷರು -'ಪಂಥಿ'ಗಳನ್ನು ತಲುಪಲು ಸಾಧ್ಯವಾಗುತ್ತದೆ. ಅವರು ಈಗಾಗಲೇ ನಡವಳಿಕೆ ಮತ್ತು ಗುರುತಿಸಲ್ಪಟ್ಟ ಸಾಮಾಜಿಕ ಚೌಕಟ್ಟಿನೊಳಗೆ ಸೇರಿಕೊಂಡಿರುತ್ತಾರೆ. ಅವರ ಹಂಚಿಕೊಳ್ಳುವ ಗುಣಗಳು

ಸಮುದಾಯ ನಿರ್ಮಾಣಕ್ಕೆ ಆಧಾರವಾಗುತ್ತದೆ. ಗುರುತಿಸಲ್ಪಡದ ಪುರುಷ ಲೈಂಗಿಕ ಶಿಶ್ನತೂರಿಸುವ ಗಂಡಿಗೆ ಸುರಕ್ಷಿತ ಲೈಂಗಿಕ ನಡವಳಿಕೆಗಳನ್ನು ಹೊಂದುವ ಬಗ್ಗೆ ಉತ್ತೇಜಿಸುವ ಉತ್ತಮ ಮಾರ್ಗ ಎಂದರೆ ವೃತ್ತಿದಾಯಕ ಮತ್ತು ನೆರೆಹೊರೆ ಕಾರ್ಯತಂತ್ರದ ಮೂಲಕ ಅವರನ್ನು ಎಚ್‌ಐವಿ/ ಏಡ್ಸ್ ಜಾಗೃತಿ ಮೂಡಿಸಲು ಸಮುದಾಯ/ ಕಸುಬು ಆಧಾರಿತ ವಿಧಾನದೊಂದಿಗೆ ಕಾರ್ಯನಿರ್ವಹಿಸುವ ಎನ್‌ಜಿಓಗಳು, ಗುದ ಸಂಭೋಗ ನಡವಳಿಕೆ ಮತ್ತು ಅವರಲ್ಲಿನ ನೀತಿ ಹಾಗೂ ಅಭ್ಯಾಸಗಳ ಗಂಡಾಂತರಗಳನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕು. ಅವರು ಟ್ರಕ್ ಚಾಲಕರಾಗಿರಲಿ, ರಿಕ್ಷಾ ಚಾಲಕರಾಗಿರಲಿ, ಯುವಕರಾಗಿರಲಿ, ಶಾಲೆ, ಕಾಲೇಜು ಕೊಳಗೇರಿ, ಕಡಿಮೆ ಆದಾಯದ ಪಂಗಪಗಳಾಗಿರಲಿ ಈ ಬಗ್ಗೆ ತಿಳುವಳಿಕೆ ನೀಡುವುದು ಅಗತ್ಯ.

## ಅಭಿವೃದ್ಧಿ

ಸಮುದಾಯ ಮಾನ್ಯತೆ ಕೋವೆಗಳ ಜಾಲಗಳ ಸಂಪರ್ಕ ಮತ್ತುಜಾಲಗಳ ಕ್ರಮಬದ್ಧ ಜಾಲದ ಅಭಿವೃದ್ಧಿಗಾಗಿ ಉಪಯೋಗವಾಗುವ ಅಂಶಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಸುರಕ್ಷಿತ ಲೈಂಗಿಕ ಮತ್ತು ಲೈಂಗಿಕ ಸೋಂಕು ರೋಗ ಚಿಕಿತ್ಸೆಗೆ ಪೂರಕವಾಗಿ ಸಾಮಾನ್ಯ ಸಮುದಾಯ ನಡವಳಿಕೆ ಮತ್ತು ಅಭ್ಯಾಸಗಳಿಗೆ ಉತ್ತೇಜನ ನೀಡುವ ವಿಧಾನಗಳಿವು.

### ಹಂತ ಒಂದು

### ಆರಂಭಿಕ ಸಮುದಾಯ ಜಾಲ ಸ್ಥಾಪನೆ:

ಮೇಲೆ ಹೇಳಿದಂತೆ 'ಸಾರ್ವಜನಿಕ' 'ಕೋವೆ'ಗಳು ಪ್ರತ್ಯೇಕ ಬಡಾವಣೆಗಳು ಮತ್ತು ಸಾರ್ವಜನಿಕ ಲೈಂಗಿಕ ಪರಿಸರ ಸ್ಥಳಗಳಲ್ಲಿ ಪುಟ್ಟ ಸ್ನೇಹ ಜಾಲವನ್ನು ರೂಪಿಸಿಕೊಂಡಿರುತ್ತಾರೆ. ಇದು ಪರಸ್ಪರ ಸೇರುವ ಜಾಗ ಮತ್ತು ಲೈಂಗಿಕ ಚಟುವಟಿಕೆ ನಡೆಯುವ ಸ್ಥಳವಾಗಿರುತ್ತದೆ.

ಯೋಜನೆ ಕೈಗೊಳ್ಳುವುದಕ್ಕೂ ಮುನ್ನ ಇಂತಹ ಸ್ಥಳ ಕಾರ್ಯ ನಿರ್ವಹಿಸುವ ಪ್ರದೇಶಗಳು ಮತ್ತು ಜಾಲವನ್ನು ಗುರುತಿಸುವುದು ಅಗತ್ಯ.

ಜಾಲದಿಂದ ಸೂಕ್ತ ಮತ್ತು ಆಸಕ್ತ ಕೋವೆಗಳ ಸಣ್ಣ ಗುಂಪನ್ನು ಮೊದಲು ನೇಮಕ ಮಾಡಿಕೊಳ್ಳಬೇಕು ನಂತರ ತರಬೇತಿ ಕಾರ್ಯಕ್ರಮ ನೀಡಬೇಕು ಅವುಗಳೆಂದರೆ:-

- ★ ಲೈಂಗಿಕ ಸೋಂಕು ರೋಗ/ ಎಚ್‌ಐವಿ/ಏಡ್ಸ್ ಜಾಗೃತಿ
- ★ ಲೈಂಗಿಕ ಆರೋಗ್ಯ
- ★ ಮಾನೋ ಲೈಂಗಿಕ ವಿಷಯಗಳು
- ★ ನಡವಳಿಕೆ ಹಾಗೂ ಜನಾಂಗೀಯ ಮಾಪನ ತಾಂತ್ರಿಕತೆ ಹಾಗೂ ವಿಧಾನಗಳು

ಲೈಂಗಿಕ ಆರೋಗ್ಯ ಯೋಜನೆಗಾಗಿ ಉದ್ದೇಶಿತ ಕ್ಷೇತ್ರದಲ್ಲಿ ನಡವಳಿಕೆ ಮತ್ತು ಜನಾಂಗೀಯ ವರ್ಣನೆ ವಿಧಾನಗಳನ್ನು ತಿಳಿಯಲು ಸಣ್ಣ ತಂಡವನ್ನು ಅಭಿವೃದ್ಧಿಗೊಳಿಸಿ ಈ ಉದ್ದೇಶಕ್ಕೆ ಬಳಸಿಕೊಳ್ಳಬೇಕು. ಈ ತಂಡವು ಕೇಂದ್ರದ ಒಂದು ಭಾಗವಾಗಿ ಕಾರ್ಯನಿರ್ವಹಿಸಲಿದ್ದು, ಈ ಉದ್ದೇಶಕ್ಕಾಗಿ ವಿಶೇಷವಾಗಿ ಅಭಿವೃದ್ಧಿಗೊಳಿಸಲಾಗಿದೆ. ಇದನ್ನು ಅವರೇ ನಿರ್ವಹಿಸುತ್ತಾರೆ. ಇವರು ನಿರ್ದಿಷ್ಟ ಬಡಾವಣೆ (ಪಟ್ಟಣ ಅಥವಾ ನಗರದ ಪ್ರದೇಶ) ಗುರುತಿಸುತ್ತಾರೆ. ಅಸ್ತಿತ್ವದಲ್ಲಿರುವ ಸಾಮಾಜಿಕ ಜಾಲದೊಂದಿಗೆ ಸಂಪರ್ಕ, ನಡವಳಿಕೆ ಮತ್ತು ಜನಾಂಗೀಯ ಸಮೀಕ್ಷೆ, ಲೈಂಗಿಕ ಸ್ಥಳಗಳನ್ನು ಗುರುತಿಸುವಿಕೆ ಮತ್ತು ಯಾವುದೇ ಸೂಕ್ತ ಲೈಂಗಿಕ ಸೋಂಕು ರೋಗ ಚಿಕಿತ್ಸಾ ಸೇವೆಗಳನ್ನು ನಿರ್ವಹಿಸುತ್ತಾರೆ. ಯೋಜನೆಯ ಕಾರ್ಯರೂಪಕ್ಕೆ ಅಗತ್ಯವಾದ ಒಮ್ಮತ ಮೂಡಿಸಲು ಅಸ್ತಿತ್ವದಲ್ಲಿರುವ ಎಚ್‌ಐವಿ/ ಏಡ್ಸ್ ಎನ್‌ಜಿಓಗಳು, ಸರ್ಕಾರಿ ಸಂಸ್ಥೆಗಳು ಮತ್ತು ಇತರ ಆಸಕ್ತಿ ವ್ಯಕ್ತಿಗಳ ಜೊತೆ ಸಂಪರ್ಕ ಸಾಧಿಸಲಾಗುತ್ತದೆ. ಕೋವೆ ಜಾಲದ ವ್ಯಕ್ತಿಗಳು ಮತ್ತು

ಸಮೂಹಗಳ ಸಭೆಗಳನ್ನು ನಡೆಸಲು ಕೇಂದ್ರ ಬಿಂದುವಾಗಿ ಮತ್ತು ಈ ಅವಧಿಯಲ್ಲಿ ಸಂಪರ್ಕ ಸೇತುವಾಗಿ ಪರಿಗಣಿಸಲಾಗುತ್ತದೆ. ಇದು ನಗರ/ಪಟ್ಟಣಾದ್ಯಂತ ಅರಿವು ಮೂಡಿಸಲು ನೆರವಾಗುತ್ತದೆ. ಸಂಭವನೀಯ ಯೋಜನೆಯು ಕಾರ್ಯರೂಪಕ್ಕೆ ಬರಬೇಕಾದರೆ ನಿರ್ದಿಷ್ಟ ಪ್ರದೇಶವನ್ನು ತಲುಪುವುದು ಅಗತ್ಯ. ಈ ಪ್ರಕ್ರಿಯೆಯಲ್ಲಿ ಇಂಥ ಕೇಂದ್ರಗಳ ಹುಡುಕಾಟ ಕಷ್ಟಕರ.

ಪಟ್ಟಣ ಮತ್ತು ನಗರದಲ್ಲಿನ ಪುರುಷ-ಪುರುಷ ಲೈಂಗಿಕ ವಿವರ ಸಂಗ್ರಹಕ್ಕೆ ಇಂಥ ಕಾರ್ಯಗಳು ತೀರಾ ಅಗತ್ಯ. ಕೋವೆ ತಂಡದಿಂದ ಸ್ನೇಹ ಮತ್ತು ಮಾನ್ಯತೆ ಗಳಿಸಲು ವಿವರ ಸಂಗ್ರಹಿಸುವಿಕೆ ಮತ್ತೊಂದು ಮೂಲ ಕಾರಣ.

## ಎರಡನೇ ಹಂತ

ಮಾಪನ ವಿಶ್ಲೇಷಣೆ ನಂತರ ತಂಡ(ಪ್ರಕ್ರಿಯೆಗಳ ಮೂಲಕ ಗುರುತಿಸಲಾದ ಹೆಚ್ಚುವರಿ ಸದಸ್ಯರು) ಎರಡನೇ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತದೆ. ಈ ಕಾರ್ಯಕ್ರಮ ಕೆಳಗಿನವುಗಳನ್ನು ಒಳಗೊಂಡಿದೆ.

★ ಸಮುದಾಯ ಆಧರಿತ ಲೈಂಗಿಕ ಆರೋಗ್ಯ ಪ್ರವರ್ತನ ಕಾರ್ಯಕ್ರಮ ವಿನ್ಯಾಸ

★ ಸೇವಾ ಅಭಿವೃದ್ಧಿ ಮತ್ತು ನಿರ್ವಹಣಾ ಕೌಶಲ್ಯಗಳು

★ ಆಯವ್ಯ ಮತ್ತು ಹಣಕಾಸು ನಿರ್ವಹಣೆ

★ ಉಸ್ತುವಾರಿ ಮತ್ತು ಮೌಲ್ಯ ಮಾಪನ

★ ಯೋಜನಾ ವಿನ್ಯಾಸ

ಇವುಗಳ ಅನುಷ್ಠಾನ ಮತ್ತು ನಿರ್ವಹಣೆಗಾಗಿ ಪ್ರಸ್ತಾವನೆಯೊಂದನ್ನು ಅಭಿವೃದ್ಧಿಗೊಳಿಸಿದ್ದು, ಹಣಕಾಸನ್ನು ಕ್ರೋಢೀಕರಿಸಲಾಗಿದೆ.

-ನಾಜ್ ಫೌಂಡೇಷನ್ ಇಂಟರ್ ನ್ಯಾಷನಲ್

## ಪುರುಷ ಪುರುಷ ಲೈಂಗಿಕರಿಗಾಗಿ ಲೈಂಗಿಕ ಆರೋಗ್ಯ ಪ್ರವರ್ತನ ಸೇವೆ ಅನುಷ್ಠಾನ

ಯಾವುದೇ ಯೋಜನೆ ಸಮುದಾಯ ಆಧಂತ ಯೋಜನೆಯಾಗಬೇಕಾದರೆ ಕೊವೆಗಳು ಯೋಜನೆಯನ್ನು ಸ್ವಂತದ್ದಾಗಿ ನಿರ್ವಹಿಸಿ ಸೇವೆಗಳನ್ನು ಉಪಯೋಗಿಸಿಕೊಳ್ಳಬೇಕು. ಇಂಥ ಯೋಜನೆಗಳು ಬೇರುಮಟ್ಟದಿಂದ ಹೊರಹೊಮ್ಮಿ ಫಲಾನುಭವಿಗಳ ನೇತೃತ್ವ ಹೊಂದಿರಬೇಕು. ಬಾಹ್ಯಲಿಂಗವೆಂದು ಪರಿಗಣಿತವಾಗುವ ಒಂದೇ ಒಂದು ಅಂಶವೆಂದರೆ ತಾಂತ್ರಿಕ ಸಹಕಾರ.

ಪರಿಸ್ಥಿತಿ ವಿಶ್ಲೇಷಣೆ ಪ್ರಕ್ರಿಯೆ ನಡೆಸುವುದರಿಂದ ಸಮುದಾಯ ನಿರ್ಮಾಣಕ್ಕೆ ಪುಷ್ಠಿ ಒದಗಿಸುತ್ತದೆ. ಇದರಿಂದಾಗಿ ಕೋವೆಗಳು ತಂಗುದಾಣಗಳನ್ನು ಬಳಸಲು ಪರಸ್ಪರ ಭೇಟಿ ಮಾಡಲು ವಿಸ್ತೃತ ಜಾಲ ರೂಪಿಸಿಕೊಳ್ಳಲು ಹಾಗೂ ಲೈಂಗಿಕ ಆರೋಗ್ಯ ಮಾಹಿತಿ ಮತ್ತು ಸಲಹೆ ಪಡೆಯಲು ಅನುಕೂಲವಾಗುತ್ತದೆ.

ದಕ್ಷಿಣ ಏಷ್ಯಾದಲ್ಲಿ ಇಂಥ ಹಲವಾರು ಯೋಜನೆಗಳ ಅಭಿವೃದ್ಧಿಯ ಅನುಭವದ ಮೂಲಕ ಇಂಥ ಸೇವೆಗಳು ಮೂರು ಮುಖ್ಯ ಅಂಶಗಳನ್ನು ಒಳಗೊಂಡಿರಬೇಕು.

### 1. ಕ್ಷೇತ್ರ ಸೇವೆಗಳು(ತಲುಪಲಾಗದ /ಜಾಲ)

ಕೋವೆ ಜಾಲದಿಂದ ಕರೆತರಲಾದ ತರಬೇತುಪಡೆದ ಪೂರ್ಣಕಾಲಿಕ ಸಿಬ್ಬಂದಿಗೆ (ಕ್ಷೇತ್ರಾಧಿಕಾರಿಗಳು/ ಮೇಲ್ವಿಚಾರಕರು) ನಿರ್ದಿಷ್ಟ ಕ್ಷೇತ್ರಗಳಲ್ಲಿ (ಮುಂದುವರಿಕೆ ಆಧಾರದ ಮೇಲೆ ಸಾಮಾನ್ಯವಾಗಿ ಒಬ್ಬರು ಅಥವಾ ಇಬ್ಬರಿಗೆ) ಕಾರ್ಯ ನಿರ್ಮಿಸಲಪ ಕೆಲಸಗಳನ್ನು ಒದಗಿಸಬೇಕು. ಇವರು ತಂಡದ ಮುಖಂಡರಂತೆ

ಕಾರ್ಯನಿರ್ವಹಿಸುತ್ತಾರೆ ಹಾಗೂ ಮೈತ್ರಿ ತಂಡ ಎಂದೂ ಕರೆಯಲಾಗುತ್ತದೆ ಅಗತ್ಯವಾದ ಸೇವೆಗಳನ್ನು ಒದಗಿಸುತ್ತಾರೆ. ಇಂಥ ಸೇವೆಗಳು ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುತ್ತದೆ.

ಗೆಳತನ ನಿರ್ಮಾಣ ಮತ್ತು ಕ್ಷೇತ್ರದಲ್ಲಿ ಬಾಗವಹಿಸುವವರ ಜಾಲ ನಿರ್ಮಾಣ ಇದರಲ್ಲಿ ಕೋವೆಗಳು ಅವರ ಲೈಂಗಿಕ ಸಂಗಾತಿಗಳು ಹಾಗೂ ಇತರು (ಉದಾಹರಣೆಗೆ ಟೀ-ಅಂಗಡಿಯವರು, ರಿಕ್ಷಾ ಚಾಲಕರು ಇತ್ಯಾದಿ) ಸೇರಿರುತ್ತಾರೆ.

- ★ ಎಸ್‌ಟಿಐ/ಎಚ್‌ಐವಿ/ಏಡ್ಸ್ ಮಾಹಿತಿ ಮತ್ತು ಶಿಕ್ಷಣ
- ★ ಕಾಂಡೋಮ್ (ಮತ್ತು ಅಗತ್ಯವಿದ್ದೆಡೆ ಲೂಬ್ರಿಕೆಂಟ್) ವಿತರಣೆ ಮತ್ತು ಪ್ರಾತ್ಯಕ್ಷಿಕೆ
- ★ ಮನೋಲೈಂಗಿಕ ಸಲಹೆ, ಮಾಹಿತಿ ಮತ್ತು ಸಮಾಲೋಚನೆ
- ★ ಅಗತ್ಯವಿದ್ದೆಡೆ ಚಿಕಿತ್ಸಾ ಸೇವೆ ಮತ್ತು ತಂಗುದಾಣ ಭೇಟಿಗೆ ಶಿಫಾರಸು ಮೈತ್ರಿ ತಂಡ ಇವರನ್ನು ಒಳಗೊಳ್ಳುತ್ತದೆ.

## ಕ್ಷೇತ್ರ ಗೆಳೆಯರು/ ದೋಸ್ತ್‌ಗಳು(ಸ್ಥಳಗೆಳೆಯರು/ ಸ್ಥಳೀಯ ಆಪ್ತರು)

ಈ ವ್ಯಕ್ತಿಗಳು ನಿರ್ದಿಷ್ಟ ಕ್ಷೇತ್ರದಲ್ಲಿ ಕೋವೆಗಳೆಂದೇ ಕರೆಯಲ್ಪಡುತ್ತಾರೆ. ಇವರು ಲೈಂಗಿಕ ಕಾರ್ಯಕರ್ತರಾಗಿರಬಹುದು ಅಥವಾ ಅಲ್ಲದವರಾಗಿರಬಹುದು. ಆದರೆ ಇತರ ಕೋವೆಗಳ ಜೊತೆ ಲೈಂಗಿಕ ಸಂಗಾತಿಗಳು ಅಥವಾ ಸ್ನೇಹ ಸಭೆಗಳಿಗಾಗಿ ಸ್ಥಳವನ್ನು ಬಳಸುತ್ತಾರೆ. ಈ 'ಕ್ಷೇತ್ರ ಗೆಳೆಯರು' 'ಪ್ರಮುಖ ಮಾಹಿತಿದಾರರ'ರಾಗಿ ಕಾರ್ಯ ನಿರ್ವಹಿಸುತ್ತಾರೆ. ಇವರು ಇತರೆ ಕೋವೆ ಹಾಗೂ ಪಂಥಿಗಳನ್ನು ಕ್ಷೇತ್ರ ಅಧಿಕಾರಿಗಳಿಗೆ ಪರಿಚಯಿಸುತ್ತಾರೆ. ಕ್ಷೇತ್ರಗಳನ್ನು ಬಳಸುವ ಕೋವೆಗಳು ಅವರ ಲೈಂಗಿಕ ಸಂಗಾತಿಗಳು ಹಾಗೂ ಕ್ಷೇತ್ರದಲ್ಲಿರುವ ಅಂಗಡಿ ಮಾಲೀಕರು, ರಿಕ್ಷಾ, ಟ್ರಕ್ ಅಥವಾ ಬಸ್ ಚಾಲಕರು ಇತರರು ಈ ವ್ಯಾಪ್ತಿಗೆ ಒಳಪಡುತ್ತಾರೆ. ಇವರು ಮುಖ್ಯ ಜಾಲದವರಾಗಿ ಕಾರ್ಯ ನಿರ್ವಹಿಸುತ್ತಾರೆ. ಸಹವರ್ತಿ ಶಿಕ್ಷಣ ನೀಡುವವರಾಗಿ, ಅವರ ಗೆಳೆಯರು ಮತ್ತು ಲೈಂಗಿಕ ಸಂಗಾತಿಗಳ ನಡುವೆ ಮಾಹಿತಿ ವಿನಿಮಯಕಾರರಾಗಿ ಹಾಗೂ ವ್ಯಕ್ತಿಗಳನ್ನು ಕ್ಷೇತ್ರ ಅಧಿಕಾರಿಗಳಿಗೆ ಮತ್ತು ಸೇವಾ ಕೇಂದ್ರಗಳ ಸಂಪರ್ಕಕ್ಕೆ ತರುವವರಾಗಿ ಕಾರ್ಯ ನಿರ್ವಹಿಸುತ್ತಾರೆ. ಇವರನ್ನು ಕ್ಷೇತ್ರದಲ್ಲಿ ಲೈಂಗಿಕ ಸೋಂಕು ರೋಗಕ್ಕೆ ಚಿಕಿತ್ಸೆ ಉಸ್ತುವಾರಿ ಮಾಡಲು ಸುರಕ್ಷಿತ ಲೈಂಗಿಕ ನಡವಳಿಕೆ ಮಟ್ಟ ನಿಗಾಕ್ಕೆ ವಿವಾಹಕ್ಕೆ ಸಂಬಂಧಿಸಿದ ವಿಷಯಗಳು, ಕಾಂಡೋಮ್‌ಗಳ ಮಾರಾಟಗಾರರಾಗಿಯೂ ಬಳಸಿಕೊಳ್ಳಬಹುದು. ಬೆಂಬಲ ಮತ್ತು ಪ್ರೇರಣೆ ದ್ಯೋತಕವಾಗಿ ಇವರಿಗೆ ಮಾಸಿಕ ಗೌರವಧನ ನೀಡಬಹುದು. ಸ್ಥಳೀಯ ಆಪ್ತರು ಕ್ಷೇತ್ರ ಅಧಿಕಾರಿಗಳು / ಸೂಪರ್ ವೈಸರ್‌ಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಾರೆ.

## ಕ್ಷೇತ್ರ ಸ್ವಯಂ ಸೇವಕರು

ನಿರ್ದಿಷ್ಟ ಸ್ಥಳದಲ್ಲಿ ಕಾರ್ಯ ನಿರ್ವಹಿಸುವ ಈ ವ್ಯಕ್ತಿಗಳು ಕಾರ್ಯಕ್ರಮ ಮತ್ತು ಯೋಜನೆಯಲ್ಲಿ ಆಸಕ್ತರಾಗಿದ್ದು, ಮೈತ್ರಿ ತಂಡಕ್ಕೆ ಹಾಗೂ ಯೋಜನೆಗೆ ಬೆಂಬಲ ಮತ್ತು ಸಂಪರ್ಕ ಜಾಲದ ನೆರವು ನೀಡುತ್ತಾರೆ.

## ನೆರೆಹೊರೆ

ಪ್ರಾಯೋಗಿಕತ್ವ ಮತ್ತು ಸುರಕ್ಷತೆ ವಿಷಯಕ್ಕೆ ಬಂದಾಗ ಮೈತ್ರಿ ತಂಡದ ಸದಸ್ಯರು ತಮ್ಮ ನೆರೆಹೊರೆ ಪ್ರದೇಶಗಳಲ್ಲಿನ ಸ್ನೇಹಿತರು ಮತ್ತು ನೆರೆಹೊರೆ ಲೈಂಗಿಕ ಸಂಗಾತಿಗಳೊಂದಿಗೆ ಸಂಪರ್ಕಸಾಧಿಸಿ, ಮಾಹಿತಿ ಸಲಹೆಗಳನ್ನು ನೀಡಿ ಕಾಂಡೋಮ್‌ಗಳನ್ನು ವಿತರಿಸುವ ಕಾರ್ಯ ನಿರ್ವಹಿಸಲು ಪ್ರಚೋದಿಸಲ್ಪಟ್ಟಿರುತ್ತಾರೆ. ಪ್ರತಿ ಸ್ನೇಹಿತ್ವ ತಂಡ ನಿರಂತರವಾಗಿ ಕಾರ್ಯ ನಿರ್ವಹಿಸುತ್ತದೆ. ಸಣ್ಣ ಸಂಖ್ಯೆಯ ಕ್ಷೇತ್ರಗಳ ಪರಸ್ಪರ

ಹತ್ತಿರವಿರುವ ಪ್ರದೇಶಗಳಲ್ಲಿ ಪ್ರತಿದಿನ ಭೇಟಿಗೆ ಅನುಕೂಲವಾಗುವಂತೆ ಕೆಲಸ ಮಾಡುತ್ತಾರೆ. ಸಾಮಾನ್ಯವಾಗಿ ಇಂಥ ಎರಡರಿಂದ ಐದರವರೆಗೆ ಸ್ಥಳಗಳನ್ನು ಇದು ವ್ಯಾಪಿಸುತ್ತದೆ. ಸುರಕ್ಷಿತ ಲೈಂಗಿಕ ವಿಧಾನ ಮತ್ತು ಲೈಂಗಿಕ ಸೋಂಕು ರೋಗಗಳ ಚಿಕಿತ್ಸೆ ಪಡೆಯುವತ್ತ ಒಮ್ಮತ ನಿರ್ಮಾಣ, ಸಮುದಾಯ ನಿರ್ಮಾಣ ಮತ್ತು ಮಾಹಿತಿ ನೀಡಿಕೆ ಇದರ ಉದ್ದೇಶ.

ಕ್ಷೇತ್ರ ಅಧಿಕಾರಿಗಳು/ ಸೂಪರ್‌ವೈಸರ್‌ಗಳು ಮತ್ತು ಸ್ಥಳೀಯ ಆಪ್ತರಿಗೆ ಗುರುತಿನ ಚೀಟಿಯನ್ನು ನೀಡಲಾಗುತ್ತದೆ. ಅವರನ್ನು ಪ್ರಶ್ನಿಸುವ ಪೊಲೀಸರು ಮತ್ತು ಇತರ ಅಧಿಕಾರಿಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಇದನ್ನು ಬಳಸಬಹುದು. ಯೋಜನೆ ಅನುಷ್ಠಾನಕ್ಕಾಗಿ ಇಂಥ ಅಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸಿ ಅವರ ಬೆಂಬಲ ಸಹಕಾರ ಗಳಿಸಲು ಕಾಂಡೋಮ್ ಮತ್ತು ಲೂಬ್ರಿಕೆಂಟ್ ವಿತರಣೆ

ಅನೇಕ ಕೋವೆಗಳು (ಮತ್ತು ಇತರರು)ಅಂಗಡಿಗಳಲ್ಲಿ (ವಿಶೇಷವಾಗಿ ಯೌವ್ವನವಸ್ಥೆಯಲ್ಲಿ ಇರುವವರು ಮತ್ತು/ಅಥವಾ ಅವಿವಾಹಿತರು ) ಅಥವಾ ಕುಟುಂಬ ಯೋಜನಾ ಕ್ಲಿನಿಕ್‌ಗಳಲ್ಲಿ ಕಾಂಡೋಮ್‌ಗಳನ್ನು ಪಡೆಯಲು ಸಂಕೋಚ ಪಡುತ್ತಾರೆ. ಕಾಂಡೋಮ್ ಮತ್ತು ಲೂಬ್ರಿಕೆಂಟ್‌ಗಳ ಸುಲಭವಾಗಿ ತಲುಪವಂತಾಗಲು ಮತ್ತು ಸ್ಥಳದಲ್ಲಿ ಲಭ್ಯವಾಗುವಂತೆ ಮಾಡುವುದರಿಂದ ಕಾಂಡೋಮ್‌ಗಳ ಬಳಕೆ ಸಲೀಸಾಗುವಂತೆ ಮಾಡಬಹುದು.

ದಕ್ಷಿಣ ಏಷ್ಯಾದಲ್ಲಿ ಗುದದ್ವಾರಕ್ಕೆ ಸಂಬಂಧಿಸಿದ ಲೈಂಗಿಕತೆಗೆ ಸೂಕ್ತ ಕಾಂಡೋಮ್‌ಗಳಾಗಲಿ ಅಥವಾ ಜಲ ಮೂಲದ ಸೂಕ್ತ ಮತ್ತು ಅಗ್ಗದ ಲೂಬ್ರಿಕೆಂಟ್‌ಗಳಿಲ್ಲದಿರುವುದು ಗಮನಾರ್ಹ ಸಮಸ್ಯೆಯಾಗಿದೆ.

## 2. ಕೇಂದ್ರ ಆಧಾರಿತ ಸೇವೆಗಳು

### ತಂಗುದಾಣ ಸೇವೆಗಳು

ತಂಗುದಾಣ ಸೇವೆಗಳಿಗೆ ಹೆಚ್ಚಿನ ಸಂಖ್ಯೆಯ ಜನರು ಬರುತ್ತಿರುವುದರಿಂದ ಮೂಲ ಅವಧಿಯನ್ನು ವಿಸ್ತರಿಸಲಾಗಿದೆ. ಇದು ಸಭೆ ಮತ್ತು ಸಾಮಾಜಿಕತೆಗೆ ಹಾಗೂ ಸ್ನೇಹ ನಿರ್ಮಾಣ ಮತ್ತು ಸಮುದಾಯ ಪ್ರಜ್ಞೆಗೆ ಸುರಕ್ಷಿತ ಸ್ಥಳ, ಇಂಥ ಸೇವೆಯು ಮನರಂಜನೆ (ಟಿ.ವಿ. ಗೇಮ್ಸ್ ಇತ್ಯಾದಿ) ಒದಗಿಸಬೇಕು. ಜೊತೆಗೆ ವ್ಯಕ್ತಿಗೆ ಮನೋಲೈಂಗಿಕ ಪರಿಸ್ಥಿತಿ ಅಧ್ಯಯನ, ಕಾಂಡೋಮ್ ಬಳಕೆ ಕುರಿತು ತಿಳುವಳಿಕೆ ಹಾಗೂ ಎಸ್‌ಟಿಐ/ ಎಚ್‌ಐವಿ/ ಏಡ್ಸ್ ಕುರಿತು ಮಾಹಿತಿ ಮತ್ತು ಸಲಹೆ ಹಾಗೆಯೇ ಪರಸ್ಪರ ಸಂಪರ್ಕಿಸಲು ಸುರಕ್ಷಿತ ಸ್ಥಳ ಒದಗಿಸಬೇಕು.

### ಸಭೆಗಳ ಸಾಮಾಜೀಕರಣ

ಕೇಂದ್ರ ಆಧಾರಿತ ಸಾಮಾಜಿಕ ಸಮೂಹಗಳನ್ನು ಅಭಿವೃದ್ಧಿಗೊಳಿಸಲಾಗಿದ್ದು, ಕ್ಷೇತ್ರ ಅಧಿಕಾರಿ/ ಸೂಪರ್‌ವೈಸರ್‌ಗಳು ತಮ್ಮ ವೈಯಕ್ತಿಕ ಸಾಮಾಜಿಕ ಮತ್ತು ಕ್ಷೇತ್ರ ಕಾರ್ಯ ಜಾಲಗಳನ್ನು ಈ ಕಾರ್ಯಕ್ಕೆ ಬಳಸುತ್ತಾರೆ. ಇಂಥ ಸಮೂಹಗಳು ವೈಯಕ್ತಿಕ ಗೆಳೆತನ ಮತ್ತು ಸಮುದಾಯ ನಿರ್ಮಾಣ ಅಭಿವೃದ್ಧಿಗೆ ಅವಕಾಶ ಕಲ್ಪಿಸುತ್ತವೆ. ಅನುಭವಗಳ ಹಂಚಿಕ ಮತ್ತು ಸಾಮಾನ್ಯ ಉದ್ದೇಶ ಈಡೇರಿಕೆಗೂ ಇದು ನೆರವಾಗುತ್ತದೆ.

ಇದಕ್ಕಾಗಿ ಅವರು ವಿಶೇಷ ಸಮೂಹಗಳನ್ನು ಸೇರಿಸಿಕೊಳ್ಳಬಹುದು

- ★ ಲೈಂಗಿಕ ವೃತ್ತಿಪರರು
- ★ ವಿದ್ಯಾರ್ಥಿಗಳು
- ★ ವಿವಾಹಿತ ಪುರುಷ-ಪುರುಷ ಲೈಂಗಿಕರಣ

★ ಪಂಥಿಗಳು
★ ಯುವಕರು
★ ಗುರುತಿಸ್ಪಡಬೇಕಾದ ಇತರರು

## ಲೈಂಗಿಕ ಆರೋಗ್ಯ ಶಿಕ್ಷಣ ತರಗತಿಗಳು

ವೇಳಾಪಟ್ಟಿ ನಿಗದಿಗಾಗಿ ಪ್ರತಿ ತರಗತಿ ನಿಗದಿತ ಕಾರ್ಯಸೂಚಿ ಹೊಂದಿದ್ದು, ಲೈಂಗಿಕ ಆರೋಗ್ಯ ವಿಷಯಗಳ ಬಗ್ಗೆ ಪ್ರಸ್ತಾಪಿಸಲ್ಪಟ್ಟ ಮಾಹಿತಿ ಮತ್ತು ತಿಳುವಳಿಕೆ ಒದಗಿಸುತ್ತದೆ.

## ವೈಯಕ್ತಿಕ ಕೌಶಲ್ಯ ವಿಕಸನ

ಸಾಕ್ಷರತೆ, ಕೌಶಲ್ಯ ಮತ್ತು ಜೀವನ ಕೌಶಲ್ಯಗಳು ಆರೋಗ್ಯ ಮಾಹಿತಿ, ವೃತ್ತಿ ಕೌಶಲ್ಯ ಆದಾಯಗಳಿಗೆ ಕೌಶಲ್ಯ ಇತ್ಯಾದಿಗಳನ್ನು ಶಿಕ್ಷಣ ತರಗತಿಗಳು ನೀಡಬೇಕು.

ಕೇಂದ್ರ -ಆಧಾರಿತ ಚಟುವಟಿಕೆಗಳು ಎಂದು ಇವುಗಳನ್ನು ಸಂಬೋಧಿಸಬೇಕು

ಈ ಕೆಳಕಂಡವುಗಳನ್ನೊಳಗೊಂಡಂತೆ ವೈಯಕ್ತಿಕ ಮತ್ತು ಭಾವನಾತ್ಮಕ ಅಗತ್ಯತೆಗಳು:-

★ ಲೈಂಗಿಕ ದೌರ್ಜನ್ಯ ಮತ್ತು ಹಿಂಸಾಚಾರ
★ ವೈಯಕ್ತಿಕ ಸ್ವಚ್ಛತೆ
★ ಗೆಳೆತನ
★ ವ್ಯಕ್ತಿತ್ವ ಮತ್ತು ಆಕಾಂಕ್ಷೆ
★ ಭಾವನಾತ್ಮಕ ಬೆಂಬಲ
★ ಸಬಲೀಕರಣ
★ ವೈಯಕ್ತಿಕ ಕೌಶಲ್ಯ ವಿಕಸನ
★ ವೈಯಕ್ತಿಕ ಆರೋಗ್ಯ ವಿಷಯಗಳು
★ ಎಚ್‌ಐವಿ/ ಏಡ್ಸ್ ವ್ಯಕ್ತಿಗಳಿಗೆ ಬೆಂಬಲ ಮತ್ತು ಆರೈಕೆ

## ಸಾಮಾಜಿಕ ಅಗತ್ಯತೆಗಳು

★ ಶಿಕ್ಷಣ
★ ಉದ್ಯೋಗ
★ ಆರ್ಥಿಕ ಅಭಿವೃದ್ಧಿ
★ ಮಾನವ ಹಕ್ಕುಗಳು
★ ಕುಟುಂಬ, ವಿವಾಹ ಮತ್ತು ಮಕ್ಕಳು
★ ವೃತ್ತಿ ಕೌಶಲ್ಯಗಳು
★ ಅಂತರಗಳ ಸಾಮಾಜಿಕರಣ

## ಲೈಂಗಿಕ ಆರೋಗ್ಯ ಅಗತ್ಯಗಳು

★ ಕಾಂಡೋಮ್‌ಗಳು
★ ಲೂಬ್ರಿಕೆಂಟ್‌ಗಳು (ಜಲಾಧಾರಿತ)
★ ಸೂಕ್ತ ಎಸ್‌ಟಿಐ ಚಿಕಿತ್ಸೆ
★ ಮನೋ ಲೈಂಗಿಕ ಸಮಾಲೋಚನೆ

- ★ ಎಚ್ಐವಿ/ಏಡ್ಸ್ ಸಮಾಲೋಚನೆ
- ★ ಜ್ಞಾನ/ತಿಳುವಳಿಕೆ
- ★ ಸಬಲೀಕರಣ
- ★ ಸಂಧಾನಕೌಶಲ್ಯ

ಇತರ ಸೇವೆಗಳನ್ನು ಸಂಪರ್ಕ ಜಾಲಗಳ ಮೂಲಕ ಉದ್ಯೋಗಾವಕಾಶಗಳು ಮತ್ತು ಖಾಲಿ ಇರುವ ವಸತಿ ಹಾಗೆಯೇ ತುರ್ತು ಮನೆ ನಿರ್ಮಾಣ

## ಉಳಿತಾಯ ಮತ್ತು ಸಾಲ ಕ್ಲಬ್‌ಗಳು

ಕೋವೆಗಳ ಸಂಪರ್ಕ ಜಾಲಗಳ ನಡುವೆ ಸಣ್ಣ ಉಳಿತಾಯ ಮತ್ತು ಸಾಲ ನೀಡಿಕೆಗೆ ಪ್ರೋತ್ಸಾಹ

## ಕಾನೂನು ಸಲಹೆ

ಲೈಂಗಿಕ ಚಟುವಟಿಕೆ ಮತ್ತು ಲೈಂಗಿಕ ಕ್ರಿಯೆ ನಡೆಸಲು ಸಾರ್ವಜನಿಕ ಸ್ಥಳಗಳನ್ನು ಬಳಸುವ ಕೋವೆ ಮೇಲೆ ಪೊಲೀಸರು ಮತ್ತು ಮಾಸ್ತಾನ್‌ಗಳ ಕಿರುಕುಳ ಸಾಮಾನ್ಯ ಸಂಗತಿ. ಕಾನೂನು ನೆರವು ಸೇವೆಗಳು, ಮಾನವ ಹಕ್ಕುಗಳ ಉಲ್ಲಂಘನೆ ಸವಾಲು ಹಾಗೂ ಸಂಧಾನ ಮತ್ತು ಬೆಂಬಲ ನೀಡುವಿಕೆಯಿಂದ ಸೇವಾ ಬಳಕೆ ಮತ್ತು ಫಲಾನುಭವ ಅಭಿವೃದ್ಧಿಯ ಚೌಕಟ್ಟು ನಿರ್ಮಾಣ ಸಾಧ್ಯ. ಇದರಿಂದ ಲೈಂಗಿಕ ಸಮುದಾಯಕ್ಕೆ ನೆರವು ನೀಡಿ ಸಮುದಾಯ ಸೇವೆಗೆ ಪೋತ್ಸಾಹಿಸಿದಂತಾಗುತ್ತದೆ.

## 3. ಆರೋಗ್ಯ ಮತ್ತು ಆರೈಕೆ ಸೇವೆ

ಅವರ ನಡವಳಿಕೆ ಕಳಂಕಿತವಾದುದೆಂಬ ಕಾರಣಕ್ಕೆ ಕೋವೆಗಳಿಗೆ ಮುಖ್ಯ ವಾಹಿನಿಯ ಸೇವೆಗಳು ದುರ್ಲಭವಾಗುತ್ತವೆ. ವಿಶೇಷವಾಗಿ ಅವರ ಗುದ ಲೈಂಗಿಕತೆ ನಡವಳಿಕೆಗಳಿಂದಾಗಿ ಕೋವೆಗಳಿಗೆ ಸೂಕ್ತ ಚಿಕಿತ್ಸೆ ಲಭಿಸುವುದು ತೀರಾ ಕಡಿಮೆ. ಕೇಂದ್ರ ಆಧರಿತ ಲೈಂಗಿಕ ಸೋಂಕು ರೋಗದ ಚಿಕಿತ್ಸಾ ಸೇವೆಗಳಿಂದ ಕೋವೆಗಳ ರೋಗ ನಿರ್ವಹಣೆಗೆ ನೆರವಾಗುತ್ತದೆ. ಜೊತೆಗೆ ಕಡಿಮೆದರದಲ್ಲಿ ಔಷಧ ಲಭಿಸಿ, ಕೋವೆಗಳು ಮತ್ತು ಅವರ ಪೋಷಕರಿಗೆ ಸುರಕ್ಷಿತತೆ ಲಭ್ಯವಾಗುತ್ತದೆ. ಅಲ್ಲದೆ ನೆರವು ಮತ್ತು ಅನುಕಂಪದ ಸೇವೆಗಳೂ ದೊರೆಯುವಂತಾಗುತ್ತದೆ. ವಿಶೇಷವಾಗಿ ಗುದ ಲೈಂಗಿಕತೆ ನಡವಳಿಕೆ ಮತ್ತು ಗಂಡಾಂತರಗಳ ಬಗ್ಗೆ ತಿಳಿದಿರುವ ಸೂಕ್ತ ವೈದ್ಯರನ್ನು ಒದಗಿಸುವುದು ಅಗತ್ಯವಾಗಿದೆ. ಇದರಿಂದ ಬೆಂಬಲಿತ ಚಿಕಿತ್ಸೆ ಲಭಿಸಲು ಸಾಧ್ಯ. ಇದರೊಂದಿಗೆ ಎಚ್.ಐ.ವಿಗಾಗಿ ಸ್ವಯಂ ಪರೀಕ್ಷೆ ಮತ್ತು ಕೌನ್ಸಿಲಿಂಗ್ ಸೇವೆ ನೀಡಬಹುದಾಗಿದ್ದು, ಎಚ್ಐವಿ ಪ್ರತಿರೋಧಕ ಪರೀಕ್ಷೆ ಜೊತೆ ಪೂರ್ವ ಮತ್ತು ನಂತರದ ಪರೀಕ್ಷೆ ನಡೆಸಬಹುದಾಗಿದೆ.

ಎಚ್.ಐ.ವಿ ಸೋಂಕು ಪೀಡಿತರಿಗೆ ಸೂಕ್ತ ಬೆಂಬಲ ಮತ್ತು ಆರೈಕೆ ಸೇವೆಯನ್ನು ಒದಗಿಸಲು ಸಂಘಟನೆಗಳು ಕಾರ್ಯನಿರ್ವಹಿಸಬೇಕು ಅಥವಾ ಮನೆಯಲ್ಲಿ ಆರೈಕೆ ಮತ್ತು ಸ್ನೇಹತ್ವ ಬೆಂಬಲ ವಿಧಾನ ಇವೆರಡರ ಮೂಲಕ ಸಂಸ್ಥೆಗಳು ಬೆಂಬಲ ಮತ್ತು ಆರೈಕೆ ಸೇವೆಯನ್ನು ಅಭಿವೃದ್ಧಿಗೊಳಿಸಬಹುದು.

ಈ ಮೂರು ಅಂತರ್‌ಸಂಪರ್ಕ ಮತ್ತು ಪರಸ್ಪರ ಬೆಂಬಲಿತ ರೂಪುರೇಷೆಯ ಸೇವೆಯಿಂದ ಗಂಡಾಂತರ ಇಳಿಮುಖ ಮತ್ತು ಸುರಕ್ಷಿತ ಲೈಂಗಿಕತೆಗೆ ಸೂಕ್ತ ಕಾರ್ಯಕ್ರಮ ರೂಪಿಸಲು ಪರಿಸರ ಸೃಷ್ಟಿಸಿದಂತಾಗುತ್ತದೆ. ಇದು ಕುಟುಂಬ, ಸ್ಥಳ, ಮೂಲ (ಗ್ರಾಮೀಣ ಅಥವಾ ಪಟ್ಟಣ), ವರ್ಗ, ಆರ್ಥಿಕ ಸಮೂಹ ಮತ್ತು ಉದ್ಯೋಗ ಇವುಗಳನ್ನು ಮೇಲ್ಪಟ್ಟ ಮಾನಸಿಕ ಸಮುದಾಯವೊಂದನ್ನು ಸೃಷ್ಟಿಸಿದಂತಾಗುತ್ತದೆ.

ಕಳಕಳಿ ಮತ್ತು ಅಗತ್ಯತೆಗಳ ಹಂಚಿಕೆ-ವಿನಿಮಯದ ಮಾನಸಿಕ ಸಮುದಾಯ ಇದಾಗಿರುತ್ತದೆ. ಎಸ್‌ಟಿಐ/

ಎಚ್ಐವಿ/ಏಡ್ಸ್‌ಸುತ್ತಲ ತುರ್ತುಕ್ರಮಕ್ಕೆ ಸಂಪರ್ಕ ಜಾಲಗಳ ಬಳಕೆ ಮತ್ತು ಸಮುದಾಯಗಳ ನಿರ್ಮಾಣಕ್ಕೆ ಇದು ಪೂರಕವಾಗುತ್ತದೆ.

## ತಾಂತ್ರಿಕ ಬೆಂಬಲ

ಇಂಥ ಬಹುತೇಕ ಅಸ್ತಿತ್ವದಲ್ಲಿರುವ ಲೈಂಗಿಕ ಆರೋಗ್ಯ ಸಂಸ್ಥೆಗಳಿಗೆ ಗಮನಾರ್ಹ ತಾಂತ್ರಿಕ ಬೆಂಬಲ ಮತ್ತು ತರಬೇತಿ ಅಗತ್ಯವಾಗಿರುತ್ತದೆ. ಏಕೆಂದರೆ ಬಹುಶಃ ಯೋಜನಾ ತಂಡಕ್ಕೆ ಎನ್‌ಜಿಓ ಪರಿಸರದಲ್ಲಿ ಕಾರ್ಯನಿರ್ವಹಿಸಿದ ಅಥವಾ ಲೈಂಗಿಕ ಆರೋಗ್ಯ ಸೇವೆಗಳನ್ನು ಒದಗಿಸಿದ ಪೂರ್ವ ಅನುಭವವಿರುವುದಿಲ್ಲ. ಇಂಥ ಸೇವೆಗಳಿಗೆ ಸೂಕ್ತ ತಾಂತ್ರಿಕ ಬೆಂಬಲ ಒದಗಿಸುವುದು ಅಗತ್ಯ. ದಕ್ಷಿಣ ಏಷ್ಯಾದಲ್ಲಿ ಪುರುಷ-ಪುರುಷ ನಡುವೆ ಲೈಂಗಿಕತೆಯ ಸಾಮಾಜಿಕ –ಸಾಂಸ್ಕೃತಿಕ ಆಯಾಮಗಳ ಬಗ್ಗೆ ಪೂರ್ಣ ತಿಳುವಳಿಕೆ ಇರುವಂಥ ಎನ್‌ಎಫ್‌ಐ ಸಂಸ್ಥೆಗಳಂಥ ಸಂಸ್ತೆ /ವ್ಯಕ್ತಿಯಿಂದ ತಾಂತ್ರಿಕ ನೆರವು ದೊರೆಯಬೇಕೆಂಬುದು ಇದರ ಅಥ.

***-ನಾಜ್ ಫೌಂಡ್‌ಶನ್ ಇಂಟರ್ ನ್ಯಾಷನಲ್***

## ಎರಡನೇ ಹಂತ ಎಂ.ಎಸ್.ಎಂ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಎರಡನೇ ಕಾರ್ಯಾಗಾರ

ಕಾರ್ಯಾಗಾರ ಎರಡರಲ್ಲಿ ಭಾಗವಹಿಸುವವರು ಯಾರು?

ಈ ಕಾರ್ಯಾಗಾರವು ಸಾಂದರ್ಭಿಕ /ಅಗತ್ಯ ಸಲಹೆಗಳ ಪೂರ್ಣಗೊಳಿಸುವಿಕೆ ಹಾಗೂ ವರದಿ ತಯಾರಿಕೆಯನ್ನು ಒಳಗೊಂಡಿರುತ್ತದೆ.

ಸ್ಥಳೀಯ ಮುಖ್ಯ ವ್ಯಕ್ತಿ/ಯೋಜನಾ ವ್ಯವಸ್ಥಾಪಕ ಮಾಪನ ತಂಡದ ಸದಸ್ಯ ಹಾಗೂ ಹೊಸದಾಗಿ ನೋಂದಾಯಿತ ಸಿಬಿಓದ ಆಡಳಿತ ಮಂಡಳಿಯ ಟ್ರಸ್ಟಿಗಳು ಕಾರ್ಯಾಗಾರದಲ್ಲಿ ಭಾಗವಹಿಸುತ್ತಾರೆ.

## ಗುರಿ

ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆ ಅಭಿವೃದ್ಧಿ

## ಉದ್ದೇಶ

★ ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನಾ ಪ್ರಸ್ತಾವನೆ ತಯಾರಿಗೆ

★ ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆಯ ಅಭಿವೃದ್ಧಿ, ಅನುಷ್ಠಾನ ಮತ್ತು ನಿರ್ವಹಣೆಗೆ ತಂಡದ ಸದಸ್ಯರಿಗೆ ತರಬೇತಿ.

## ಯೋಜನಾ ಅಭಿವೃದ್ಧಿ ಪಾರಿಭಾಷಿಕ ಕೋಶ

## ಉತ್ತರದಾಯಿತ್ವ

ಸೇವೆಗಳನ್ನು ಒದಗಿಸಲ್ಪಡುವ ಫಲಾನುಭವಿಗಳು ಹಾಗೆಯೇ ಸೇವೆಗಳಿಗೆ ಹಣಕಾಸು ನೀಡುವವರಿಗೆ ಉತ್ತರದಾಯಿತ್ವವಾಗಿರಬೇಕು. ಇದು ಎಲ್ಲ ಕಾನೂನು ಅಗತ್ಯಗಳನ್ನು ಸಹ ಒಳಗೊಂಡಿರುತ್ತದೆ. ವ್ಯಕ್ತಿಯ ಚಟುವಟಿಕೆಗಳು ಮತ್ತು ವೆಚ್ಚಗಳ ಬಗ್ಗೆ ಸರಿಯಾದ ಲೆಕ್ಕ ವಿವರಣೆ ನೀಡಬೇಕು.

## ಸಮುದಾಯ ಅಭಿವೃದ್ಧಿ

ಆರೋಗ್ಯ ಸುಧಾರಣೆ ಯೋಜನೆ ಕೈಗೊಳ್ಳಬೇಕಾದರೆ, ನಿರ್ದಿಷ್ಟ ತತ್ತ್ವಗಳ ಆಧಾರದ ಮೇಲಿರಬೇಕು. ಇವುಗಳ ಜೊತೆಗೆ ವ್ಯಕ್ತಿಗಳ ಬದಲಿಗೆ ಸಮೂಹದಲ್ಲಿ ಕಾರ್ಯ ನಿರ್ವಹಿಸುವ ಹಾಗೂ ಸಮಾಜದೊಳಗಿನ ಅನಾನುಕೂಲತೆಯ ಮೇಲೆ ನಿರ್ದಿಷ್ಟವಾಗಿ ಬೆಳಕು ಚೆಲ್ಲುವ ಮೂಲಕ ಸಬಲೀಕರಣವನ್ನು ಪ್ರವರ್ತನೆಗೊಳಿಸಬೇಕು ಇದು ಬೇರುಮಟ್ಟದ ಕಾರ್ಯನಿರ್ವಹಣೆ, ಸಂಘಟಿತ ಅಭಿವೃದ್ಧಿ ಮತ್ತು ಭಾಗವಹಿಸುವಿಕೆಯನ್ನು ಒಳಗೊಂಡಿರುತ್ತದೆ. ನಿರ್ದಿಷ್ಟ ಸಮುದಾಯದೊಳಗಿನ ವ್ಯಕ್ತಿಗಳ ಸೌಹಾರ್ದ ಸಹಕಾರ ಮತ್ತು ಸಮುದಾಯ ಜಾಲದ ಮೂಲಕ ಸಂದೇಶ ವಿಸ್ತಾರವನ್ನು ಸಹ ಇದು ಒಳಗೊಂಡಿರುತ್ತದೆ.

## ಸಮುದಾಯ ಕ್ರೋಢೀಕರಣ

ವ್ಯಾಪಕವಾದ ವಿಭಿನ್ನ ಜನಸಂಖ್ಯೆಗೆ ಉತ್ತಮ ಸೇವೆ ಪರಿಣಾಮಕಾರಿ ದರದ ಸಂಯೋಜನೆಯಲ್ಲಿ ನೆರವು ಒದಗಿಸಲು ಸಮಗ್ರ ಜವಾಬ್ದಾರಿಯ ಮಹತ್ವದ ಪ್ರತಿಕ್ರಿಯೆ ಒಳಗೊಂಡಿರಬೇಕು.

## ಪರಿಣಾಮಕಾರಿತನ

ನೈಜ ಜೀವನ ಪರಿಸ್ಥಿತಿಯಡಿ ಅಪೇಕ್ಷಿತ ಫಲಿತಾಂಶ ಹೊರಬರಲು ಮಧ್ಯಸ್ಥಿಕೆ ಸಾಮರ್ಥ್ಯ ಹೊಂದಿರಬೇಕು.

## ಮೌಲ್ಯಮಾಪನ

ಉದ್ದೇಶಗಳ ಗುರಿಸಾಧನೆಯಲ್ಲಿ ಯೋಜಿತ ಮಧ್ಯಸ್ಥಿಕೆಯ ಪರಿಣಾಕಾರಿತನ ಕಾರ್ಯಕ್ಷಮತೆ, ಸಮರ್ಥನೀಯ ಮತ್ತು ಸ್ವೀಕಾರಾರ್ಹಗಳಿಗೆ ದೃಢಸಂಕಲ್ಪ

ಫಲಿತಾಂಶ ಅಳೆಯುವ ಮೂಲಕ ಸೇವೆಯ ಪರಿಣಾಕಾರಿತನದ ಮೌಲ್ಯಮಾಪನ

ಮೌಲ್ಯಮಾಪನಗಳು(ಕ್ರಮಬದ್ಧತೆ)

ಮಧ್ಯಸ್ಥಿಕೆ ವಿಧಾನವನ್ನು ಮತ್ತಷ್ಟು ಉತ್ತಮಪಡಿಸಲು ತೀರ್ಮಾನಗಳನ್ನು ಹೊಂದುವ ಪ್ರಯತ್ನ ಹಾಗೂ ಪ್ರಕ್ರಿಯೆ ಆಧರಿತ ವಿಧಾನವನ್ನು ಸಾಮಾನ್ಯವಾಗಿ ಬಳಸಲಾಗುತ್ತದೆ.

ಮೌಲ್ಯಮಾಪನಗಳು(ಸಾರಾಂಶ)

ಗುರಿಸಾಧನೆಯಲ್ಲಿ ಮಧ್ಯಸ್ಥಿಕೆ ಯಶಸ್ವಿಯಾಗಿದೆಯೆ ಎಂಬುದನ್ನು ತಿಳಿಸಲು ಉಪಸಂಹಾರ ಪ್ರಯತ್ನವನ್ನು ಮೌಲ್ಯಮಾಪನ ಮಾಡುತ್ತದೆ.

## ಮೈಲಿಗಲ್ಲುಗಳು

ಸಾಧನೆಯ ಗುರಿಸಾಧನೆಗೆ ಮಹತ್ವದ ಕುಶಲತೆಗಳು ತೀರಾ ಮುಖ್ಯವಾಗಿ ಗುರುತಿಸಲ್ಪಟ್ಟಿವೆ. ಸಾಧನೆಯ ಗುರಿಯನ್ನು ಫಲಿತಾಂಶವಾಗಿ, ಪರಿಶೀಲನೆಯನ್ನು ಫಲಿತಾಂಶದ ಕ್ರಮಗಳಾಗಿ ಮತ್ತು ಮೈಲಿಗಲ್ಲುಗಳನ್ನು ಪ್ರಕ್ರಿಯೆ ಅಥವಾ ಗುರಿಗಳಾಗಿ ನೋಡಬಹುದು.

## ಉಸ್ತುವಾರಿ

ಕಾರ್ಯ ಯೋಜನೆಗೆ ಅನುಗುಣವಾಗಿ ನಾವು ಮುಂದುವರಿಯುತ್ತಿದ್ದೇವೆ ಎಂಬುದನ್ನು ಮನಗಾಣಲು ಚಟುವಟಿಕೆಗಳ ಬಗ್ಗೆ ತಿಳಿಯುವಿಕೆ.

## ಫಲಿತಾಂಶ

ವ್ಯಕ್ತಿಗಳ ಆರೋಗ್ಯ ಸೇವೆಗಳ ಭವಿಷ್ಯದ ಪರಿಣಾಮಗಳು ಪೂರಕವಾಗಿರಲಿ ಅಥವಾ ಋಣಾತ್ಮಕವಾಗಿರಲಿ ಅದು ಸೇವೆಗಳಿಗೆ ಸೇರ್ಪಡೆಯಾಗಬೇಕು.

ಫಲಿತಾಂಶಗಳ ಮಾನದಂಡಗಳೆಂದರೆ:

- ★ ಸುರಕ್ಷಿತ ಲೈಂಗಿಕತೆ ಮತ್ತು ಎಚ್‌ಐವಿ ಬಗ್ಗೆ ಅರಿವು
- ★ ಸುರಕ್ಷಿತ ಲೈಂಗಿಕತೆಯತ್ತ ಧೋರಣೆಗಳು
- ★ ವರದಿಯಾದ ಲೈಂಗಿಕ ನಡವಳಿಕೆಗಳು
- ★ ಅಸುರಕ್ಷಿತ ಲೈಂಗಿಕತೆಯ ಜೈವಿಕ ಚಿಹ್ನೆಗಳು, ಉದಾ: ಎಸ್‌ಟಿಐ

## ಫಲಶ್ರುತಿ

ಪ್ರಕಟನಾ ಪತ್ರಗಳ ಸಂಖ್ಯೆ ಅಥವಾ ಸಂಪರ್ಕ ಸಂಖ್ಯೆಗಳ ರೀತ್ಯಾ ಪ್ರಕ್ರಿಯೆಯ ಪ್ರಮಾಣಾತ್ಮಕ ಉತ್ಪನ್ನ ಅಂಶಗಳು.

## ಮಿತಿಮೀರಿ ಹೋಗುವಿಕೆ

ಹೊರಗಿನ ಯಾವುದೇ ಸಂಸ್ಥೆಯಿಂದ ಕೆಲಸಗಳನ್ನು ಕೈಗೊಂಡಿದ್ದಲ್ಲಿ ಉದಾಹರಣೆಗೆ ರಸ್ತೆಗಳು, ನಿಲ್ದಾಣಗಳು, ಪಬ್, ಕೆಫೆಗಳು ಇತ್ಯಾದಿ ಸಮುದಾಯದಲ್ಲಿ ಗಂಡಾಂತರ ಇಳಿಕೆ ಬದಲಾವಣೆಗೆ ನೇರವಾಗಿ ಅಥವಾ ಹಾಲಿ ಚಿಕಿತ್ಸೆ ಮತ್ತು ನೆರವು ಸೇವೆಗಳಿಗೆ ವ್ಯಕ್ತಿಗಳನ್ನು ಆಕರ್ಷಿಸುವ ಮೂಲಕ ಪರೋಕ್ಷವಾಗಿ ಬದಲಾವಣೆಯ ಗುರಿಯನ್ನು ಇದು ಹೊಂದಿರುತ್ತದೆ.

## ಸಹವರ್ತಿ ಶಿಕ್ಷಣ

ತಮ್ಮ ಸಮಾನ ಸ್ಥಿತಿಯವರನ್ನು ಗುಣ, ವಯಸ್ಸು, ಲಿಂಗ, ಲೈಂಗಿಕತೆ ಅಥವಾ ಜನಾಂಗೀಯತೆಯ ದೃಷ್ಟಿಯಿಂದ ನೋಡುವ ಇತರಿಂದ ವ್ಯಕ್ತಿಗಳಿಗೆ ದೊರೆಯುವ ಶಿಕ್ಷಣ ಮತ್ತು ಇತರ ಸೇವೆಗಳನ್ನು ಇದು ಉಲ್ಲೇಖಿಸುತ್ತದೆ.

ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆ ಹಿನ್ನೆಲೆಯಲ್ಲಿ ಸಮಾನ ಸ್ಥಿತಿಯವರ ಎಂಎಸ್ಎಂಗಳಾಗಿದ್ದು, ಅದೇ ರೀತಿಯ ನಡವಳಿಕೆಯ ಆಯ್ಕೆಗಳು ಮತ್ತು ಲಿಂಗ ಗುರುತಿಸುವಿಕೆ ಗುಣಗಳನ್ನು ಹಂಚಿಕೊಳ್ಳುತ್ತಾರೆ.

## ಸಾಧನೆಯ ಗುರಿಗಳು

ಗ್ರಾಹಕರ ಮೇಲೆ ಸೇವೆಗಳ ಉದ್ದೇಶಿತ ಪರಿಣಾಮ

## ಪ್ರಕ್ರಿಯೆ

ಸೇವೆಗೆ ಪೂರಕವಾದ ಚಟುವಟಿಕೆಗಳು

## ಗುಣಮಟ್ಟ ಪ್ರಮಾಣಗಳು

ಸೇವೆ ನೀಡಿಕೆಗೆ ಸಂಬಂಧಿಸಿದಂತೆ ಅನುಷ್ಠಾನಗೊಳಿಸಲು ಸಂಸ್ಥೆ ಒಪ್ಪಿಕೊಂಡ ಮೌಲ್ಯಗಳ ಒಟ್ಟುರೂಪ

## ವಿಶ್ವಸನೀಯ

ವಿಭಿನ್ನ ಸನ್ನಿವೇಶಗಳಲ್ಲಿ ಫಲಿತಾಂಶ ನೀಡಿಕೆಯಲ್ಲಿ ಸೂಚನೆಯ ಏಕರೂಪತೆ

## ಸೇವಾ ಪರಿಶೀಲನೆ

ಹಿಂದೆ ಒಪ್ಪಿಕೊಂಡ ಮಟ್ಟಗಳಿಗೆ ಇದು ಹೊಂದಾಣಿಕೆಯಾಗುತ್ತದೆಯೆ ಎಂಬುದನ್ನು ತಿಳಿಯಲು ಫಲಿತಾಂಶ ಮತ್ತು /ಅಥವಾ ಫಲಶ್ರುತಿ/ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿ ಸಂಗ್ರಹ.

ಇದರಲ್ಲಿ ಇವುಗಳನ್ನು ಒಳಗೊಂಡಿರುತ್ತವೆ.

- ★ ಗುಣಮಟ್ಟ
- ★ ಸಾಧನೆಯ ಮಾನದಂಡ
- ★ ಗುಣಮಟ್ಟದೊಂದಿಗೆ ಸಾಧನೆಯ ತುಲನೆ
- ★ ಚರ್ಚೆ
- ★ ಸಾಧನೆ ವೃದ್ಧಿಗೆ ಮಾಹಿತಿ ಬಳಕೆ

## ಸೇವಾ ಪರಿಶೀಲನೆಗಳು

ಸಾಧನೆಯ ಗುರಿಗಳನ್ನು ಸಾಧಿಸಲಾಗಿದೆಯೇ ಅಥವಾ ಇಲ್ಲವೆ ಎಂಬುದನ್ನು ತಿಳಿಯಲು ಬಳಸಲಾಗುತ್ತದೆ. ಸಾಧನೆಯ ಗುರಿಯನ್ನು ಸಾಧಿಸಲಾಗಿದೆ ಎಂಬುದನ್ನು ನಿರ್ಧರಿಸಲು ಗ್ರಾಹಕರ ಮೇಲಾಗುವ ಪರಿಣಾಮಗಳನ್ನು ತಿಳಿಯಲಾಗುತ್ತದೆ.

## ಸಂರಚನೆ

ಆರೋಗ್ಯ ಆರೈಕೆ ಒದಗಿಸಲು ಸಾಧ್ಯವಾಗುವಂತೆ ವಸ್ತುಗಳ ಅಂಶಗಳಿಗೆ ಸಂಬಂಧಪಡುತ್ತದೆ. ಉದಾ: ಕಟ್ಟಡಗಳು ಮತ್ತು ತರಬೇತಿ ಪಡೆದ ಸಿಬ್ಬಂದಿ.

## ಕಾಲ ಸರಣಿ ವಿಶ್ಲೇಷಣೆ (ಏಕ ಸಮೂಹ)

ಏಕ ಸಮೂಹ ಕಾಲ ಸರಣಿಯಲ್ಲಿ ವ್ಯಕ್ತಿಗಳ ಸಮೂಹ ಒಳಗೊಂಡಿರುತ್ತದೆ. ಮಧ್ಯಸ್ಥಿಕೆಯ ಪರಿಣಾಮ ಏನು ಎಂಬುದನ್ನು ತಿಳಿಯಲು ಮಧ್ಯಸ್ಥಿಕೆಗೆ ಮುನ್ನ ಮತ್ತು ವೇಳೆಯಲ್ಲಿ ಮತ್ತು /ಅಥವಾ ನಂತರ ಸ್ಥಿತಿಗಳ ಬಗ್ಗೆ ಇವರು ಅಧ್ಯಯನ ನಡೆಸುತ್ತಾರೆ.

## ಸಿಂಧುತ್ವ

ತನಿಖೆಯಲ್ಲಿನ ಸಂಗತಿಯು ಕರಾರುವಕ್ಕಾಗಿ ಪ್ರತಿಬಿಂಬಿಸುವ ಸೂಚಕವನ್ನು ಉಲ್ಲೇಖಿಸುತ್ತದೆ.

***-ನಾಜ್‌ಫೌಂಡೇಷನ್ ಇಂಟರ್‌ನ್ಯಾಷನಲ್***

# ಎರಡನೇ ಹಂತ: ಎಂ.ಎಸ್.ಎಂ. ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಕಾರ್ಯಾಗಾರ ಎರಡರ ಕಾರ್ಯಸೂಚಿ

### ಒಂದನೇ ದಿನ: ರೂಪುರೇಷೆ ಅಭಿವೃದ್ಧಿ

| | |
|---|---|
| 09-00 | ಸ್ವಾಗತ ಮತ್ತು ನೋಂದಣಿ |
| 09-15 | ನಿಯಮಗಳು |
| 09-45 | 1ನೇ ಕಾರ್ಯಾಗಾರದ ಸಾರಾಂಶ ಪರಾಮರ್ಶೆ |
| 10-15 | ಸಾಂದರ್ಭಿಕ ಅಂದಾಜು |
| 12-30 | ಪರಿವರ್ತಿತ ನಡವಳಿಕೆಗಳು |
| 14-00 | ಪ್ರತಿಕ್ರಿಯೆಯ ಪ್ರಗತಿ |
| 15-00 | ಯೋಜನಾ ವಿನ್ಯಾಸ ಅಭಿವೃದ್ಧಿ |
| 16-15 | ಪೂರಕ ಪರಿಸರ ಸೃಷ್ಟಿ |
| 16-45 | ಯೋಜನಾ ಅಭಿವೃದ್ಧಿ |
| 17-15 | ಯೋಜನೆಯ ಗುರಿ ಮತ್ತು ಉದ್ದೇಶದ ಅಭಿವೃದ್ಧಿ |

### ಎರಡನೇ ದಿನ: ಯೋಜನಾ ಅಭಿವೃದ್ಧಿ (ಭಾಗ ಒಂದು)

| | |
|---|---|
| 09-00 | ಸ್ವಾಗತ |
| 09-15 | ಒಂದನೇ ದಿನದ ಪ್ರತಿಕ್ರಿಯೆ |
| 09-45 | ಉದ್ದೇಶ ಸಾಧನೆ ಗುರಿ ಮತ್ತು ಸೂಚಕಗಳ ಅಭಿವೃದ್ಧಿ |
| 11-00 | ಫಲಿತಾಂಶ ಮತ್ತು ಫಲಶೃತಿ |
| 11-15 | ಸಮುದಾಯ ನಿರ್ಮಾಣ |
| 12-00 | ಸಮುದಾಯ ಕ್ರೋಢೀಕರಣ |
| 13-00 | ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆಯ ಮಹತ್ವದ ಭಾಗಗಳು |

### ಮೂರನೇ ದಿನ: ಯೋಜನಾ ಅಭಿವೃದ್ಧಿ (ಭಾಗ ಎರಡು)

| | |
|---|---|
| 09-00 | ಸ್ವಾಗತ |
| 09-15 | ಎರಡನೇ ದಿನದ ಪ್ರತಿಕ್ರಿಯೆ |
| 09-45 | ಬೆಂಬಲ ಸೇವೆಗಳ ಅಭಿವೃದ್ಧಿ |
| 11-15 | ಚಟುವಟಿಕೆಗಳನ್ನು ಗುರುತಿಸುವಿಕೆ |
| 14-00 | ಬಿಸಿಸಿ ಎಂದರೇನು? |
| 15-20 | ಕಾಂಡೋಮ್‌ಗಳ ಪ್ರವರ್ತನೆ |
| 16-25 | ಎಸ್‌ಟಿಐ ಚಿಕಿತ್ಸೆ ಮತ್ತು ಆರೈಕೆ |
| 17-10 | ಕನಿಷ್ಠ ಗುಣಮಟ್ಟ |

### ನಾಲ್ಕನೇ ದಿನ: ಯೋಜನಾ ನಿರ್ವಹಣೆ (ಭಾಗ ಒಂದು)

| | |
|---|---|
| 09-00 | ಸ್ವಾಗತ |

| | |
|---|---|
| 09-15 | ಮೂರನೇ ದಿನದ ಪ್ರತಿಕ್ರಿಯೆ |
| 09-45 | ಸಂಸ್ಥೆಯ ವಿನ್ಯಾಸಗಳ ಅಭಿವೃದ್ಧಿ |
| 11-15 | ಸಿಬ್ಬಂದಿ ಅಗತ್ಯತೆ |
| 12-15 | ನಿರ್ವಹಣಾ ನೀತಿ ಮತ್ತು ವಿಧಾನಗಳು |
| 14-00 | ಆಯವ್ಯಯ ಅಭಿವೃದ್ಧಿ |
| 16-00 | ಮುಂದುವರೆಯುವಿಕೆ |
| 18-00 | ವೇಳಾ ಪಟ್ಟಿ ಮತ್ತು ಕಾರ್ಯ ನಕ್ಷೆ ಅಭಿವೃದ್ಧಿ |

### ಐದನೇ ದಿನ: ಯೋಜನಾ ನಿರ್ವಹಣೆ (ಭಾಗ ಎರಡು)

| | |
|---|---|
| 09-00 | ಸ್ವಾಗತ |
| 09-15 | ನಾಲ್ಕನೇ ದಿನದ ಪ್ರತಿಕ್ರಿಯೆ |
| 09-45 | ಉಸ್ತುವಾರಿ |
| 11-30 | ಮೌಲ್ಯಮಾಪನ |
| 12-00 | ವರದಿಗಳು |
| 12-45 | ಆರ್ಥಿಕ ನಿರ್ವಹಣೆ ಮತ್ತು ವರದಿ |
| 14-30 | ಯೋಜನಾ ರೂಪುರೇಷೆ ಅಭಿವೃದ್ಧಿ |
| 15-45 | ಯೋಜನಾ ಪ್ರಸ್ತಾವನೆ ಅಭಿವೃದ್ಧಿ |
| 16-30 | ಸಾಂಸ್ಥಿಕ ಸಾಮರ್ಥ್ಯ ಅಭಿವೃದ್ಧಿ |
| 17-30 | ಮುಂದಿರುವ ದಾರಿ ಮತ್ತು ಮುಕ್ತಾ |

## ಎರಡನೇ ಹಂತ: ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ ಮಾದರಿ ವೇಳಾ ಪಟ್ಟಿಗಳು

### ಒಂದನೇ ದಿನ: ರೂಪುರೇಷೆ ಅಭಿವೃದ್ಧಿ

| ಸಮಯ | | ನಿಮಿಷಗಳು |
|---|---|---|
| 09-00 | ಸ್ವಾಗತ, ಪೀಠಿಕೆ ಮತ್ತು ಮನನ | (15ನಿಮಿಷ) |
| 09-15 | ನಿಯಮಗಳು | (30ನಿಮಿಷ) |
| 09-45 | ಒಂದನೇ ಕಾರ್ಯಾಗಾರದ ಸಾರಾಂಶ ಪರಾಮರ್ಶೆ | (15ನಿಮಿಷ) |
| 10.00 | 2ನೇ ಕಾರ್ಯಾಗಾರದ ಉದ್ದೇಶ ಮತ್ತು ಗುರಿ | (15ನಿಮಿಷ) |
| 10.15 | ಸಾಂದರ್ಭಿಕ ಅಧ್ಯಯನ | (60ನಿಮಿಷ) |
| 11.15 | ವಿರಾಮ | (15ನಿಮಿಷ) |
| 11.30 | ಸಾಂದರ್ಭಿಕ ಅಧ್ಯಯನ ಮುಂದುವರಿಕೆ | (60ನಿಮಿಷ) |
| 12.30 | ಪರಿವರ್ತನೀಯ ನಡವಳಿಕೆಗಳು | (30ನಿಮಿಷ) |
| 13.00 | ಭೋಜನೆ | (60ನಿಮಿಷ) |
| 14.00 | ಪರಿವರ್ತನೀಯ ನಡವಳಿಕೆಗಳು ಮುಂದುವರಿಕೆ | (60ನಿಮಿಷ) |

| | | |
|---|---|---|
| 15.00 | ಪ್ರತಿಕ್ರಿಯೆಯ ಅಭಿವೃದ್ಧಿ | (60ನಿಮಿಷ) |
| 16.00 | ವಿರಾಮ | (15ನಿಮಿಷ) |
| 16.15 | ಸಮರ್ಥನೀಯ ಪರಿಸರ ಸೃಷ್ಟಿ | (30ನಿಮಿಷ) |
| 16.45 | ಲೈಂಗಿಕ ಆರೋಗ್ಯ ಯೋಜನೆ ಅಭಿವೃದ್ಧಿ | (30ನಿಮಿಷ) |
| 17./15 | ಯೋಜನೆಯ ಗುರಿ ಮತ್ತು ಉದ್ದೇಶದ ಅಭಿವೃದ್ಧಿ | (45ನಿಮಿಷ) |
| 18.00 | ಮುಕ್ತಾಯ | |

## ಎರಡನೇ ದಿನ: ಯೋಜನಾ ಅಭಿವೃದ್ಧಿ (ಭಾಗ ಒಂದು)

| **ಸಮಯ** | | **ನಿಮಿಷಗಳು** |
|---|---|---|
| 09.00 | ಸ್ವಾಗತ ಮತ್ತು ಮನನ | (15ನಿಮಿಷ) |
| 09.15 | ಒಂದನೇ ದಿನದ ಮಾಹಿತಿ | (30ನಿಮಿಷ) |
| 09.45 | ಸಾಧನೆ ಗುರಿಗಳು ಮತ್ತು ಸೂಚಕಗಳು ಅಭಿವೃದ್ಧಿ | (75ನಿಮಿಷ) |
| 11.00 | ವಿರಾಮ | (15ನಿಮಿಷ) |
| 11.15 | ಫಲಿತಾಂಶ ಮತ್ತು ಫಲಶೃತಿ | (45ನಿಮಿಷ) |
| 12.00 | ಲೈಂಗಿಕ ಆರೋಗ್ಯ ಸುಧಾರಣೆ ರೂಪುರೇಷೆ | (60ನಿಮಿಷ) |
| 13.00 | ಭೋಜನ | (60ನಿಮಿಷ) |
| 14.00 | ಕಾರ್ಯತಂತ್ರಗಳು ಮುಂದುವರಿಕೆ | (40ನಿಮಿಷ) |
| 14.40 | ಸಮುದಾಯ ನಿರ್ಮಾಣ | (40ನಿಮಿಷ) |
| 15.20 | ಸಮುದಾಯ ಕ್ರೋಢೀಕರಣ | (40ನಿಮಿಷ) |
| 16.00 | ವಿರಾಮ | (15ನಿಮಿಷ) |
| 16.15 | ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆಯ ಮಹತ್ವದ ಅಂಶಗಳು | (15ನಿಮಿಷ) |
| 18.00 | ಮುಕ್ತಾಯ | |

## ಮೂರನೇ ದಿನ: ಯೋಜನಾ ಅಭಿವೃದ್ಧಿ (ಭಾಗ ಎರಡು)

| **ಸಮಯ** | | **ನಿಮಿಷಗಳು** |
|---|---|---|
| 09.00 | ಸ್ವಾಗತ ಮತ್ತು ಮನನ | (15ನಿಮಿಷ) |
| 09.15 | ಎರಡನೇ ದಿನದ ಮಾಹಿತಿ | (30ನಿಮಿಷ) |
| 09.45 | ಬೆಂಬಲ ಸೇವೆಗಳ ಅಭಿವೃದ್ಧಿ | (75ನಿಮಿಷ) |
| 11.00 | ವಿರಾಮ | (15ನಿಮಿಷ) |
| 11.15 | ಚಟುವಟಿಕೆಗಳ ಗುರುತಿಸುವಿಕೆ | (150ನಿಮಿಷ) |
| 13.00 | ಭೋಜನ | (60ನಿಮಿಷ) |
| 14.00 | ಬಿಸಿಸಿ ಎಂದರೇನು | (120ನಿಮಿಷ) |
| 15.20 | ಕಾಂಡೋಮ್ ಬಳಕೆ ಉತ್ತೇಜನ | (50ನಿಮಿಷ) |
| 16.10 | ವಿರಾಮ | (15ನಿಮಿಷ) |
| 16.25 | ಎಸ್‌ಟಿಐ ಚಿಕಿತ್ಸೆ ಮತ್ತು ಆರೈಕೆ | (45ನಿಮಿಷ) |
| 17.10 | ಕನಿಷ್ಠ ಗುಣಮಟ್ಟಗಳು | (60ನಿಮಿಷ) |
| 18.10 | ಮುಕ್ತಾಯ | |

## ನಾಲ್ಕನೇ ದಿನ: ಯೋಜನಾ ನಿರ್ವಹಣೆ (ಭಾಗ ಒಂದು)

| ಸಮಯ | | ನಿಮಿಷಗಳು |
|---|---|---|
| 09.00 | ಸ್ವಾಗತ ಮತ್ತು ಮನನ | (15ನಿಮಿಷ) |
| 09.15 | ಮೂರನೇ ದಿನದ ಮಾಹಿತಿ | (30ನಿಮಿಷ) |
| 09.45 | ಸಂಸ್ಥೆಗಳು ವಿನ್ಯಾಸಗಳ ಅಭಿವೃದ್ಧಿ | (75ನಿಮಿಷ) |
| 11.00 | ವಿರಾಮ | (15ನಿಮಿಷ) |
| 11.15 | ಸಿಬ್ಬಂದಿ ಅಗತ್ಯಗಳು | (60ನಿಮಿಷ) |
| 12.15 | ನಿರ್ವಹಣಾ ನೀತಿ ಮತ್ತು ವಿಧಾನಗಳು | (45ನಿಮಿಷ) |
| 13.00 | ಭೋಜನ | (60ನಿಮಿಷ) |
| 14.00 | ಆಯವ್ಯಯ ಅಭಿವೃದ್ಧಿ | (90ನಿಮಿಷ) |
| 15.30 | ಸುಸ್ಥಿರತೆ | (30ನಿಮಿಷ) |
| 16.00 | ವಿರಾಮ | (15ನಿಮಿಷ) |
| 16.15 | ವೇಳಾ ಪಟ್ಟಿ ಮತ್ತು ಕಾರ್ಯಯೋಜನೆ ಅಭಿವೃದ್ಧಿ | (150ನಿಮಿಷ) |
| 18.00 | ಮುಕ್ತಾಯ | |

## ಐದನೇ ದಿನ: ಯೋಜನಾ ನಿರ್ವಹಣೆ (ಭಾಗ ಎರಡು)

| ಸಮಯ | | ನಿಮಿಷಗಳು |
|---|---|---|
| 09.00 | ಸ್ವಾಗತ ಮತ್ತು ಮನನ | (15ನಿಮಿಷ) |
| 09.15 | ನಾಲ್ಕನೇ ದಿನದ ಮಾಹಿತಿ | (30ನಿಮಿಷ) |
| 09.45 | ಪರಿಶೀಲನೆ | 90 |
| 11.15 | ವಿರಾಮ | (15ನಿಮಿಷ) |
| 11.30 | ಮೌಲ್ಯ ಮಾಪನ | (30ನಿಮಿಷ) |
| 12.00 | ಹಣಕಾಸು ನಿರ್ವಹಣೆ ಮತ್ತು ವರದಿಗಾರಿಕೆ | (45ನಿಮಿಷ) |
| 13.30 | ಭೋಜನ | (60ನಿಮಿಷ) |
| 14.30 | ಯೋಜನಾ ಕಾನೂನು ಚೌಕಟ್ಟು | (75ನಿಮಿಷ) |
| 15.45 | ಯೋಜನಾ ಪ್ರಸ್ತಾವನೆ ಅಭಿವೃದ್ಧಿ | (30ನಿಮಿಷ) |
| 16.15 | ವಿರಾಮ | (15ನಿಮಿಷ) |
| 16.30 | ಯೋಜನಾ ಪ್ರಸ್ತಾವನೆ ಅಭಿವೃದ್ಧಿ ಮುಂದುವರಿಕೆ | (60ನಿಮಿಷ) |
| 17.30 | ಸಾಂಸ್ಥಿಕ ಸಾಮರ್ಥ್ಯ ಅಭಿವೃದ್ಧಿ | (30ನಿಮಿಷ) |
| 18.00 | ಮುಂದಿನ ದಾರಿ ಮತ್ತು ಮುಕ್ತಾಯ | |

# ಎರಡನೇ ಹಂತ: ಎಂ.ಎಸ್.ಎಂ. ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಒಂದನೇ ದಿನ: ರೂಪುರೇಷೆ ಅಭಿವೃದ್ಧಿ

**ಬೆಳಿಗ್ಗೆ 9.00 ಸ್ವಾಗತ, ನೋಂದಣಿ ಮತ್ತು ಮನನ**

ಪ್ರತಿನಿಧಿಗಳು ತರಬೇತಿ ಸ್ಥಳವನ್ನು ಪ್ರವೇಶಿಸುತ್ತಿದ್ದಂತೆ, ದೈನಂದಿನ ನೋಂದಣಿ ಅರ್ಜಿಯನ್ನು ಪೂರ್ಣಗೊಳಿಸಬೇಕು. ಅವರಿಗೆ ಹೆಸರು ಪಟ್ಟಿ, ಬರವಣಿಗೆ ಕಾಗದ ಮತ್ತು ಲೇಖನಿಯನ್ನು ನೀಡಬೇಕು. ಭಾಗವಹಿಸುವ ಪ್ರತಿಯೊಬ್ಬರೂ ಪ್ರತಿ ದಿನದ ಹಾಜರಾತಿಯನ್ನು ನೋಂದಾಯಿಸಿಕೊಳ್ಳಬೇಕು

## ಅಭ್ಯಾಸ1 : ಮನನ

ಜೋಡಿಯಾಗಿ, ಪ್ರತಿನಿಧಿಗಳನ್ನು ಪರಸ್ಪರ ಪರಿಚಯಿಸಿಕೊಳ್ಳುವಂತೆ ತಿಳಿಸಲಾಗುತ್ತದೆ. ತನ್ನನ್ನು ತಾನು ಇಷ್ಟಪಡುವ ಪೂರಕ ಅಂಶವನ್ನು ಹೇಳಬೇಕಾಗುತ್ತದೆ. ಪ್ರತಿನಿಧಿ ತನ್ನ ಸಂಗಾತಿಯೊಂದಿಗೆ 3ನಿಮಿಷಗಳವರೆಗೂ ಮಾತನಾಡಬಹುದು.

ಸಹಾಯಕರು ತನ್ನ ಬಗ್ಗೆ ಪೂರಕ ಅಂಶವನ್ನು ಹೇಳುವ ಮೂಲಕ ಇದನ್ನು ಪ್ರದರ್ಶಿಸುತ್ತಾರೆ.

ಈ ಅಭ್ಯಾಸದ ನಂತರ ಪ್ರತಿನಿಧಿಗಳು ದೊಡ್ಡ ಸಮೂಹಕ್ಕೆ ಮಾಹಿತಿ ಹಿಂದಿರುಗಿಸಬೇಕು.

ಕಾಲ: 15ನಿಮಿಷಗಳು

ನಿಯಮಗಳು

ಬೆಳಿಗ್ಗೆ 9.15

ನಿಯಮಗಳನ್ನು ವಿವರಿಸಿ ಮತ್ತು ಯಾವ ಉದ್ದೇಶಕ್ಕಾಗಿ ಬಳಸಲ್ಪಡುತ್ತಿದೆ ತಿಳಿಸಿ.

## ಅಭ್ಯಾಸ 2 ನಿಯಮಗಳ ಅಭಿವೃದ್ಧಿ

ಕಾರ್ಯಾಗಾರ ಚೆನ್ನಾಗಿ ನಡೆಯಬೇಕಾದರೆ ಯಾವ ಮಾರ್ಗಸೂಚಿ ಅಸ್ತಿತ್ವದಲ್ಲಿರಬೇಕೆಂಬ ಬಗ್ಗೆ ಪ್ರತಿನಿಧಿಗಳನ್ನು ಕೇಳಲಾಗುತ್ತದೆ. ಕಾರ್ಯಾಗಾರದಲ್ಲಿ ಎಲ್ಲರೂ ಸಂಪೂರ್ಣವಾಗಿ ಭಾಗವಹಿಸಿದರೆ ಎಂಬುದನ್ನು ತಿಳಿಯಬೇಕಾಗುತ್ತದೆ. ಪ್ರತಿನಿಧಿಗಳನ್ನು ಎರಡು ಗುಂಪುಗಳಾಗಿ ವಿಭಜಿಸಬೇಕು.

ಕಾಲ: 10 ನಿಮಿಷಗಳು

ದೊಡ್ಡ ಗುಂಪಿನಲ್ಲಿ ಪ್ರತಿ ಸಣ್ಣ ಗುಂಪು ತನ್ನ ನಿಯಮಗಳು ಪಟ್ಟಿ ಮತ್ತು ಅದರ ಹಿಂದಿನ ಉದ್ದೇಶವನ್ನು ಮಂಡಿಸಬೇಕು. ನಿಯಮಗಳ ಸಿದ್ಧಾಂತ ಸಮನ್ವಯವನ್ನು ತಿಳಿಸಬೇಕು. ಸಹಾಯಕರು ಕೂಡ ಸಮೂಹಕ್ಕೆ ಶಿಫಾರಸು ಮಾಡಬಹುದು.

ಕಾಲ : 30ನಿಮಿಷಗಳು

## ಉದ್ದೇಶ

ಪರಿಣಾಮಕಾರಿ ಸಹಕಾರಕ್ಕಾಗಿ ಸಾಮಾನ್ಯ ನಿಮಯಗಳ ಮನವರಿಕೆ ಮತ್ತು ಅಭಿವೃದ್ಧಿಗಾಗಿ ಕಾರ್ಯಾಗಾರದ ಪ್ರತಿನಿಧಿಗಳನ್ನು ಸಜ್ಜುಗೊಳಿಸುವುದು.

ಬೆಳಿಗ್ಗೆ 9.45 ಮೊದಲ ಸಾರಾಂಶ ಪರಾಮರ್ಶೆ

## ಸಹಾಯಕರ ಭಾಷಣ

ಇದು ಮೊದಲ ಕಾರ್ಯಾಗಾರ, ಅದರ ಪರಿವಿಡಿ ಮತ್ತು ವಿವರದ ಸಂಕ್ಷಿಪ್ತ ಪರಿಚಯ ಹಾಗೆಯೇ ಎಚ್‌ಐವಿ/ ಏಡ್ಸ್ ಮತ್ತು ಎಸ್‌ಟಿಐ ಕುರಿತ ಸಂಕ್ಷಿಪ್ತ ಮನನ ಪರಾಮರ್ಶೆಯ ಪರಿಚಯವನ್ನು

ಒಳಗೊಂಡಿರುತ್ತದೆ.

ಬೆಳಿಗ್ಗೆ 10.00 ಎರಡನೇ ಕಾರ್ಯಾಗಾರದ ಉದ್ದೇಶ ಮತ್ತು ಗುರಿ

## ಸಹಾಯಕರ ಭಾಷಣ

ತರಬೇತಿ ಕಾರ್ಯಕ್ರಮದ ಸಂಕ್ಷಿಪ್ತ ರೂಪವನ್ನು ತಿಳಿಸಬೇಕು

- ★ ಯಾರಿಗಾಗಿ
- ★ ಕಾರ್ಯಾಗಾರದ ಕಾರ್ಯಸೂಚಿ
- ★ ಅದರ ಉದ್ದೇಶ
- ★ ಫಲಿತಾಂಶ

ಕಾಲ: 15 ನಿಮಿಷಗಳು

ಬೆಳಿಗ್ಗೆ 10.15 ಸಾಂದರ್ಭಿಕ ಅಧ್ಯಯನ

## ಸಹಾಯಕರ ಭಾಷಣ

ಪ್ರಕ್ರಿಯೆ ಅಭಿವೃದ್ಧಿ ಮತ್ತು ಅಧ್ಯಯನಕ್ಕಾಗಿ ಬಳಕೆಯ ಪರಾಮರ್ಶೆ ನೀಡಬೇಕು. ಅಧ್ಯಯನ ವರದಿ ಮತ್ತು ಅದರ ಉಪ ಸಂಹಾರಗಳ ಸಂಕ್ಷಿಪ್ತ ಪರಾಮರ್ಶೆ ನೀಡಬೇಕು. ಸುದ್ದಿ ಅಂಶಗಳು/ ತಲೆ ಬರಹಗಳಾಗಿ ನೀಡಬೇಕು.

## ಎಂಎಸ್ಎಂ ನಕ್ಷೆ ಪ್ರದರ್ಶಿಸಿ

ಕಾಲ : 20 ನಿಮಿಷಗಳು

ಲೈಂಗಿಕ ಆರೋಗ್ಯದ ಬಗ್ಗೆ ಡಬ್ಲ್ಯೂಎಚ್ಒ ವ್ಯಾಖ್ಯಾನ ನೀಡಿ

ಅಭ್ಯಾಸ 3: ಎಂಎಸ್ಎಂಗೆ ಸಂಬಂಧಿಸಿದ ವಿಷಯಗಳು ಯಾವುವು?

ಈ ಕೆಳಗಿನ ಹಿನ್ನೆಲೆಯಲ್ಲಿ ಎಂಎಸ್ಎಂನ ವಿಷಯಗಳು ಯಾವುವು:

- ★ ದೈಹಿಕ
- ★ ಮಾನಸಿಕ/ಬೌದ್ಧಿಕ
- ★ ಮಾನಸಿಕ
- ★ ಸಾಮಾಜಿಕ

ಪ್ರತಿ ತಲೆಬರಹದ ಅನ್ವಯ ಎಂಎಸ್ಎಂನ ವಿಷಯಗಳು ಯಾವುವು ಎಂಬ ಬಗ್ಗೆ ಗುಂಪಿನ ಪ್ರತಿನಿಧಿಗಳು ಚಿಂತನೆ ನಡೆಸಿ ಅಂಶಗಳನ್ನು ಬರೆಯುವಂತೆ ತಿಳಿಸಬೇಕು.

ಕಾಲ: 20ನಿಮಿಷಗಳು

ಇದಾದ ಬಳಿಕ, ಅಧ್ಯಯನ ವರದಿಯಿಂದ ಪ್ರತಿನಿಧಿಗಳು ತೆಗೆದುಕೊಂಡ ವಿಷಯಗಳನ್ನು ತೋರಿಸಬೇಕು. ತಲೆ ಬರಹವನ್ನು ತೋರಿಸಬೇಕು. ತುಲನೆ ಮತ್ತು ಚರ್ಚೆ, ಸುದ್ದಿಯ ಅಂಶವಾಗಿ ಯಾವುದೇ ಮುಖ್ಯಅಂಶವನ್ನು ಬರೆಯಬೇಕು ಹಾಗೂ ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು.

ಕಾಲ : 20ನಿಮಿಷಗಳು

# ಎರಡನೇ ಹಂತ: ಎಂ.ಎಸ್.ಎಂ. ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

ಬೆಳಿಗ್ಗೆ 11.15 ವಿರಾಮ

ಬೆಳಿಗ್ಗೆ 11.30 ಸಾಂದರ್ಭಿಕ ಅಧ್ಯಯನ ಮುಂದುವರಿಕೆ

## ಅಭ್ಯಾಸ4: ಇಂಥ ವಿಷಯಗಳಿಂದ ಅಗತ್ಯಗಳನ್ನು ಬರೆಯಿರಿ.

ಗುರುತಿಸಲ್ಪಟ್ಟ ವಿಷಯಗಳಿಂದ ಉದ್ಭವಿಸಿದ ಅಗತ್ಯಗಳ ಪಟ್ಟಿಯನ್ನು ಸಿದ್ಧಪಡಿಸುವಂತೆ ಸಮೂಹಕ್ಕೆ ತಿಳಿಸಬೇಕು. ಇವು ಮತ್ತೆ ದೈಹಿಕ, ಮಾನಸಿಕ/ಭೌದ್ಧಿಕ, ಮಾನಸಿಕ ಮತ್ತು ಸಾಮಾಜಿಕ ತಲೆ ಬರಹಗಳಡಿ ಬರಬೇಕು.

ಸಮಯ: 15ನಿಮಿಷಗಳು

ಇದಾದ ನಂತರ ವರದಿಯ ಶಿಫಾರಸುಗಳನ್ನು ತೋರಿಸಿ ತುಲನೆ ಮಾಡಬೇಕು ಮತ್ತು ಎಂಎಸ್ಎಂಗಳಿಗೆ ಲೈಂಗಿಕ ಆರೋಗ್ಯ ಪ್ರವರ್ತನಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಬೇಕು.

ಮಧ್ಯಾಹ್ನ: 12.30 ಪರಿವರ್ತನಿಯ ನಡವಳಿಕೆಗಳು

## ಮಧ್ಯಸ್ಥಿಕೆದಾರರ ಭಾಷಣ

ಎಂಎಸ್ಎಂ ಲೈಂಗಿಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿಯ ಉದ್ದೇಶದ ಬಗ್ಗೆ ಪ್ರತಿನಿಧಿಗಳಿಗೆ ವಿವರಿಸಬೇಕು.

ಉದ್ದೇಶ: ಎಸ್.ಟಿ.ಐ/ಎಚ್.ಐ.ವಿ. ಸೋಂಕು ಗಂಡಾಂತರ ತಗ್ಗಿಸುವಿಕೆ

ಇದನ್ನು ಸಾಧಿಸಲು ಬಳಸಬಹುದಾದ ವಿಧಾನಗಳ ಬಗ್ಗೆ ಚರ್ಚಿಸಬೇಕು.

ವಿಧಾನ: ಸುರಕ್ಷಿತ ಲೈಂಗಿಕ ಕ್ರಿಯೆ ಅಭ್ಯಾಸಗಳತ್ತ ನಡವಳಿಕೆ ಬದಲಾವಣೆಗೆ ಉತ್ತೇಜನ

ಇದನ್ನು ಗಂಡಾಂತರ ತಗ್ಗಿಸುವ ತಂತ್ರ ಎಂದು ಕರೆಯಲಾಗುತ್ತದೆ.

## ವಿವರಣಾ ಆಯ್ಕೆಗಳು:

- ಲೈಂಗಿಕ ಕ್ರಿಯೆ ಇಲ್ಲದಿರುವುದು
- ಸುರಕ್ಷಿತ ಲೈಂಗಿಕತೆ (ಇದರ ಅರ್ಥ ಏನು?)
- ಸುರಕ್ಷಿತ ಲೈಂಗಿಕತೆ(ಇದರ ಅರ್ಥ ಏನು?)
- ಸಂಗಾತಿಗಳ ಸಂಖ್ಯೆ ಇಳಿಕೆ
- ಏಕ ಸಂಗಾತಿತ್ವ
- ಗಂಡಾಂತರಕಾರ ಲೈಂಗಿಕ ಕ್ರಿಯೆ ಬೇಡ
- ಅಲ್ಪ ಗಂಡಾಂತರ ಲೈಂಗಿಕ ಕ್ರಿಯೆ
- ಕಾಂಡೋಮ್ ಬಳಕೆ
- ಆರಂಭಿಕಲ್ಲೇ ಎಸ್ಟಿಐ ಚಿಕಿತ್ಸೆ
- ಲೈಂಗಿಕ ಸಂಗಾತಿಗಳಿಗೆ ಚಿಕಿತ್ಸೆ

ಈ ಪ್ರತಿ ಆಯ್ಕೆಗಳ ಬಗ್ಗೆ ಚರ್ಚೆ ಮತ್ತು ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿ, ಅಭ್ಯರ್ಥಿಗಳಿಂದ ಮಾಹಿತಿ ಪಡೆಯುವಿಕೆ

## ಕೇಳಬೇಕಾದ ಪ್ರಶ್ನೆಗಳು

★ ಈ ವಿಧಾನಗಳು ಹೇಗೆ ಸಾಧನೀಯ?

★ ಎಂಎಸ್ಎಂ ನಡವಳಿಕೆಗಳು ಅನನ್ಯತೆ ಮತ್ತು ಚೌಕಟ್ಟುಗಳ ವಿಷಯದಲ್ಲಿ ಇವು ಅರಿವು ಮೂಡಿಸುತ್ತದೆಯೆ?

ಈ ಕೆಳಗಿನವುಗಳನ್ನು ಬಳಸಿ ನಡವಳಿಕೆ ಮತ್ತು ನಡವಳಿಕೆ ಪರಿವರ್ತನೆಯ ಚೌಕಟ್ಟಿನ ಬಗ್ಗೆ ಚರ್ಚಿಸಿ

ನಡವಳಿಕೆ ಹುಟ್ಟುಹಾಕುವ ಪ್ರಕ್ರಿಯೆಗಳು

ನನ್ನ ಭಾವನೆ; ಬಯಕೆಗಳೇನು

ನನ್ನ ನಂಬಿಕೆ; ಚಿಂತನೆ ಏನು

ನಾನೇನು ಮಾಡುತ್ತೇನೆ;ನಡವಳಿಕೆ ಏನು

## ಪರಿಣಾಮಗಳು

ನಡವಳಿಕೆ ಪರಿವರ್ತನೆ ಅವಶ್ಯಕತೆಗಳು

★ ಜ್ಞಾನ

★ ಬಯಕೆ

★ ಆತ್ಮವಿಶ್ವಾಸ

★ ಕೌಶಲ್ಯ

★ ಸಾಮರ್ಥ್ಯ

ಸಮಯ: 30ನಿಮಿಷಗಳು

ಮಧ್ಯಾಹ್ನ 1.00 ಭೋಜನ

ಮಧ್ಯಾಹ್ನ 2.00 ಪರಿವರ್ತನಿಯ ನಡವಳಿಕೆಗಳು ಮುಂದುವರಿಕೆ

## ಅಭ್ಯಾಸ6: ನಡವಳಿಕೆ ಪರಿವರ್ತನೆಗೆ ಉತ್ತೇಜನ

ಎಸ್‌ಟಿಐ/ಎಚ್‌ಐವಿ ಸೋಂಕುಗಳ ನಿಯಂತ್ರಣ ಮತ್ತು ಲೈಂಗಿಕ ಆರೋಗ್ಯ ಉತ್ತೇಜನಕ್ಕಾಗಿ ಎಂಎಸ್‌ಎಂಗಳಲ್ಲಿ ನಡವಳಿಕೆ ಬದಲಾವಣೆಗೆ ಪ್ರೋತ್ಸಾಹ/ ಅನುವು ಮಾಡಿಕೊಡಲು ಸಾಧ್ಯವಾಗುವ ಆಲೋಚನೆಗಳನ್ನು ಪಟ್ಟಿ ಮಾಡುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು.

ಎಂ.ಎಸ್.ಎಂ ಸಂಗಾತಿಗಳು ಪುರುಷರು/ ಮಹಿಳೆಯರು/ ಪತ್ನಿಯರಾಗಿರಬೇಕೆಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು.

ಸಮಯ: 30ನಿಮಿಷಗಳು

ಇದಾದ ನಂತರ, ಪ್ರತಿ ಸಮೂಹ ತಮ್ಮ ಪಟ್ಟಿಯನ್ನು ಸಲ್ಲಿಸಬೇಕು. ತಮ್ಮ ಪ್ರಾಯೋಗಿಕತ್ವ ಮತ್ತು ಸಾಧನೆಯ ವಿಷಯಗಳಲ್ಲಿ ಉದ್ಭವವಾಗುವ ಪ್ರತಿ ಅಂಶಗಳ ಬಗ್ಗೆ ಚರ್ಚೆ ನಡೆಯಬೇಕು ಎಲ್ಲ ಪ್ರಮುಖ ಅಂಶಗಳನ್ನು ಪರಾಮರ್ಶಿಸಿ, ಪ್ರತಿನಿಧಿಗಳಿಂದ ಮಾಹಿತಿ ಪಡೆಯಬೇಕು.

ಚರ್ಚೆ ಮುಕ್ತಾಯದ ವೇಳೆ, ಎಚ್.ಐ.ವಿಗೆ ಚುಚ್ಚುಮದ್ದು ಇಲ್ಲ ಮತ್ತು ಏಡ್ಸ್ ಗುಣಪಡಿಸಲಾಗದ ಮಾರಕ ರೋಗ ಎಂಬುದನ್ನು ಪ್ರತಿನಿಧಿಗಳಿಗೆ ತಿಳಿಸಬೇಕು.

ಬದುಕಿಗಾಗಿ ಕಾಂಡೋಮ್‌ಗಳು ಈ ಹೇಳಿಕೆಯ ಆಯಾಮಗಳನ್ನು ವಿವರಿಸಬೇಕು.

ಈ ವಿಚಾರ ಕೇವಲ ಲೈಂಗಿಕ ಅಭ್ಯಾಸಗಳ ಬದಲಾವಣೆಗೆ ಮಾತ್ರವಲ್ಲ. ಭವಿಷ್ಯದಲ್ಲಿ ಹೇಗೆ ಇದನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಬಗ್ಗೆ ಸಹ ವಿವರಿಸಬೇಕು. ಕೇವಲ ಒಂದು ಸುರಕ್ಷಿತ ಲೈಂಗಿಕ ಅಭ್ಯಾಸ ವಿಫಲವಾದಲ್ಲಿ ಅದು ಸೋಂಕಿಗೆ ಕಾರಣವಾಗುತ್ತದೆ.

ಯಾವುದೇ ಪ್ರಮುಖ ಅಂಶವನ್ನು ಟಿಪ್ಪಣಿ ಮಾಡಿ, ಸ್ಪರ್ಧಿಗಳಿಂದ ಮಾಹಿತಿ ಪಡೆಯಬೇಕು.

ಸಮಯ: 30ನಿಮಿಷಗಳು

## ಉದ್ದೇಶ

ಅಧಿಕ ಗಂಡಾಂತರ ನಡವಳಿಕೆಗಳನ್ನು ಅಭ್ಯಾಸ ಮಾಡಿಕೊಂಡಿರುವ ಎಂ.ಎಸ್.ಎಂಗಳಲ್ಲಿ ನಡವಳಿಕೆ ಬದಲವಾಣೆಗೆ ಪ್ರೋತ್ಸಾಹ ನೀಡುವ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಲು ಪ್ರತಿನಿಧಿಗಳಿಗೆ ನೆರವಾಗುವಿಕೆ

ಮಧ್ಯಾಹ್ನ: 3.00 ಪ್ರತಿಕ್ರಿಯೆ ಅಭಿವೃದ್ಧಿ

## ಅಭ್ಯಾಸ: 7 ಯಾವ ಪ್ರತಿಕ್ರಿಯೆಯನ್ನು ನಾವು ಅಭಿವೃದ್ಧಿಗೊಳಿಸಬೇಕು?

ಅಭ್ಯಾಸ 6ರಲ್ಲಿ ಉದ್ಭವವಾದ ಆಲೋಚನೆಗಳ ಬಗ್ಗೆ ಮನನ ಮಾಡಿಕೊಂಡು ಯಾವ ಪ್ರತಿಕ್ರಿಯೆಗಳನ್ನು ಅಭಿವೃದ್ಧಿಗೊಳಿಸಬೇಕೆಂಬ ಬಗ್ಗೆ ಸಮೂಹದ ಪ್ರತಿನಿಧಿಗಳಿಗೆ ತಿಳಿಸಬೇಕು.

## ನಡವಳಿಕೆ ಬದಲಾವಣೆಗೆ ಉತ್ತೇಜನ

- ★ ಗಂಡಾಂತರ ತಗ್ಗಿಸುವ ಕಾರ್ಯತಂತ್ರ
- ★ ಎಸ್‌ಟಿಐಗೆ ಆರಂಭಿಕ ಚಿಕಿತ್ಸೆ
- ★ ಪುರುಷರು ಮತ್ತು ಮಹಿಳೆಯರ ಸಂಗಾತಿಗಳಿಗೆ ಚಿಕಿತ್ಸೆ

ಸಮಯ: 15ನಿಮಿಷಗಳು

ಸಮೂಹಗಳನ್ನು ಒಟ್ಟಿಗೆ ಸೇರಿಸಿ ಪ್ರತಿ ಸಮೂಹಕ್ಕೂ ವರದಿ ಮಂಡಿಸಿ, ಚರ್ಚಿಸುವಂತೆ ಸೂಚಿಸಿ ಯಾವುದಾದರೂ ಪ್ರಮುಖ ಅಂಶ ಉದ್ಭವಿಸುವುದೇ ಎಂಬುದನ್ನು ಗಮನಿಸಿ ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು. ಇದನ್ನು ಗುರಿ ಹೊಂದಿದ ಮಧ್ಯಸ್ಥಿಕೆ ಎಂಬುದನ್ನು ಪ್ರತಿನಿಧಿಗಳಿಗೆ ವಿವರಿಸಬೇಕು. ಗುರಿ ಹೊಂದಲಾದ ಉಪ-ಜನಸಂಖ್ಯೆ: ಹೆಚ್ಚು ಗಂಡಾಂತರಕಾರಿ ಎಂಎಸ್‌ಎಂ (ಸೂಚನೆ: ಎಲ್ಲ ಎಂಎಸ್‌ಎಂಗಳು ಹೆಚ್ಚು ಗಂಡಾಂತರಕಾರಿ ಆಗಿರುವುದಿಲ್ಲ. ಆದರೂ ಇದನ್ನು ಚರ್ಚಿಸಬೇಕು)

ಅಗತ್ಯವಿದ್ದರೆ ಅಧ್ಯಯನ ವರದಿಯನ್ನು ಉಲ್ಲೇಖಿಸಬೇಕು.

ಸಮಯ: 15ನಿಮಿಷಗಳು

## ಅಭ್ಯಾಸ: 8 ಯಾರು ಪ್ರತಿಕ್ರಿಯಿಸಬೇಕು? ಏಕೆ?

ಮೊದಲು ಈ ಅಂಶಗಳನ್ನು ವಿವರಿಸಬೇಕು

- ★ ಸರ್ಕಾರಿ ಸಂಸ್ಥೆ
- ★ ಎನ್‌ಜಿಓ (ಸರ್ಕಾರೇತರ ಸಂಸ್ಥೆ)
- ★ ಎಎಸ್‌ಓ (ಏಡ್ಸ್ ಸೇವಾ ಸಂಸ್ಥೆಗಳು)
- ★ ಸಿಬಿಓ (ಸಮೂದಾಯ ಆಧರಿತ ಸಂಸ್ಥೆ)

ಬಳಿಕ ಈ ಬಗ್ಗೆ ಚರ್ಚಿಸಿ, ಏನ್ನನ್ನು ಪ್ರತಿಕ್ರಿಯಿಸಬೇಕು ಮತ್ತು ಏಕೆ ಎಂಬುದನ್ನು ನಿರ್ಧರಿಸುವಂತೆ ಸಮೂಹದ ಪ್ರತಿನಿಧಿಗಳಿಗೆ ತಿಳಿಸಬೇಕು

ಸಮಯ: 15ನಿಮಿಷಗಳು

ಗುಂಪುಗಳನ್ನು ಒಟ್ಟಿಗೆ ಹಿಂದಕ್ಕೆ ಕರೆಸಿಕೊಂಡು ಪ್ರತಿ ಸಮೂಹ ವಿವರ ನೀಡುವಂತೆ ಮಾಡಬೇಕು. ಈ ವಿವರಗಳನ್ನು ಚಿಂತನೆ ನಡೆಸಬೇಕು. ಯಾವುದಾದರೂ ಪ್ರಮುಖ ಅಂಶಗಳು ಉದ್ಭವವಾಗುತ್ತದೋ ಗಮನಿಸಬೇಕು ಮತ್ತು ಪ್ರತಿನಿಧಿಗಲಿಂದ ಮಾಹಿತಿ ಕೇಳಬೇಕು.

ಸಮಯ : 15ನಿಮಿಷಗಳು

## ಉದ್ದೇಶ

ಎಚ್‌ಐವಿ/ ಏಡ್ಸ್ ಸಬಲೀಕರಣ, ಮಾಲೀಕತ್ವ ಮತ್ತು ನಡವಳಿಕೆ ಬದಲಾವಣೆ ಬಗ್ಗೆ ಸಮುದಾಯ ಪ್ರತಿಕ್ರಿಯೆ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳಲು ಪ್ರತಿನಿಧಿಗಳಿಗೆ ಅನುವು ಮಾಡಿಕೊಡುವಿಕೆ

ಸಂಜೆ 4.00 ವಿರಾಮ

ಸಂಜೆ 4.15 ಪೂರಕ ವಾತಾವರಣ ಸೃಷ್ಟಿ

'ಪೂರಕ ವಾತಾವರಣ'ವನ್ನು ವ್ಯಾಖ್ಯಾನಿಸಿ

ಅಭ್ಯಾಸ9 ಎಂ.ಎಸ್.ಎಂ.ಗಳಿಗಾಗಿ ಮತ್ತು ಲೈಂಗಿಕ ಆರೋಗ್ಯ ಉತ್ತೇಜನಕ್ಕೆ ಏನನ್ನು ಸೃಷ್ಟಿಸಬೇಕು ಮತ್ತು ಪೂರಕ ವಾತಾವರಣ ಹೇಗಿರಬೇಕು?

ಸಮೂಹದಲ್ಲಿ, ಪೂರಕ ವಾತಾವರಣಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ವಿಷಯಗಳ ಕುರಿತಂತೆ ಏನನ್ನು ಅಭಿವೃದ್ಧಿಗೊಳಿಸಬೇಕು ಎಂಬುದನ್ನು ಗುರುತಿಸುವಂತೆ ಅಭ್ಯರ್ಥಿಗಳಿಗೆ ಕೇಳಬೇಕು

★ ದೈಹಿಕ
★ ಮಾನಸಿಕ
★ ಮನೊ
★ ಸಾಮಾಜಿಕ

ಪ್ರಕ್ರಿಯೆ ಆರಂಭಿಸಲು ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನು ಕೇಳಬೇಕು

ಸಮಯ: 15ನಿಮಿಷಗಳು

ಸಮೂಹಗಳನ್ನು ಒಟ್ಟಿಗೆ ಹಿಂದಕ್ಕೆ ಕರೆಸಿಕೊಳ್ಳಬೇಕು. ಪ್ರತಿ ಸಮೂಹ ತಮ್ಮ ಮಂಡನೆಗಳನ್ನು ಸಲ್ಲಿಸಬೇಕು. ಅವರು ಪ್ರಸ್ತಾಪಿಸುವ ವಿಷಯಗಳನ್ನು ಚರ್ಚಿಸಬೇಕು. ಯಾವುದೇ ಮುಖ್ಯ ಅಂಶಗಳಿದ್ದರೆ ಅದನ್ನು ಗುರುತು ಮಾಡಿಕೊಳ್ಳಬೇಕು ಮತ್ತು ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು.

ಸಮಯ: 15ನಿಮಿಷಗಳು

## ಉದ್ದೇಶ

ಎಂಎಸ್‌ಎಂಗಳಿಗೆ ಲೈಂಗಿಕ ಆರೋಗ್ಯ ಉತ್ತೇಜನ ವಿಷಯದಲ್ಲಿ ಪೂರಕ ವಾತಾವರಣ ಸೃಷ್ಟಿ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳಲು ಪ್ರತಿನಿಧಿಗಳಿಗೆ ನೆರವಾಗುವಿಕೆ

ಸಂಜೆ 4.45 ಲೈಂಗಿಕ ಆರೋಗ್ಯ ಯೋಜನೆ ಅಭಿವೃದ್ಧಿ

## ಮಧ್ಯಸ್ಥಿಕೆದಾರರ ಮಂಡನೆ

★ ಯೋಜನಾ ಅಭಿವೃದ್ಧಿ ಚಕ್ರದ ಬಗ್ಗೆ ಚರ್ಚೆ
★ ಪ್ರತಿಕ್ರಿಯಾಗಾಗಿ ಸಾಂಸ್ಥಿಕ ವಿನ್ಯಾಸ ಅಭಿವೃದ್ಧಿ

ಸಮಯ: 30ನಿಮಿಷಗಳು

ಸಂಜೆ 5.15ಯೋಜನೆಯ ಗುರಿ ಮತ್ತು ಉದ್ದೇಶ ಅಭಿವೃದ್ಧಿ

## ಮಧ್ಯಸ್ಥಿಕೆದಾರರ ಮಂಡನೆ

ಎಂಎಸ್‌ಎಂ ಲೈಂಗಿಕ ಆರೋಗ್ಯ ಉತ್ತೇಜನ ಯೋಜನೆ ಹಿನ್ನೆಲೆಯಲ್ಲಿ ಗುರಿ ಮತ್ತು ಉದ್ದೇಶ ವ್ಯಾಖ್ಯಾನ.

ಈ ಹಿಂದೆ ಗುರುತಿಸಲ್ಪಟ್ಟ ಅಗತ್ಯಗಳು ಮತ್ತು ವಿಷಯಗಳನ್ನು ನಿಭಾಯಿಸಲು ಯೋಜನೆಯನ್ನು ತಯಾರಿಸಲು ಸಮೂಹ ಹೊರಟಿರುವುದನ್ನು ಪ್ರತಿನಿಧಿಗಳಿಗೆ ತಿಳಿಸಬೇಕು. ಕಾರ್ಯಾಗಾರದ ಉಳಿದ ಭಾಗ

ಇದರ ಮೇಲೆ ಬೆಳಕು ಚೆಲ್ಲುತ್ತದೆ.

## ಅಭ್ಯಾಸ 10: ಯೋಜನಾ ಗುರಿ ಮತ್ತು ಉದ್ದೇಶ

ಪ್ರತಿನಿಧಿಗಳನ್ನು ಗುಂಪುಗಳಾಗಿ ವಿಭಜಿಸಿದ್ದ ಗುರಿ ಮತ್ತು ಉದ್ದೇಶ ಶೀರ್ಷಿಕೆಯಡಿ ಹೇಳಿಕೆಗಳನ್ನು ತಯಾರಿಸುವಂತೆ ಪ್ರತಿ ಗುಂಪಿಗೂ ತಿಳಿಸಬೇಕು.

ಸಮಯ: 15ನಿಮಿಷಗಳು

ಸಮೂಹಗಳನ್ನು ಒಟ್ಟಿಗೆ ಸೇರಿಸಿ ತಮ್ಮ ಅಭಿಪ್ರಾಯಗಳನ್ನು ತಿಳಿಸುವಂತೆ ಪ್ರತಿ ಗುಂಪಿಗೂ ಹೇಳಬೇಕು. ಎಲ್ಲ ಮುಖ್ಯ ಅಂಶಗಳನ್ನು ಪಟ್ಟಿ ಮಾಡಬೇಕು. ಪರಾಮರ್ಶೆ ಮತ್ತು ಮಾಹಿತಿಗಾಗಿ ಪ್ರತಿನಿಧಿಗಳನ್ನು ಕೇಳುವಿಕೆ.

ಸಮಯ: 30ನಿಮಿಷಗಳು

ಉದ್ದೇಶ

ಯೋಜನಾ ಅಭಿವೃದ್ಧಿ ಪ್ರಕ್ರಿಯೆಗೆ ಪ್ರತಿನಿಧಿಗಳು ಕ್ರಮ ಕೈಗೊಳ್ಳುವಂತೆ ಮಾಡುವುದು ಯೋಜನೆಯ ಉದ್ದೇಶ ಮತ್ತು ಗುರಿ ಏನೆಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕು.

ಸಂಜೆ 6.00 ಮುಕ್ತಾಯ

ದಿನದ ಸಮಸ್ಯೆಗಳು ಮತ್ತು ನಮ್ಮಲ್ಲಿನ ಪ್ರತಿಯೊಬ್ಬರು ಎದುರಿಸಿದ ಸವಾಲುಗಳ ಬಗ್ಗೆ ಕೆಲವು ಮುಕ್ತಾಯ ಹೇಳಿಕೆಗಳನ್ನು ನೀಡಬೇಕು. ಭಾಗವಹಿಸಿದವರ ಬಗ್ಗೆ ಕೆಲವು ಪೂರಕ ಹೇಳಿಕೆಗಳನ್ನು ನೀಡಬೇಕು ಹಾಗೂ ಅವರು ಹಂಚಿಕೊಂಡ ವಿಷಯಗಳ ಬಗ್ಗೆ ತಿಳಿಸಬೇಕು.

ಮುಂದಿನ ದಿನದ ಕಾಲ ನಿರ್ವಹಣೆ ಕುರಿತು ಎಲ್ಲ ಪ್ರತಿನಿಧಿಗಳಿಗೂ ತಿಳಿಸಬೇಕು. ಪ್ರತಿನಿಧಿಗಳ ಪ್ರವಾಸ ವಸ್ತುಗಳು ಮತ್ತು ಯಾವುದಾದರೂ ಬಾಕಿ ಪಾವತಿಯಿಂದ್ದರೆ ಅದನ್ನು ನೀಡಬೇಕು. ನೋಂದಣಿ ಅರ್ಜಿಯಲ್ಲಿ ಅವರ ಹೆಸರನ್ನು ಗುರುತು ಹಾಕಿಕೊಳ್ಳಬೇಕು.

# ಎರಡನೇ ಹಂತ: ಎಂ.ಎಸ್.ಎಂ. ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಎರಡನೇ ದಿನ: ಯೋಜನಾ ಅಭಿವೃದ್ಧಿ (ಭಾಗ ಒಂದು)

**ಬೆಳಿಗ್ಗೆ 9.00 ಸ್ವಾಗತ ಮತ್ತು ಮನನ**

ಪ್ರತಿನಿಧಿಗಳು ಕಾರ್ಯಾಗಾರದ ಸ್ಥಳವನ್ನು ಪ್ರವೇಶಿಸುತ್ತಿದ್ದಂತೆ ಅವರು ಹೆಸರು ಪಟ್ಟಿ ಬರವಣಿಗೆ ಪೇಪರ್ ಮತ್ತು ಪೆನ್ ಇರುವ ಬಗ್ಗೆ ಖಾತ್ರಿ ಮಾಡಿಕೊಳ್ಳಬೇಕು, ದೈನಿಕ ನೋಂದಣಿ ಅರ್ಜಿಯನ್ನು ಸಹ ಪೂರ್ಣಗೊಳಿಸಬೇಕು

ಹಿಂದಿನ ರಾತ್ರಿ ತಾನು ಮಾಡಿದ ಉತ್ತಮ ಕೆಲಸದ ಬಗ್ಗೆ ಹೇಳುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು. ಇದನ್ನು ಹಾಸ್ಯ ಪ್ರಜ್ಞೆಯಿಂದ ಮಾಡಬೇಕು ಈ ಕುರಿತು ಮಧ್ಯಸ್ಥಿಕೆದಾರರು ಪ್ರತಿಕ್ರಿಯೆಯನ್ನು ಸಹ ನೀಡಬೇಕು.

ಸಮಯ:15ನಿಮಿಷಗಳು

ಬೆಳಿಗ್ಗೆ 9.15 ಒಂದನೇ ದಿನದ ಮಾಹಿತಿ

## ಸಮೂಹ ಚರ್ಚೆ

ಹಿಂದಿನ ದಿನದ ಬಗ್ಗೆ ಅವರು ಕಲಿತ ಬಗ್ಗೆ ಮತ್ತು ಯಾವುದೇ ಪ್ರಶ್ನೆ ಅವರಲ್ಲಿ ಇದೆಯೇ ಎಂಬ ಬಗ್ಗೆ ವಿವರ ನೀಡುವಂತೆ ಪ್ರತಿನಿಧಿಗಳನ್ನು ಕೇಳಬೇಕು.

ಸಮಯ: 30ನಿಮಿಷಗಳು

## ಉದ್ದೇಶಗಳು

ಹಿಂದಿನ ದಿನದಿಂದ ಪಡೆದ ಜ್ಞಾನವನ್ನು ಪ್ರತಿನಿಧಿಗಳು ಉಳಿಸಿಕೊಂಡಿದ್ದಾರೆಯೇ ಮತ್ತು ಉದ್ಭವಿಸಿದ ವಿಷಯಗಳ ಬಗ್ಗೆ ಅವರು ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆಯೇ ಎಂಬುದನ್ನು ಅರಿಯಬೇಕು.

ಬೆಳಿಗ್ಗೆ 9.45 ಸಾಧನೆ, ಗುರಿಗಳು ಮತ್ತು ಸೂಚನೆಗಳ ಅಭಿವೃದ್ಧಿ ಮಧ್ಯಸ್ಥಿಕೆದಾರರ ಮಂಡನೆ

ಎಂಎಸ್‌ಎಂಗಳಿಗಾಗಿ ಸಮುದಾಯ ಆಧರಿತ ಯೋಜನೆ, ಲೈಂಗಿಕ ಆರೋಗ್ಯ ಉತ್ತೇಜನದ ರೂಪುರೇಷೆಯನ್ನು ಸಮೂಹ ಈಗ ಅಭಿವೃದ್ಧಿಪಡಿಸಲಾಗುತ್ತಿದೆ ಎಂಬುದನ್ನು ಪ್ರತಿನಿಧಿಗಳಿಗೆ ವಿವರಿಸಬೇಕು.

ದಾನಿಗಳಿಂದ ಹಣ ಪಡೆಯಲು ಸಾಧ್ಯವಾಗುವಂತೆ ಯೋಜನೆ ಅಗತ್ಯಗಳ ನಿರ್ದಿಷ್ಟ ವಿಷಯಗಳಿರುತ್ತವೆ. ಮುಂದಿನ ನಾಲ್ಕು ದಿನಗಳವರೆಗೆ ಇಂಥ ಆಲೋಚನೆಗಳನ್ನು ಕಾರ್ಯಾಗಾರ ಅನ್ವೇಷಿಸುತ್ತದೆ.

ಇಂಥ ಯೋಜನೆಯ ಗುರಿ ಮತ್ತು ಉದ್ದೇಶಗಳನ್ನು ವ್ಯಾಖ್ಯಾನಿಸಿದ ಬಳಿಕ ಕಾರ್ಯಾಗಾರ ಸಮೂಹ ಯಾವುದನ್ನು ನಿರ್ದಿಷ್ಟವಾಗಿ ಸಾಧಿಸಲು ಬಯಸುತ್ತದೆ ಎಂಬುದನ್ನು ಸೂಚಿಸಬೇಕು ಮತ್ತು ಈ ಸಾಧನೆಯನ್ನು ಹೇಗೆ ಗುರುತಿಸಲಾಗುತ್ತದೆ ಎಂಬುದನ್ನು ತಿಳಿಸಬೇಕು.

## ವ್ಯಾಖ್ಯಾನ:ಉದ್ದೇಶ, ಸಾಧನೆ ಗುರಿಗಳು ಮತ್ತು ಸೂಚನೆಗಳು

ಸಮಯ: 15 ನಿಮಿಷಗಳು

ಅಭ್ಯಾಸ11: ಉದ್ದೇಶ, ಸಾಧನೆ ಗುರಿಗಳು ಮತ್ತು ಸೂಚನೆಗಳ ಅಭಿವೃದ್ಧಿ

ಎಂಎಸ್‌ಎಂ ಲೈಂಗಿಕ ಆರೋಗ್ಯ ಉತ್ತೇಜನ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಈ ಅಂಶಗಳನ್ನು ವ್ಯಾಖ್ಯಾನಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು.

ಸಮಯ: 30 ನಿಮಿಷಗಳು

ಇದಾದ ನಂತರ, ತಮ್ಮ ವ್ಯಾಖ್ಯಾನಗಳನ್ನು ಮಂಡಿಸುವಂತೆ ಪ್ರತಿ ಸಮೂಹಕ್ಕೂ ತಿಳಿಸಬೇಕು. ಎಲ್ಲ ಪ್ರತಿನಿಧಿಗಳು ಮಾಹಿತಿ ನೀಡಿಕೆಯನ್ನು ಬಳಸಿಕೊಂಡು, ಒಮ್ಮತದ ವ್ಯಾಖ್ಯಾನವೊಂದನ್ನು ಅಭಿವೃದ್ಧಿಗೊಳಿಸಿ ಫ್ಲಿಪ್‌ಚಾರ್ಟ್ ಕಾಗದದ ಮೇಲೆ ಬರೆಯಬೇಕು.

ಸಮಯ: 30ನಿಮಿಷಗಳು

## ಉದ್ದೇಶ

ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಉದ್ದೇಶಗಳು, ಸಾಧನೆಯ ಗುರಿಗಳು ಮತ್ತು ಸೂಚನೆಗಳ ಅರ್ಥದ ಬಗ್ಗೆ ಪ್ರತಿನಿಧಿಗಳು ಚರ್ಚಿಸಲು ಅನುವು ಮಾಡಿಕೊಡುವುದು.

ಮಧ್ಯಸ್ಥಿಕೆದಾರರ ಟಿಪ್ಪಣಿ

## ಉದ್ದೇಶ

ನೀವು ಗುರಿಯಾಗಿರಿಸಿಕೊಂಡ ಫಲಿತಾಂಶಗಳು, ನಿಮ್ಮ ಚಟುವಟಿಕೆಗಳ ಫಲಶ್ರುತಿ, ಉದ್ದೇಶವು ವಿಧಾನ ಅಥವಾ ಚಟುವಟಿಕೆಗಳನ್ನು ನಿರ್ದಿಷ್ಟವಾಗಿ ತಿಳಿಸುವುದಿಲ್ಲ.

## ವಿಧನಗಳನ್ನು ಗುರುತಿಸಿ

'ಒದಗಿಸಲು', 'ಸೃಷ್ಟಿಸಲು', 'ಸ್ಥಾಪಿಸಲು' ಇಂಥ ನುಡಿಕಟ್ಟುಗಳನ್ನು ಬಳಸಬಾರದು ಬದಲಿಗೆ 'ಹೆಚ್ಚಿಸಲು' 'ಇಳಿಸಲು', 'ತಗ್ಗಿಸಲು' ಗಳಂಥ ಪ್ರಾರಂಭಿಕ ನುಡಿಕಟ್ಟುಗಳನ್ನು ಬಳಸಿ ಯೋಜನೆಯ ಗುರಿ ಅನ್ವಯ ಬದಲಾವಣೆಗೆ ಸಂಬಂಧಿಸಿದ ಉದ್ದೇಶದ ಸಾಧನೆಯ ಗುರಿಯನ್ನು ವಿಸ್ತರಿಸುತ್ತದೆ. ಇದನ್ನು ಸಾಧಿಸಲು

ಬೇಕಾಗುವ ಕಾಲ ಮಿತಿಯನ್ನು ತಿಳಿಸುತ್ತದೆ. ನೀವು ಪ್ರಾಯೋಗಿಕ ಮತ್ತು ವಾಸ್ತವಿಕವಾಗಿರಬೇಕಾದ ಅಗತ್ಯವಿದೆ. ಕಾಲಮಿತಿಯೊಳಗೆ ಗುರಿಯನ್ನು ಸಾಧಿಸಬೇಕು.

## ಸೂಚನೆಗಳು

ಉದ್ದೇಶಿತ ಬದಲಾವಣೆಗಳ ಸಂಭವನೀಯತೆಯನ್ನು ಗುರುತಿಸಲು ನೀವು ಬಳಸುವ ಕ್ರಮಗಳು, ಉದ್ದೇಶಗಳನ್ನು ಸಾಧಿಸುವತ್ತ ಕೈಗೊಳ್ಳಲಾಗುವ ಪ್ರಗತಿಯನ್ನು ಸೂಚಿಸುತ್ತದೆ.

ಉದ್ದೇಶಗಳು ಮತ್ತು ಸಾಧನೆ ಗುರಿಗಳು ಸ್ಪಷ್ಟವಾಗಿದ್ದರೆ ಯೋಜನೆ ರೂಪಿಸಲು ಸುಲಭ ಹಾಗೂ ಉದ್ದೇಶಗಳ ಸಾಧನೆಗಾಗಿ ಚಟುವಟಿಕೆಗಳ ಅನುಷ್ಠಾನಕ್ಕೆ ಹಾದಿ ಸುಗಮ.

ಉದ್ದೇಶಗಳು ಮತ್ತು ಸಾಧನೆ ಗುರಿಗಳು ಯಾವ ಬದಲಾವಣೆಯಾಗಬೇಕೆಂಬ ಬಗ್ಗೆ ಸ್ಪಷ್ಟವಾಗಿರಬೇಕು. ಉದ್ದೇಶ ಮತ್ತು ಸಾಧನೆ ಗುರಿಗಳು, ಉದ್ದೇಶಿತ ಫಲಾನುಭವಿಗಳು ಯಾರು ಎಂಬುದನ್ನು ಸ್ಪಷ್ಟವಾಗಿ ತಿಳಿಸಿಬೇಕು ಉದ್ದೇಶ ಮತ್ತು ಸಾಧನೆ ಗುರಿಗಳು, ಉದ್ದೇಶಿತ ಫಲಾನುಭವಿಗಳು ಯಾರು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಸಾಧನೆ ಗುರಿ ತಲುಪಲು ನಿಮಗೆ ಸಾಧ್ಯವಾಗಿದೆಯೇ ಎಂಬುದನ್ನು ತಿಳಿಯಲು ಸಾಧ್ಯವಾಗಬೇಕು.

ಇವುಗಳ ನಡುವಣ ವ್ಯತ್ಯಾಸಗಳನ್ನು ಸಹ ಜ್ಞಾಪಕದಲ್ಲಿಡಬೇಕು

'ಎಸ್‌ಟಿಐಗಳ ಮಟ್ಟಗಳನ್ನು ತಗ್ಗಿಸಲು....' ಮತ್ತು 'ಎಸ್‌ಟಿಐ/ಎಚ್‌ಐವಿ ಸೋಂಕು ಹರಡುವ ಗಂಡಾಂತರಗಳನ್ನು ಇಳಿಸಲು' ಅದಾಗ್ಯೂ ಇವೆರೆಡಕ್ಕೆ ಇದಕ್ಕಾಗಿ ವಿಭಿನ್ನ ರತಿಯ ಸೂಚನೆಗಳ ಅಗತ್ಯವಿದೆ. ಅದಾಗ್ಯೂ ಇವೆರೆಡಕ್ಕೆ ಯೋಜನೆ ಅನುಷ್ಠಾನಕ್ಕೂ ಮುನ್ನ ಬೇರು ಮಟ್ಟದ ಅಧ್ಯಯನ ಅಗತ್ಯವಿದೆ. ಆದ್ದರಿಂದ ಹೊಣೆಯ ಅಗತ್ಯ ಹಾಗೂ ಅಧ್ಯಯನದ ಅಗತ್ಯವಿದೆ.

**ಉದಾಹರಣೆ ಒಂದು**

ಗುರಿ ಎಂಎಸ್‌ಎಂಗಳಲ್ಲಿ ಎಸ್‌ಟಿಐ/ಎಚ್‌ಐವಿ ಸೋಂಕು ಹಬ್ಬುವಿಕೆಯ ಗಂಡಾಂತರಗಳ ಇಳಿಸುವಿಕೆ

ಉದ್ದೇಶ ಸಾರ್ವಜನಿಕ ಲೈಂಗಿಕ ಪರಿಸರಗಳಲ್ಲಿ ಎಂಎಸ್‌ಎಂಗಳಲ್ಲಿ ಕಾಂಡೋಮ್ ಬಳಕೆ ಹೆಚ್ಚಳ

ಸಾಧನೆ ಗುರಿ ಮೊದಲ ವರ್ಷದಲ್ಲಿ ಶೇ.40 ರಷ್ಟು ಕಾಂಡೋಮ್ ಬೇಡಿಕೆಯನ್ನು ಎಂಎಸ್‌ಎಂಗಳಲ್ಲಿ ಹೆಚ್ಚಿಸುವಿಕೆ

ಸೂಚನೆಗಳು1. ಕಾಂಡೋಮ್ ವಿತರಣೆ ಹೆಚ್ಚಳ

2. ಎಸ್‌ಟಿಐ ಪ್ರಮಾಣ ಇಳಿಕೆ

3. ಎಸ್‌ಟಿಐ/ ಎಚ್‌ಐವಿ ಅರಿವು ಹೆಚ್ಚಳ

4. ಆರೋಗ್ಯ ಹೊಂದುವ ನಡವಳಿಕೆಗಳ ಕಾಂಡೋಮ್ ಬಳಕೆ ಮತ್ತು ಲೈಂಗಿಕ ಸಂಗಾತಿಗಳತ್ತ ಧೋರಣೆ ಬದಲಾವಣೆ

5. ಎಂಎಸ್‌ಎಂಗಳಿಂದ ಎಸ್‌ಟಿಐ ಚಿಕಿತ್ಸೆಗಳ ಬಳಕೆ ಹೆಚ್ಚಳ ಮತ್ತು ಲೈಂಗಿಕ ಸಂಗಾತಿಗಳ ಬಗ್ಗೆ ತಿಳುವಳಿಕೆ (ಪತ್ನಿಯನ್ನು/ ಮಹಿಳಾ ಸಂಗಾತಿಗಳು ಸೇರಿದಂತೆ)

6. ಕಾಂಡೋಮ್‌ಗಳ ಸೂಕ್ತ ಬಳಕೆ ಬಗ್ಗೆ ತಿಳುವಳಿಕೆ

**ಉದಾಹರಣೆ ಎರಡು:**

ಗುರಿ ಪುರುಷ ಲೈಂಗಿಕ ಕಾರ್ಯಕರ್ತರಲ್ಲಿ ಮತ್ತು ಅವರ ಗ್ರಾಹಕರಲ್ಲಿ ಎಸ್‌ಟಿಐ ಸೋಂಕು ಹಬ್ಬುವಿಕೆ ಇಳಿಸುವಿಕೆ ಹಾಗೂ ಎಚ್‌ಐವಿ ಸೋಂಕು ಗಂಡಾಂತರ ತಗ್ಗಿಸುವಿಕೆ

## ಉದ್ದೇಶ 1

1 ಪುರುಷ ಲೈಂಗಿಕ ಕಾರ್ಯಕರ್ತರು ಮತ್ತು ಅವರ ಗ್ರಾಹಕರಲ್ಲಿ ಎಸ್‌ಟಿಐ/ ಎಚ್‌ಐವಿ ಜಾಗೃತಿ ಹೆಚ್ಚಿಸುವಿಕೆ

2. ಪುರುಷ ಲೈಂಗಿಕ ಕಾರ್ಯಕರ್ತರು ಮತ್ತು ಅವರ ಗ್ರಾಹಕರಿಂದ ಕಾಂಡೋಮ್ ಬಳಕೆ ಹೆಚ್ಚಿಸುವಿಕೆ

3. ಎಸ್‌ಟಿಐ ಸೇವೆಗಳನ್ನು ಹೆಚ್ಚಿಸುವಿಕೆ

ಸಾಧನೆಯ ಗುರಿಗಳು ಉದ್ದೇಶ1.

ಒಂದು ವರ್ಷದ ಅಂತ್ಯದೊಳಗೆ ಪುರುಷ ಲೈಂಗಿಕ ಕಾರ್ಯಕರ್ತರು ಮತ್ತು ಅವರ ಗ್ರಾಹಕರಲ್ಲಿ ಎಸ್‌ಟಿಐ/ ಎಚ್‌ಐವಿ ಬಗ್ಗೆ ಶೇ.40 ರಷ್ಟು ಸೂಕ್ತ ಜ್ಞಾನ ಹೆಚ್ಚಿಸುವಿಕೆ

## ಉದ್ದೇಶ 2

ಒಂದು ವರ್ಷದ ಅಂತ್ಯದೊಳಗೆ ಪುರುಷ ಲೈಂಗಿಕ ಕಾರ್ಯಕರ್ತರು ಮತ್ತು ಅವರ ಗ್ರಾಹಕರಲ್ಲಿ ಕಾಂಡೋಮ್‌ಗಳ ಬಳಕೆಯಲ್ಲಿ ಶೇ.50 ರಷ್ಟು ಹೆಚ್ಚಳ

## ಉದ್ದೇಶ 3

ಒಂದು ವರ್ಷದ ಅಂತ್ಯದೊಳಗೆ ಪುರುಷ ಲೈಂಗಿಕ ಕಾರ್ಯಕರ್ತರು ಮತ್ತು ಅವರ ಗ್ರಾಹಕರಲ್ಲಿ ಎಸ್‌ಟಿಐ ಚಿಕಿತ್ಸೆಯಲ್ಲಿ ಶೇ.50ರಷ್ಟು ಹೆಚ್ಚಳ

ಏಕ ಉದ್ದೇಶ ಸಾಧನೆಯ ಪ್ರಗತಿಯನ್ನು ತಿಳಿಯಲು ಅನೇಕ ಸೂಚನೆಗಳನ್ನು ಅಭಿವೃದ್ಧಿಗೊಳಿಸುವ ಅಗತ್ಯವಿದೆ.

ನಿಮ್ಮಲ್ಲಿ ಪರಿಣಾಮಕಾರಿ ಮತ್ತು ಸಾಧನೀಯ ಸೂಚನೆಗಳಿವೆ ಎಂಬುದನ್ನು ತಿಳಿಯಲು ನಿಮ್ಮಲ್ಲಿ ಸೂಕ್ತ ಮಾಹಿತಿ ಇರುವುದು ಅಗತ್ಯ.

ಉದಾಹರಣೆಗೆ, ಕಾಂಡೋಮ್‌ಗಳ ಬಗ್ಗೆ ಸೂಚನೆಗಳು

1. ಯೋಜನೆಗೂ ಮುನ್ನ ಎಷ್ಟು ಕಾಂಡೋಮ್‌ಗಳನ್ನು ಬಳಸಲಾಗಿದೆ?
2. ಯೋಜನೆಯ ನಿರ್ದಿಷ್ಟ ಅವಧಿ ವೇಳೆ ಎಷ್ಟು ಕಾಂಡೋಮ್‌ಗಳನ್ನು ವಿತರಿಸಲಾಗಿದೆ (ಬಳಸಲಾಗಿದೆ)?
3. ಯೋಜನೆಯ ಆರಂಭದಲ್ಲಿ ಎಸ್‌ಟಿಐ ಪ್ರಮಾಣ
4. ನಿಗದಿತ ಅವಧಿಯಲ್ಲಿ ಎಸ್‌ಟಿಐ ಪ್ರಮಾಣ
5. ಯೋಜನೆಗೂ ಮುನ್ನ ಎಸ್‌ಟಿಐ ಕ್ಲಿನಿಕ್‌ಗಳ ಸಂಖ್ಯೆ
6. ನಿಗದಿತ ಅವಧಿಯಲ್ಲಿ ಎಸ್‌ಟಿಐ ಕ್ಲಿನಿಕ್‌ಗಳ ಪ್ರಮಾಣ

ಅಧ್ಯಯನಗಳನ್ನು ಸಮೂಹಗಳು, ಪ್ರಶ್ನಾವಳಿಗಳು ಮತ್ತು ಸಂದರ್ಶನಗಳ ಮೂಲಕ ಸಿದ್ಧಪಡಿಸಬಹುದು.

ಟಿಪ್ಪಣಿ: ಎಚ್‌ಐವಿ ಸೋಂಕು ತಗ್ಗಿಸುವ ಗುರಿ ಇದ್ದರೆ, ಅದು ಸೂಚನೆಗಳ ಮೇಲೆ ಪರಿಣಾಮ ಉಂಟುಮಾಡುತ್ತದೆ. ಗುರಿ ಸಾದನೆಗಾಗಿ ಯೋಜನೆ ಅನುಷ್ಠಾನ ಅವಧಿಗೂ ಮುನ್ನ ಮತ್ತು ನಂತರ ಈ ಎರಡರಲ್ಲೂ ಎಚ್‌ಐವಿ ಮಟ್ಟಗಳ ಜ್ಞಾನದ ಅಗತ್ಯವಿರುತ್ತದೆ. ಇದಕ್ಕೆ ಎಚ್‌ಐವಿ ಪ್ರತಿರೋಧ ಪರೀಕ್ಷೆಯ ಅಗತ್ಯವಿರುತ್ತದೆ. ಎಸ್.ಟಿಐ/ ಎಚ್‌ಐವಿ ಸೋಂಕು ಗಂಡಾಂತರ ತಗ್ಗಿಸುವ ಉದ್ದೇಶವನ್ನು ನಾವು ಹೊಂದಿದ್ದರೆ, ಕಾಂಡೋಮ್ ಬಳಕೆ, ಹೊರಗಿನವರೊಂದಿಗೆ ಲೈಂಗಿಕ ಸಂಪರ್ಕ ನಿಯಂತ್ರಣ, ಎಸ್‌ಟಿಐ ಚಿಕಿತ್ಸೆ ಮತ್ತು ಸಂಗಾತಿಗಳಿಗೆ ಸೋಂಕು ತಗುಲುವುದನ್ನು ತಪ್ಪಿಸಲು ಎಸ್‌ಟಿಐ ಚಿಕಿತ್ಸೆ ಪಡೆಯಲು ಲೈಂಗಿಕ ಸಂಗಾತಿಗಳಿಗೆ (ಪತ್ನಿಯನ್ನು ಸೇರಿದಂತೆ) ಪ್ರೋತ್ಸಾಹ ನೀಡಬೇಕಾಗುತ್ತದೆ.

ಬೆಳಿಗ್ಗೆ11.15 ವಿರಾಮ

ಬೆಳಿಗ್ಗೆ 11.15 ಫಲಿತಾಂಶಗಳು ಮತ್ತು ಫಲಶೃತಿಗಳು

ಮಧ್ಯಸ್ಥಿಕೆದಾರ ಮಂಡನೆ

ಫಲಿತಾಂಶ ಮತ್ತು ಫಲಶೃತಿಗಳ ವ್ಯಾಖ್ಯಾನ

ಸಂಭವನೀಯ ಫಲಶ್ರುತಿ ವ್ಯಾಖ್ಯಾನ

ಸಂಭವನೀಯ ಫಲಶ್ರುತಿ ನಕ್ಷೆ ಪ್ರದರ್ಶನ

ವಿಭಿನ್ನ ಫಲಶೃತಿಗಳ ಬಗ್ಗೆ ಚರ್ಚೆ ಮತ್ತು ಅವು ಏಕೆ ಉದ್ಭವವಾದವು. ಸೂಕ್ತ ಫಲಿತಾಂಶಕ್ಕಾಗಿ ತೀರಾ ಮುಖ್ಯವಾಗಿರುವ ಅಂಶಗಳ ಕಾರ್ಯತಂತ್ರ ಮತ್ತು ಚಟುವಟಿಕೆಗಳ ಬಗ್ಗೆ ಚರ್ಚೆ, ಪ್ರತಿನಿಧಿಗಲಿಂದ ಮಾಹಿತಿ ಮತ್ತು ಮುಖ್ಯ ಅಂಶಗಳ ಬಗ್ಗೆ ಟಿಪ್ಪಣಿ

ಸಮಯ: 45ನಿಮಿಷಗಳು

## ಉದ್ದೇಶ

ಸಮುದಾಯ ಆಧರಿತ ಸಂಸ್ಥೆಗಳಲ್ಲಿ ಹಣ ತೊಡಗಿಸುವುದು ಸಾಕಾಗುವುದಿಲ್ಲ ಎಂಬುದನ್ನು ಪ್ರತಿನಿಧಿಗಳಿಗೆ ಅರ್ಥ ಮಾಡಿಸಬೇಕು. ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ನಿರೀಕ್ಷಿತ ಫಲಿತಾಂಶ ಮತ್ತು ಫಲಶೃತಿಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಬೇಕು.

ಮಧ್ಯಾಹ್ನ 12.00 ಲೈಂಗಿಕ ಆರೋಗ್ಯ ಉತ್ತೇಜನಕ್ಕೆ ಕಾರ್ಯತಂತ್ರಗಳು

## ಮಧ್ಯಸ್ತಿಕೆದಾರರ ಮಂಡನೆ

ಒಂದನೇ ದಿನದ ವೇಳೆ ಚರ್ಚಿಸಲಾದ ವಿಷಯಗಳನ್ನು ಜ್ಞಾಪಿಸಿಕೊಳ್ಳುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು ಮತ್ತು ಟಿಪ್ಪಣಿಗಳನ್ನು ಉಲ್ಲೇಖಿಸಬೇಕು ಒಂದನೇ ದಿನದಿಂದ ಪರಿವರ್ತನಾ ನಡವಳಿಕೆಗೆ ಸಂಬಂಧಿಸಿದಂತೆ ಚಾರ್ಟ್ ಕಾಗದದ ಮೇಲೆ ಬರೆದುಕೊಳ್ಳಲಾದ ಟಿಪ್ಪಣಿಗಳನ್ನು ಉಲ್ಲೇಖಿಸಲು ಮಧ್ಯಸ್ಥಿಕೆದಾರರು ಇಚ್ಛಿಸಬಹುದು.

## ಗಂಡಾಂತರ ತಗ್ಗಿಸುವ ಕಾರ್ಯತಂತ್ರದ ವ್ಯಾಖ್ಯಾನ

ಗುರಿ, ಉದ್ದೇಶಗಳು, ಸಾಧನೆಯ ಗುರಿ ಮತ್ತು ಸೂಚನೆಗಳನ್ನು ಅಭಿವೃದ್ಧಿಗೊಳಿಸಿದ ಬಳಿಕ ಈ ಭಾಗವು ಗಂಡಾಂತರ ಇಳಿಕೆಗೆ ಅನುಗುಣವಾಗಿ ಯೋಜನೆಗೆ ಬಳಸುವ ಕಾರ್ಯತಂತ್ರಗಳನ್ನು ಅನ್ವೇಷಿಸುತ್ತದೆ.

ನಡವಳಿಕೆ ಬದಲಾವಣೆಗೆ ಏನು ಕಾರಣವಾಗುತ್ತದೆ ಮತ್ತು ಏಕೆ ಎಂಬ ಬಗ್ಗೆ ಪ್ರತಿನಿಧಿಗಳ ಜೊತೆ ಚರ್ಚೆ ಪ್ರತಿನಿಧಿಗಳ ಜೊತೆ ನಡವಳಿಕೆ ನಕ್ಷೆಗಳ ಪರಾಮರ್ಶೆ ಮತ್ತು ಮಧ್ಯಸ್ಥಿಕೆದಾರ ಟಿಪ್ಪಣಿ ಪ್ರತಿನಿಧಿಗಳಿಂದ ಮಾಹಿತಿ ಕೇಳುವಿಕೆ ಮತ್ತು ಮುಖ್ಯ ಅಂಶಗಳ ಟಿಪ್ಪಣಿ

ಸಮಯ: 40 ನಿಮಿಷಗಳು

## ಅಭ್ಯಾಸ 12: ನಡವಳಿಕೆ ಬದಲಾವಣೆಗೆ ಉತ್ತೇಜನ

ಎಂಎಸ್ಎಂ ಜಾಲಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಚರ್ಚೆಗಳ ಪರಾಮರ್ಶೆ ಮತ್ತು ಅನುಷ್ಠಾನದ ಚರ್ಚೆ ನಡೆಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು.

ನಡವಳಿಕೆ ಬದಲಾವಣೆ ಮತ್ತು ಎಚ್ಐವಿ/ ಎಸ್‌ಟಿಐ ಸೋಂಕುಗಳ ಗಂಡಾಂತರ ಇಳಿಕೆಗೆ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳಿಗೆ ಸಂಬಂಧಿಸಿದ ಮುಖ್ಯ ಅಂಶಗಳನ್ನು ಪಟ್ಟಿ ಮಾಡುವಂತೆ ತಿಳಿಸಬೇಕು.

ಪ್ರತಿ ಸಮೂಹಕ್ಕೂ ನಾಟಕ ರೂಪಿಸುವಂತೆ ತಿಳಿಸಬೇಕು. ಕ್ಷೇತ್ರ ಸನ್ನಿವೇಶ ಒಳಗೊಂಡಿರುವ ಈ ನಾಟಕ 10 ನಿಮಿಷಗಳಿಗಿಂತ ಹೆಚ್ಚಾಗಿರಬಾರದು.

ಸಮಯ: 30 ನಿಮಿಷಗಳು

ಮಧ್ಯಾಹ್ನ1.00 ಭೋಜನ

ಮಧ್ಯಾಹ್ನ2.00 ಕಾರ್ಯತಂತ್ರಗಳು- ಮುಂದುವರಿಕೆ

ಅಭ್ಯಾಸ12 ಮುಂದುವರಿಕೆ

ಪ್ರತಿ ಸಮೂಹ ತಮ್ಮ ನಾಟಕವನ್ನು ಪ್ರಸ್ತುತ ಪಡಿಸಬೇಕು ನಾಟಕ ಏನನ್ನು ತಿಳಿಸುತ್ತದೆ ಎಂಬ ಬಗ್ಗೆ ಚರ್ಚೆ ನಡೆಯಬೇಕು. ನಡವಳಿಕೆ ಬದಲಿಸಲು ತಮ್ಮ ಗುರಿ ಉದ್ದೇಶಗಳನ್ನು ಸಾಧಿಸಲು ಯಾವ ವಿಧಾನಗಳನ್ನು ಬಳಸಲಾಗಿದೆ ಎಂಬುದನ್ನು ತಿಳಿಯಬೇಕು.

ಸಮಯ: 40 ನಿಮಿಷಗಳು

## ಉದ್ದೇಶ

ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆಯಲ್ಲಿ ಲೈಂಗಿಕ ಆರೋಗ್ಯ ಉತ್ತೇಜನ ಒಳಗೊಂಡಿರುವ ಬಗ್ಗೆ ಪ್ರತಿನಿಧಿಗಳಿಗೆ ಅರ್ಥೈಸುವಂತೆ ಮಾಡುವುದು.

ಎರಡನೇ ಹಂತ: ಎಂಎಂಸೇಎಂ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಮಧ್ಯಸ್ಥಿಕೆದಾರರ ಮಂಡನೆ

ಯೋಜನೆ ಅನುಷ್ಠಾನದ ಹಿನ್ನೆಲೆಯಲ್ಲಿ ಹೊಣೆಗಾರಿಕೆ ಮತ್ತು ಅಗತ್ಯ ಅಧ್ಯಯನ ಉತ್ಪಾದಿತ ಮಾಹಿತಿಯಾಗಿದ್ದು, ಫಲಾನುಭವಿಗಳ ಕುರಿತಾದ್ದಾಗಿರುತ್ತದೆ.

ಈ ಮಾಹಿತಿ ಇವುಗಳನ್ನು ಒಳಗೊಂಡಿರುತ್ತದೆ

- ಸಂಖ್ಯೆಗಳು
- ಸ್ಥಳಗಳು
- ನಡವಳಿಕೆಗಳು ಮತ್ತು ಅಪಾಯಗಳು
- ಶೈಕ್ಷಣಿಕ ಮಟ್ಟಗಳು
- ಆರ್ಥಿಕ ಸ್ಥಾನಮಾನ
- ಎಸ್‌ಟಿಐ/ ಎಚ್‌ಐವಿ ಬಗ್ಗೆ ಪ್ರಸ್ತುತ ಜ್ಞಾನ
- ಎಸ್‌ಟಿಐ ಚಿಕಿತ್ಸೆ ಸೇವೆಗಳ ಪ್ರಸ್ತುತ ಬಳಕೆ
- ಕಾಂಡೋಮ್‌ಗಳ ಪ್ರಸ್ತುತ ಬಳಖೆ
- ಹೇಗೆ ಅವರು ಮಾಹಿತಿಯನ್ನು ಸ್ವೀಕರಿಸುತ್ತಾರೆ.

## ಸಾಮಾಜಿಕ ಪರಿಸರ

- ಸಾಂಸ್ಕೃತಿಕ/ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳು
- ಲೈಂಗಿಕ ನಡವಳಿಕೆ ವಿಧಾನಗಳು
- ವಿವಾಹ ಮತ್ತು ಮಹಿಳಾ ಸಂಗಾತಿಗಳು
- ಕಾನೂನು ಚೌಕಟ್ಟುಗಳು
- ಕಿರುಕುಳ ಮತ್ತು ದೌರ್ಜನ್ಯದ ಮಟ್ಟ
- ಸಾಮಾಜಿಕ ಸಂಪರ್ಕ ಜಾಲಗಳು
- ಕುಟುಂಬಗಳು
- ಲೈಂಗಿಕ ಸಂಪರ್ಕ ಜಾಲಗಳು

## ಭೌತಿಕ ಪರಿಸರ

★ ಸಂಭವನೀಯ ಯೋಜನಾ ಸ್ಥಳಗಳು

★ ಸಂಪರ್ಕ ಸರಳೀಕರಣ

★ ಸಾಂದರ್ಭಿಕ ಅಂಶಗಳು ಮತ್ತು ಹಬ್ಬಗಳು

## ಸೇವೆಗಳು

★ ಸ್ಥಳ, ತಲುಪವಿಕೆ ಮತ್ತು ಎಸ್‌ಟಿಐ ಸೇವೆಗಳ ಗುಣಮಟ್ಟ

★ ಪೂರೈಕೆ ಸೌಲ್ಯಗಳು

ಕಾಂಡೋಮ್‌ಗಳು(ಗುಣಮಟ್ಟ, ಪ್ರಮಾಣ ಮತ್ತು ನಿರ್ದಿಷ್ಟತೆ)ಲೂಬ್ರಿಕೆಂಟ್

★ ಮಾನವ ಸಂಪನ್ಮೂಲಗಳು

★ ಮಹಿಳಾ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳು

ಈ ಮಾಹಿತಿಯು ಎಂಎಸ್‌ಎಂ ಲೈಂಗಿಕ ಆರೋಗ್ಯ ಸೇವೆಯನ್ನು ಪಡೆಯಲು ಹಿನ್ನೆಲೆ ಒದಗಿಸುತ್ತದೆ.

ಈ ಕೆಳಗಿನ ಉದಾಹರಣೆಗಳನ್ನು ಬಳಸಿ

1. ದೂಮಪಾನ ವಿರೋಧಿ/ ಮದ್ಯಾಪಾನ ವಿರೋಧಿ ಆಂದೋಲನಗಳು ಇವು ಕಾರ್ಯ ಸಾಧಿಸುತ್ತವೆ? ಅಲ್ಲದಿದ್ದರೆ ಏಕೆ?

2. ಧಾರ್ಮಿಕ ಅಂಶಗಳು(ಮುಸ್ಲಿಂ/ಹಿಂದು)ಇವು ಕಾರ್ಯ ಸಾಧಿಸುತ್ತವೆ? ಅಲ್ಲದಿದ್ದರೆ ಏಕೆ?

ಎಂಎಸ್‌ಎಂಗೆ ಸಂಬಂಧಿಸಿದಂತೆ ನಾಚಿಕೆ, ಅಗೋಚರತೆ ಮತ್ತು ಕಳಂಕ ಈ ಅಂಶಗಳನ್ನು ಸಹ ಅನ್ವೇಷಿಸಬೇಕಾಗುತ್ತದೆ.

ಭಯ ಒದರಿಂದಲೇ ನಡವಳಿಕೆಗಳನ್ನು ಬದಲಿಸಬಹುದೆ?

ನಾಚಿಕೆ ತಡೆಗಟ್ಟಬಹುದೇ / ಅಥವಾ ನಡವಳಿಕೆಗಳನ್ನು ಬದಲಿಸಬಹುದೆ?

ನೆನಪಿರಲಿ, ಏಡ್ಸ್ ಗುಣವಾಗದ ರೋಗ ಮತ್ತು ಎಚ್‌ಐವಿಗೆ ಚುಚ್ಚುಮದ್ದು ಇಲ್ಲ. ಆದ್ದರಿಂದ ಎಸ್‌ಟಿಐ/ ಎಚ್‌ಐವಿ ಸೋಂಕು ಗಂಡಾಂತರ ನಿವಾರಿಸಲು ನಡವಳಿಕೆ ಬದಲಾವಣೆಗಳನ್ನು ಸುದೀರ್ಘ ಕಾಲದವರಿಗೂ ಅನುಸಿರಸಬೇಕಾಗುತ್ತದೆ. ಇನ್ನೊಂದು ಅರ್ಥದಲ್ಲಿ ನಡವಳಿಕೆ ಬದಲಾವಣೆಯನ್ನು ನಿರ್ವಹಿಸಬೇಕು. ಅಂದರೆ ಬದುಕಿಗಾಗಿ ಕಾಂಡೋಮ್ ಬಳಕೆ.

ಪ್ರತಿನಿಧಿಗಳ ವಿವಿಧ ಅಂಶಗಳ ಮೇಲೆ ಪ್ರದರ್ಶಿಸುವ ನಾಟಕಗಳು ಈ ಕೆಳಸಕಂಡವುಗಳ ಮೇಲೆ ಬೆಳಕು ಚೆಲ್ಲಬೇಕು.

## ನೀವು ಅನ್ವೇಷಿಸಬೇಕಾದದು:

★ ಕಾಂಡೋಮ್‌ಗಳು ಬಳಕೆಯಾಗುತ್ತಿವೆ ಎಂಬುದು ನಮಗೆ ಹೇಗೆ ಮನದಟ್ಟಾಗುತ್ತದೆ.

★ ಮಹಿಳಾ ಸಂಗಾತಿಗಳ ಮತ್ತು ಸಂಗಾತಿ ಸೂಚನೆಗಳೇನು?

★ ನುಸುಳುವ ಸಂಗಾತಿ (ಕೋವೆಗಳ)ಮೇಲೆ ನಾವು ಹೇಗೆ ಸಬಲೀಕರಣ ಸಾಧಿಸಬಹುದು?

★ ಯಾರು ಶಿಕ್ಷಣ ನೀಡುತ್ತಾರೆ ಮತ್ತು ಹೇಗೆ?

★ ಎಂಎಸ್‌ಎಂಗಳಿಗೆ ಎಸ್‌ಟಿಐ ಚಿಕಿತ್ಸಾ ಸೇವೆಗಳ ಲಭ್ಯತೆ?

★ ಕಾಂಡೋಮ್‌ಗಳು ಮತ್ತು ಲೂಬ್ರಿಕೆಂಟ್‌ಗಳು ಇವುಗಳನ್ನು ಹೇಗೆ ವಿತರಿಸಲಾಗುತ್ತದೆ? ಉಚಿತ ವಿತರಣೆಯೆ? ಸಾಮಾಜಿಕ ಮಾರುಕಟ್ಟೆ ? ವ್ಯತ್ಯಾಸಗಳೇನು?

ಮಧ್ಯಾಹ್ನ2.40 ಸಮುದಾಯ ನಿರ್ಮಾಣ

ಸಂಪರ್ಕ ಮತ್ತು ಸಮುದಾಯವನ್ನು ವ್ಯಾಖ್ಯಾನಿಸಿ, ಕಾರ್ಯಾಗಾರ ನಡೆಸಲಾಗುವ ನಿರ್ದಿಷ್ಟ ನಗರದಲ್ಲಿ ಎಂಎಸ್ಎಂಗೆ ಸಂಬಂಧಿಸಿದಂತೆ ಸಮುದಾಯ ನಿರ್ಮಾಣ ಎಂದರೇನು. ಇಂಥ ಸಮುದಾಯ ಅಸ್ತಿತ್ವದಲ್ಲಿಯೋ ಅಥವಾ ಅವುಗಳು ಕೇವಲ ಸಾಮಾಜಿಕ ಸಂಪರ್ಕ ಜಾಲಗಳೇ?

ಅಭ್ಯಾಸ13: ಎಂಎಸ್ಎಂ ಸಮುದಾಯ ಅಭಿವೃದ್ಧಿಗೆ ಏನನ್ನು ಮಾಡುವ ಅಗತ್ಯವಿದೆ.

ನಗರದಲ್ಲಿ ಎಂಎಸ್ಎಂ ಸಮುದಾಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಏನನ್ನು ಮಾಡಬೇಕಾದ ಅಗತ್ಯವಿದೆ ಎಂಬ ಸಮೂಹದ ಆಲೋಚನೆಗಳನ್ನು ಮುಖ್ಯ ಅಂಶಗಳಾಗಿ ಬರೆಯಬೇಕು.

ಸಮಯ: 20 ನಿಮಿಷಗಳು

ಇದಾದ ಬಳಿಕ, ಆಲೋಚನೆ, ಅಭಿಪ್ರಾಯಗಳನ್ನು ಮಂಡಿಸುವಂತೆ ಪ್ರತಿ ಸಮೂಹಕ್ಕೂ ತಿಳಿಸಬೇಕು. ಈ ಆಲೋಚನೆಗಳನ್ನು ಚರ್ಚಿಸಿ, ವರದಿಯೊಂದನ್ನು ಸಿದ್ಧಪಡಿಸಬೇಕು. ಮಾಹಿತಿ ಕೇಳಬೇಕು ಮತ್ತು ಉದ್ಭವಿಸಿದ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿ ಮಾಡಬೇಕು.

ಸಮಯ: 20 ನಿಮಿಷಗಳು

ಮಧ್ಯಾಹ್ನ: 3.20 ಸಮುದಾಯ ಕ್ರೋಢೀಕರಣ

'ಸಮುದಾಯ ಕ್ರೋಢೀಕರಣ'ವನ್ನು ವ್ಯಾಖ್ಯಾನಿಸಿ ಮತ್ತು ನಗರದಲ್ಲಿ ಎಂಎಸ್ಎಂಗಳಲ್ಲಿ ಮುಂದುವರೆಯುವ ನಡವಳಿಕೆ ಬದಲಾವಣೆ ಅಭಿವೃದ್ಧಿಗೆ ಇದು ಏಕೆ ಅಗತ್ಯ.

ಅಭ್ಯಾಸ 14: ಸಮುದಾಯ ಕ್ರೋಢೀಕರಣವನ್ನು ಹೇಗೆ ಸಾಧಿಸಬಹುದು?

ಸುರಕ್ಷಿತ ಲೈಂಗಿಕ ಅಭ್ಯಾಸಗಳತ್ತ ಸಮುದಾಯವನ್ನು ಅಸ್ತಿತ್ವಗೊಳಿಸಲು ಕ್ರೋಢೀಕರಣಕ್ಕಾಗಿ ಏನು ಅಗತ್ಯವಿದೆ ಎಂಬ ಸಮೂಹ ಆಲೋಚನೆಗಳನ್ನು ಮುಖ್ಯ ಅಂಶಗಳಾಗಿ ಬರೆಯಬೇಕು.

ಸಮಯ: 20ನಿಮಿಷಗಳು

ಇದಾದ ಬಳಿಕ, ಆಲೋಚನೆಗಳನ್ನು ಮಂಡಿಸುವಂತೆ ಪ್ರತಿ ಸಮೂಹಕ್ಕೂ ತಿಳಿಸಬೇಕು. ಈ ಆಲೋಚನೆಗಳ ಬಗ್ಗೆ ಚರ್ಚಿಸಿ ವರದಿಯನ್ನು ಅಭಿವೃದ್ಧಿಪಡಿಸಬೇಕು. ಮಾಹಿತಿಯನ್ನು ಕೇಳಿ ಉದ್ಭವಿಸಿದ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿಗಳನ್ನು ಮಾಡಬೇಕು.

ಸಮಯ: 20 ನಿಮಿಷಗಳು

## ಉದ್ದೇಶ

ಲೈಂಗಿಕ ಆರೋಗ್ಯ ಮತ್ತು ಸುರಕ್ಷಿತ ಲೈಂಗಿಕತೆ ಕೇವಲ ವ್ಯಕ್ತಿಗತ ಕ್ರಿಯೆ ಮತ್ತು ನಡವಳಿಕೆಗೆ ಮಾತ್ರ ಸಂಬಂಧಿಸಿದ್ದಲ್ಲ. ಇದು ಸಾಮಾಜಿಕ/ ಸಮುದಾಯ ಚಟುವಟಿಕೆಗೆ ಸಹ ಸಂಬಂಧಿಸಿದ್ದು ಎಂಬುದನ್ನು ಪ್ರತಿನಿಧಿಗಳಿಗೆ ಅರ್ಥೈಸಬೇಕು.

ಸಂಜೆ4.00 ವಿರಾಮ

ಸಂಜೆ 4.15 ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆಗೆ ಮುಖ್ಯ ಅಂಶಗಳು

ಅಭ್ಯಾಸ15: ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆಗೆ ಮುಖ್ಯ ಅಂಶಗಳು ಯಾವುವು?

ಈವರೆಗೂ ನಡೆದ ಎಲ್ಲ ಚರ್ಚೆಗಳನ್ನು ಪರಾಮರ್ಶಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು ಮತ್ತು ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆಗೆ ಮುಖ್ಯ ಅಂಶಗಳು ಯಾವುವು ಎಂಬ ಬಗ್ಗೆ ಬರೆದುಕೊಳ್ಳಬೇಕು.

ಸಮಯ: 30ನಿಮಿಷಗಳು

ಸಮೂಹಗಳನ್ನು ಒಗ್ಗೂಡಿಸಬೇಕು ಮತ್ತು ತಮ್ಮ ಪಟ್ಟಿಗಳನ್ನು ಮಂಡಿಸುವಂತೆ ಪ್ರತಿ ಸಮೂಹಕ್ಕೆ ತಿಳಿಸಬೇಕು. ಪ್ರತಿನಿಧಿಗಳ ಮಾಹಿತಿಯೊಂದಿಗೆ ಪಟ್ಟಿಗಳನ್ನು ಹೋಲಿಸಬೇಕು ಇಂಥ ಯೋಜನೆ ಒದಗಿಸುವ

ಸೇವೆಗಳನ್ನು ಪಟ್ಟಿ ವಿವರಿಸಬೇಕು.

ಸಮಯ: 30 ನಿಮಿಷಗಳು

## ಉದ್ದೇಶ

ನಗರದಲ್ಲಿ ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆ ಒಳಗೊಂಡ ಸೂಕ್ತ ಸೇವೆಗಳ ಬಗ್ಗೆ ಸ್ವಂತ ಪಟ್ಟಿ ಸಿದ್ಧಪಡಿಸಲು ಮತ್ತು ಯೋಜನಾ ಮಾದರಿಯನ್ನು ಪ್ರತಿನಿಧಿಗಳಿಗೆ ಅರ್ಥೈಸುವಂತೆ ಮಾಡುವುದು.

## ಮಧ್ಯಸ್ಥಿಕೆದಾರರ ಮಂಡನೆ

ಸೇವೆಗಳ ವ್ಯಾಖ್ಯಾನ

- ಶಿಕ್ಷಣ
- ತಡೆಗಟ್ಟುವಿಕೆ
- ದುರ್ಗಮಸ್ಥಳ ತಲುಪುವಿಕೆ
- ಸಾಮಾಜಿಕ ಬೆಂಬಲ
- ಆರೋಗ್ಯ

## ಪ್ರತಿನಿಧಿಗಳಿಂದ ಮಾಹಿತಿ ಚರ್ಚೆ

ಏನು?ಹೇಗೆ? ಎಲ್ಲಿ? ಯಾವಾಗ?

ಯೋಜನಾ ಮಾದರಿಯನ್ನು ಪ್ರದರ್ಶಿಸಿ ಮತ್ತು ಅಭಿವೃದ್ಧಿಗೊಳಿಸಲಾದ ಪಟ್ಟಿಯೊಂದಿಗೆ ಹೋಲಿಸಿ, ಮಾಹಿತಿ ಪಡೆದು, ಅಗತ್ಯವಿದ್ದರೆ ಪಟ್ಟಿಯನ್ನು ಬದಲಿಸಿ ಯೋಜನೆಗಳನ್ನು ಮೂರು ಪ್ರದೇಶಗಳಲ್ಲಿ ವಿಭಜಿಸಿ.

- ಕೇಂದ್ರ
- ಕ್ಷೇತ್ರ
- ಆರೋಗ್ಯ

## ಅಂತಿಮ ಹೇಳಿಕೆಗಳನ್ನು ಸಿದ್ಧಪಡಿಸಿ

ಸಮಯ: 45ನಿಮಿಷಗಳು

ಸಂಜೆ 6.00 ಮುಕ್ತಾಯ

ದಿನದ ಅಡೆತಡೆಗಳು ಮತ್ತು ನಾವು ಪ್ರತಿಯೊಬ್ಬರು ಎದುರಿಸಿದ ಸವಾಲುಗಳಿಗೆ ಸಂಬಂಧಿಸಿದಂತೆ ಕೆಲವು ಮುಕ್ತಾಯ ಹೇಳಿಕೆಗಳನ್ನು ನೀಡಿ. ಪ್ರತಿನಿಧಿಗಳ ಬಗ್ಗೆ ಮತ್ತು ಅವರು ಹಂಚಿಕೊಂಡ ವಿಷಯಗಳ ಬಗ್ಗೆ ಹಾಸ್ಯಾಮಯವಾಗಿ ಕೆಲವು ಪೂರಕ ಹೇಳಿಕೆಗಳನ್ನು ನೀಡಿ.

ಮುಂದಿನ ದಿನಕ್ಕೆ ಕಾಲ ನಿರ್ವಹಣೆ ಬಗ್ಗೆ ಎಲ್ಲ ಪ್ರತಿನಿಧಿಗಳಿಗೂ ಜ್ಞಾಪಿಸಬೇಕು.

ಪ್ರತಿನಿಧಿಗಳಿಗೆ ಪ್ರವಾಸ ಚೀಲಗಳು ಮತ್ತು ಯಾವುದೇ ಬಾಕಿ ಇದ್ದರೆ ನೀಡಬೇಕು ಮತ್ತು ನೋಂದಣಿ ಅರ್ಜಿಯಲ್ಲಿ ಹೆಸರುಗಳನ್ನು ಗುರುತು ಹಾಕಿಕೊಳ್ಳಬೇಕು.

# ಎರಡನೇ ಹಂತ: ಎಂ.ಎಸ್.ಎಂ. ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಮೂರನೇ ದಿನ: ಯೋಜನಾ ಅಭಿವೃದ್ಧಿ (ಭಾಗ ಎರಡು)

ಬೆಳಿಗ್ಗೆ 9.00 ಸ್ವಾಗತ ಮತ್ತು ಮನನ

ಪ್ರತಿ ನಿಧಿಗಳು ಕಾರ್ಯಾಗಾರ ಸ್ಥಳ ಪ್ರದೇಶಿಸುತ್ತಿದ್ದಂತೆ ಅವರಲ್ಲಿ ಹೆಸರುಪಟ್ಟಿ ಬರವಣಿಗೆ ಪ್ಯಾಡ್ ಮತ್ತು ಲೇಖನಿ ಇದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು ಮತ್ತು ದೈನಂದಿನ ನೋಂದಣಿ ಅರ್ಜಿಯನ್ನು ಭರ್ತಿ ಮಾಡಬೇಕು.

ಹಿಂದಿನ ರಾತ್ರಿ ಪ್ರತಿನಿಧಿಗಳು ನಡೆಸಿದ ಉತ್ತಮ ಕಾರ್ಯವನ್ನು ಹೆಸರಿಸುವಂತೆ ತಿಳಿಸಬೇಕು. ಇದನ್ನು ಹಾಸ್ಯಮಯವಾಗಿ ಮಾಡಬೇಕು. ಮಧ್ಯಸ್ಥಿಕೆದಾರರು ಇದಕ್ಕೆ ಪ್ರತಿಕ್ರಿಯೆ ಸಹ ನೀಡಬೇಕು.

ಸಮಯ:15ನಿಮಿಷಗಳು

ಬೆಳಿಗ್ಗೆ 9.15: ಎರಡನೆ ದಿನದ ಮಾಹಿತಿ

### ಸಮೂಹ ಚರ್ಚೆ

ಹಿಂದಿನ ದಿನದ ಅನಿಸಿಕೆ, ಅವರು ಏನನ್ನು ಕಲಿತರು ಎಂಬುದನ್ನು ತಿಳಿಸುವಂತೆ ಪ್ರತಿನಿಧಿಗಳಿಗೆ ಕೇಳಬೇಕು ಮತ್ತು ಅವರು ಯಾವುದೇ ಪ್ರಶ್ನೆಗಳಿದ್ದರೆ ಕೇಳುವಂತೆ ಸೂಚಿಸಬೇಕು.

ಸಮಯ: 30 ನಿಮಿಷಗಳು

ಬೆಳಿಗ್ಗೆ 9.45 ಬೆಂಬಲ ಸೇವೆಗಳ ಅಭಿವೃದ್ಧಿ

### ಮಧ್ಯಸ್ಥಿಕೆದಾರರ ಮಂಡನೆ

### ಬೆಂಬಲ

ಬೆಂಬಲ ಸೇವೆಗಳೆಂದರೇನು ಎಂಬ ಬಗ್ಗೆ ಪ್ರತಿನಿಧಿಗಳಿಗೆ ವಿವರಣೆ ಯಾರಿಗೆ ಬೆಂಬಲ ನೀಡಬೇಕು? ಏಕೆ?

ಪೂರಕ ವಾತಾವರಣ ಸೃಷ್ಟಿಗಾಗಿ ಲೈಂಗಿಕ ಆರೋಗ್ಯವು ಮಾನಸಿಕ, ಭೌತಿಕ ಮತ್ತು ಸಾಮಾಜಿಕ ಅಂಶಗಳನ್ನು ಒಳಗೊಂಡಿದೆ ಎಂಬುದನ್ನು ಪ್ರತಿನಿಧಿಗಳಿಗೆ ಮನದಟ್ಟು ಮಾಡಿಕೊಡಬೇಕು. ಹಿಂದೆ ಅಭಿವೃದ್ಧಿಗೊಳಿಸಲಾದ ಪಟ್ಟಿಗಳಂತೆ ಮುಂದುವರಿಯಬೇಕು. ಲೈಂಗಿಕತೆ ಸ್ಥಳಗಳು ಸಾಮಾಜಿಕತೆಯ ಸ್ಥಳಗಳ ಸಂಕಲ್ಪನೆಗಳನ್ನು ವಿವರಿಸಬೇಕು. ಸಾಮಾಜಿಕತೆಯ ಸ್ಥಳಕ್ಕೆ ಹೋಲಿಸಿದಲ್ಲಿ ಲೈಂಗಿಕತೆಯ ಸ್ಥಳಗಳಲ್ಲಿ ಪರಿಣಾಮಕಾರಿ ಶಿಕ್ಷಣ ಮತ್ತು ಬೆಂಬಲ ಸೇವೆಗಳನ್ನು ನೀಡುವ ಸಾಧ್ಯತೆ ಏನು? ಪ್ರತಿನಿಧಿಗಳೊಂದಿಗೆ ಸಾಮಾಜಿಕ ಮತ್ತು ಸಮುದಾಯ ನಿರ್ಮಾಣ ಪ್ರಕ್ರಿಯೆಗಳನ್ನು ಚರ್ಚಿಸಬೇಕು. ಮಾಹಿತಿಯೊಂದಿಗೆ ಚರ್ಚೆ ವೇಳೆ ಉದ್ಭವಿಸಿದ ಯಾವುದೇ ಪ್ರಮುಖ ಅಂಶಗಳನ್ನು ಬರೆಯಬೇಕು.

- ಸಲಹೆ
- ಈ ಹಿನ್ನೆಲೆಯಲ್ಲಿ ಸಲಹೆ ಎಂದರೆ ಏನೆಂಬುದನ್ನು ವ್ಯಾಖ್ಯಾನಿಸಿ
- ವೈಯಕ್ತಿಕ
- ಸಾಮಾಜಿಕ
- ಕಾನೂನು
- ಪಡೆಯುವಿಕೆ ಮತ್ತು ನಿರ್ದಿಷ್ಟತೆ

ಅಭಿವೃದ್ಧಿ ಸೇವೆಗಳ ಹಿನ್ನೆಲೆಯಲ್ಲಿ ಪಡೆಯುವಿಗೆ ಮತ್ತು ನಿರ್ದಿಷ್ಟತೆ ಪದಗಳನ್ನು ವಿವರಿಸಬೇಕು.

ಸಮಯ:30ನಿಮಿಷಗಳು

## ಅಭ್ಯಾಸ 16: ಸಲಹೆ ಅಭಿವೃದ್ಧಿ ಮತ್ತು ಬೆಂಬಲ ಸೇವೆಗಳು

ಮೂರು ಗುಂಪುಗಳಲ್ಲಿ ಈ ಕೆಳಗಿನ ಪ್ರತಿ ಸನ್ನಿವೇಶಗಳನ್ನು ಚರ್ಚಿಸಿ

★ ನೀವು ಇತರ ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವುದನ್ನು ಪೋಷಕರು/ಪತ್ನಿ/ಕುಟುಂಬ ತಿಳಿಯುತ್ತದೆ.

★ ಯಾವ ಪರಿಸ್ಥಿತಿ ಉಂಟಾಗಬಹುದು?

★ ವ್ಯಕ್ತಿ ಏನು ಮಾಡಬಯಸುತ್ತಾನೆ?

★ ಉದ್ಯಾನದಲ್ಲಿ ನಿಮ್ಮನ್ನು ಹೊಡೆದು ದೋಚುತ್ತಾರೆ.

★ ಗೂಂಡಾ(ಸ್ಥಳೀಯ ಪದ)

★ ಪೊಲೀಸ್

ನಿಮಗೆ ಏನು ಬೇಕಾಗಿದೆ?

★ ನಿಮಗೆ ಎಸ್‌ಟಿಐ ಇದೆ ಮತ್ತು ನಿಮಗೆ ತಕ್ಷಣ ಚಿಕಿತ್ಸೆ ನೀಡಬೇಕೆಂದು ಕ್ಷೇತ್ರ ಕಾರ್ಯಕರ್ತರು ಶಿಫಾರಸು ಮಾಡುತ್ತಾರೆ. ನೀವು ಸಹ ವಿವಾಹಿತರು, ನಿಮ್ಮ ಪತ್ನಿಗೆ ನೀವು ಈ ವಿಷಯ ತಿಳಿಸಬೇಕೆಂದು ನಿಮಗೆ ತಿಳಿಸುತ್ತಾರೆ ಮತ್ತು ಆಕೆಗೂ ಚಿಕಿತ್ಸೆ ನೀಡಬೇಕು.

★ ಯಾವ ಪರಿಸ್ಥಿತಿ ಉಂಟಾಗಬಹುದು?

★ ನೀವು ಏನು ಮಾಡಬಯಸುತ್ತೀರಿ?

★ ನಿಮ್ಮ ಪತ್ನಿ ಏನು ಮಾಡುತ್ತಾರೆ?

★ ಸಾಮಾಜಿಕ ಭಾವನಾತ್ಮಕ ಮತ್ತು ಕಾನೂನು ಅಗತ್ಯಗಳೇನು?

ಈ ಸನ್ನಿವೇಶಗಳ ಚರ್ಚೆ ನಂತರ, ಯೋಜನೆಗೆ ಒದಗಿಸಬೇಕಾದ ಸೇವೆಗಳ ಬಗ್ಗೆ ಚರ್ಚಿಸಬೇಕು.

ಮುಖ್ಯ ಅಂಶಗಳನ್ನು ಪಟ್ಟಿ ಮಾಡಬೇಕು.

ಸಮಯ 20 ನಿಮಿಷಗಳು

ಇದಾದ ನಂತರ ಎರಡು ಗುಂಪುಗಳನ್ನು ಸೇರಿ ತಮ್ಮ ಅಭಿಪ್ರಾಯಗಳನ್ನು ಮಂಡಿಸುವಂತೆ ಪ್ರತಿ ಸಮೂಹಕ್ಕೂ ತಿಳಿಸಬೇಕು. ಪ್ರತಿ ಮಂಡನೆಯನ್ನು ವಿಶ್ಲೇಷಿಸಿ ಪ್ರತಿನಿಧಿಗಳಿಂದ ಮಾಹಿತಿ ಪಡೆಯಬೇಕು. ಈ ಮೇಲಿನಿಂದ ಗುರುತಿಸಲಾದ ಅಗತ್ಯತೆಗಳೊಂದಿಗೆ ಅಗತ್ಯ ಸೇವೆಗಳ ಪಟ್ಟಿಯನ್ನು ಸಾರಾಂಶಗೊಳಿಸಬೇಕು.

ಸಮಯ: 25ನಿಮಿಷಗಳು

## ಉದ್ದೇಶ

ಪುರುಷರೊಂದಿಗೆ ಲೈಂಗಿಕ ಕ್ರಿಯೆ ನಡೆಸುವ ಪುರುಷರಿಗೆ ಅಗತ್ಯವಾದ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ ಮತ್ತು ಬೆಂಬಲ ಪರಿಕಲ್ಪನೆಯನ್ನು ಪ್ರತಿನಿಧಿಗಳಿಗೆ ಅರ್ಥೈಸುವುದು.

ಬೆಳಿಗ್ಗೆ 11.00 ವಿರಾಮ

ಬೆಳಿಗ್ಗೆ 11.15 ಚಟುವಟಿಕೆಗಳನ್ನು ಗುರುತಿಸುವಿಕೆ

ಎರಡನೇ ಹಂತ: ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಮಧ್ಯಸ್ಥಿಕೆದಾರರ ಮಂಡನೆ

ಉದ್ದೇಶಗಳು, ಸಾಧನೆ ಗುರಿಗಳು ಮತ್ತು ಸೂಚನೆ ಕುರಿತು ಸಂಕ್ಷಿಪ್ತ ಪರಾಮರ್ಶೆ ನೀಡಬೇಕು. ನಡವಳಿಕೆ ಬದಲಾವಣೆ ಉತ್ತೇಜನ ಮತ್ತು ಪೂರಕ ವಾತಾವರಣ ಸೃಷ್ಟಿಗಾಗಿ ಕಾರ್ಯತಂತ್ರಗಳ ಬಗ್ಗೆ ಹಿಂದೆ ನಡೆದ ಚರ್ಚೆಗಳ ಬಗ್ಗೆ ಪ್ರತಿನಿಧಿಗಳಿಗೆ ಈ ಹಿಂದಿನ ಚರ್ಚೆಗಳು ಗುರುತಿಸಲ್ಪಡುವ ಕಾರ್ಯತಂತ್ರಗಳು

ಎಂಬುದನ್ನು ಹೇಳಬೇಕು. ಈಗ ಸಮೂಹ ಚಟುವಟಿಕೆಗಳನ್ನು ಅನ್ವೇಷಿಸುವ ಅಗತ್ಯವಿದೆ.

## ಯೋಜನಾ ಮಾದರಿಯನ್ನು ಮತ್ತೆ ಪ್ರದರ್ಶಿಸಬೇಕು

★ ಕ್ಷೇತ್ರ ಸೇವೆಗಳು
★ ಕೇಂದ್ರ ಸೇವೆಗಳು
★ ಆರೋಗ್ಯ ಸೇವೆಗಳು

## ಕಾರ್ಯತಂತ್ರಗಳು:

★ ಕಾಂಡೋಮ್‌ಗಳ ವಿತರಣೆ
★ ಸುರಕ್ಷಿತ ಲೈಂಗಿಕತೆಗೆ ಉತ್ತೇಜನ
★ ಎಸ್‌ಟಿಐಗೆ ಆರಂಭಿಕ ಚಿಕಿತ್ಸೆ
★ ಎಂ.ಎಸ್.ಎಂ. ಲೈಂಗಿಕ ಸಂಗಾತಿಗಳ (ಪತ್ನಿಯರು ಮತ್ತು ಇತರ ಸಂಗಾತಿಗಳು/ ಮಹಿಳಿಯರು) ಎಸ್‌ಟಿಐ ಚಿಕಿತ್ಸೆ
★ ಸಮುದಾಯ ನಿರ್ಮಾಣ
★ ಸಮುದಾಯ ಕ್ರೋಢೀಕರಣ

ಸಮಯ: 30 ನಿಮಿಷಗಳು ಈ ಕಾರ್ಯತಂತ್ರಗಳನ್ನು ಹೇಗೆ ಅನುಷ್ಠಾನಗೊಳಿಸಬೇಕು? ಇವುಗಳನ್ನು ಯಾರು ಅನುಷ್ಠಾನಗೊಳಿಸುತ್ತಾರೆ?

ಸಮೂಹದ ಪ್ರತಿನಿಧಿಗಳಿಗೆ ಮೇಲಿನ ಕಾರ್ಯತಂತ್ರಗಳ ಬಗ್ಗೆ ಚರ್ಚಿಸುವಂತೆ ಹಾಗೂ ಅವುಗಳನ್ನು ಅನುಷ್ಠಾನಗೊಳಿಸಲು ನೆರವಾಗುವ ಚಟುವಟಿಕೆಗಳ ಪಟ್ಟಿಯನ್ನು ಅಭಿವೃದ್ಧಿಗೊಳಿಸುವಂತೆ ತಿಳಿಸಬೇಕು. ಅವರು ಸೂಕ್ತತೆ, ಪಡೆಯುವಿಕೆ ಮತ್ತು ಬೆಂಬಲ ಪರಿಕಲ್ಪನೆ ಚರ್ಚೆಗಳನ್ನು ಕಾರ್ಯರೂಪಕ್ಕೆ ತರಬೇಕು. ಈ ಚಟುವಟಿಕೆಗಳು ಎಲ್ಲಿ ನಡೆಯುತ್ತವೆ ಎಂಬ ಬಗ್ಗೆ ಚರ್ಚೆ ನಡೆಯಬೇಕು.

ಇಂಥ ಚಟುವಟಿಕೆಗಳನ್ನು ಯಾರು ನಡೆಸುತ್ತಾರೆ ಮತ್ತು ಅವರಿಗೆ ಯಾವ ಕೌಶಲ್ಯ ಇದೆ ಎಂಬ ಬಗ್ಗೆ ಸಹ ಪ್ರತಿನಿಧಿಗಳು ಚರ್ಚಿಸಬೇಕು.

ಸಮೂಹಗಳು ಈ ಕೆಳಗಿನ ಶಿರ್ಷಿಕೆಗಳೊಂದಿಗೆ ಪಟ್ಟಿಯನ್ನು ತಯಾರಿಸಬೇಕು. ಉದ್ದೇಶಗಳು ರೂಪರೇಷೆಗಳು ಮತ್ತು ಚಟುವಟಿಕೆಗಳು

ಸಮಯ: 40ನಿಮಿಷಗಳು

ಇದಾದ ನಂತರ, ಪ್ರತಿ ಸಮೂಹ, ತನ್ನ ಚರ್ಚೆಯ ಫಲಿತಾಂಶಗಳನ್ನು ಮಾಡಿಸಬೇಕು. ಪೂರಕ ಮತ್ತು ಋಣಾತ್ಮಕ ಅಂಶಗಳನ್ನು ಉಲ್ಲೇಖಿಸಬೇಕು. ಎಲ್ಲ ಅಂಶಗಳನ್ನು ಪರಾಮರ್ಶಿಸಿ ಮಾಹಿತಿ ಕೇಳಬೇಕು.

## ಚರ್ಚೆ:

★ ಪ್ರತಿ ಸೇವೆಯಲ್ಲಿ ಏನು ಒಳಗೊಂಡಿರಬೇಕು
★ ಯಾರು ಕೆಲಸವನ್ನು ನಿರ್ವಹಿಸುತ್ತಾರೆ
★ ಕಾರ್ಯವು ಹೆಗೆ ನಡೆಯುತ್ತದೆ
★ ಅನುಷ್ಠಾನ ವೇಳಾ ಪಟ್ಟಿಯನ್ನು ಅಭಿವೃದ್ಧಿಗೊಳಿಸಬೇಕು
★ ಸಿಬ್ಬಂದಿ ಅಗತ್ಯ

ಸಮಯ: 35ನಿಮಿಷಗಳು

## ಉದ್ದೇಶ:

ತಮ್ಮ ಉದ್ದೇಶಗಳನ್ನು ಸಾಧಿಸುವತ್ತ ಸೂಕ್ತ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಲು ಪ್ರತಿನಿಧಿಗಳಿಗೆ ಅನುವು ಮಾಡಿಕೊಡುವುದು.

## ಮಧ್ಯಸ್ಥರ ಟಿಪ್ಪಣಿಗಳು:

ಕಾರ್ಯತಂತ್ರಗಳು ಮತ್ತು ಚಟುವಟಿಕೆಗಳು

ಕಾರ್ಯತಂತ್ರಗಳು ಮತ್ತು ಚಟುವಟಿಕೆಗಳ ಉದಾಹರಣೆ

## ಗುರಿ:

ಪುರುಷ ಲೈಂಗಿಕ ಕಾರ್ಯಕರ್ತರು ಮತ್ತು ಅವರ ಗ್ರಾಹಕರಲ್ಲಿ ಎಸ್‌ಟಿಐ/ಎಚ್‌ಐವಿ ಸೋಂಕು ಗಂಡಾಂತರಗಳ ಇಳಿಕೆ

## ಉದ್ದೇಶ:

ಪುರುಷ ಲೈಂಗಿಕ ಕಾರ್ಯಕರ್ತರು ಮತ್ತು ಅವರ ಗ್ರಾಹಕರಲ್ಲಿ ಕಾಂಡೋಮ್ ಬಳಕೆ ಹೆಚ್ಚಿಸುವುದು

## ಕಾರ್ಯತಂತ್ರಗಳು:

ಸಾರ್ವಜನಿಕ ಲೈಂಗಿಕ ಪರಿಸರಗಳಲ್ಲಿ ಕಾಂಡೋಮ್ ಲಭ್ಯತೆ ಸುಧಾರಣೆ

### ಚಟುವಟಿಕೆಗಳು

ಸಾರ್ವಜನಿಕ ಸ್ಥಳಗಳಲ್ಲಿ ಕಾಂಡೋಮ್‌ಗಳ ವಿತರಣೆಗೆ ಕಾರ್ಯಕರ್ತರ ಬಳಕೆ, ಪುರುಷ ಲೈಂಗಿಕ ಕಾರ್ಯಕರ್ತರಿಗೆ ಮತ್ತು ಅವರ ಗ್ರಾಹಕರಿಗೆ ಕಾಂಡೋಮ್ ಬಳಕೆ ಬಗ್ಗೆ ಶಿಕ್ಷಣ ಹಾಗೂ ಎಸ್‌ಟಿಐ/ ಎಚ್‌ಐವಿ/ ಏಡ್ಸ್ ಜಾಗೃತಿ?

ಇದು ಈಗಾಗಲೇ ನಡೆಸಲಾದ ಗಂಡಾಂತರ ಮತ್ತು ಅಗತ್ಯ ಅಧ್ಯಯನದ ಜ್ಞಾನ, ಧೋರಣೆ ಮತ್ತು ನಡವಳಿಕೆಯ ಪೂರ್ವ ಜ್ಞಾನವನ್ನು ಆಧರಿಸಿರುತ್ತವೆ.

ಒಂದು ವೇಳೆ ಇದನ್ನು ನಡೆಸದಿದ್ದರೆ ಆರಂಭಿಕ ಗಂಡಾತರ ಮತ್ತು ಅಗತ್ಯ ಅಧ್ಯಯನ ಸೇರಿದಂತೆ ಹೆಚ್ಚುವರಿ ರೂಪುರೇಷೆಯನ್ನು ಒಳಗೊಂಡಿರುತ್ತದೆ. ಬಳಿಕ ಸೂಕ್ತ ಕಾರ್ಯತಂತ್ರಗಳನ್ನು ಅಭಿವೃದ್ಧಿಗೊಳಿಸಬೇಕಾಗುತ್ತದೆ.

ಏಕ ಉದ್ದೇಶ ಸಾಧಿಸಲು ಹಲವಾರು ಕಾರ್ಯತಂತ್ರಗಳನ್ನು ಗುರುತಿಸಲಾಗಿದೆ. ಉದ್ದೇಶ ಸಾಧನೆಗೆ ಅನುವಾಗುವಂತೆ ಪ್ರತಿ ಕಾರ್ಯತಂತ್ರವನ್ನು ಇತರ ಕಾರ್ಯತಂತ್ರದೊಂದಿಗೆ ಸೇರಿಸಬೇಕು. ಉದಾಹರಣೆಗೆ ಕೇವಲ ಕಾಂಡೋಮ್‌ಗಳ ವಿತರಣೆಯಲ್ಲದೆ ನೀವು ಇದನ್ನು ಸಹ ಮಾಡಬಹುದು.

- ★ ಸಾಮಾಜಿಕ ಬೆಂಬಲ ಸಮೂಹಗಳು
- ★ ಎಸ್‌ಟಿಐ ಕ್ಲಿನಿಕ್‌ಗಳು
- ★ ಸಬಲೀಕರಣ ಮತ್ತು ಆತ್ಮಾಭಿಮಾನ ಕಾರ್ಯಕ್ರಮಗಳು
- ★ ಶಿಕ್ಷಣ ಸಾಮಾಗ್ರಿಗಳ ವಿತರಣೆ
- ★ ಶಿಕ್ಷಣ ಸಾಮಾಗ್ರಿಗಳ ಅಭಿವೃದ್ಧಿ

## ಚಟುವಟಿಕೆಗಳು

ಇವುಗಳನ್ನು ವಿಶಾಲ ದೃಷ್ಟಿಕೋನಗಳಿಂದ ಹೇಳಬಹುದು. ಸವಿವರ ಯೋಜನೆಯನ್ನು ಅಭಿವೃದ್ಧಿಗೊಳಿಸಿದರೆ ಪ್ರತಿ ಚಟುವಟಿಕೆಗಳನ್ನು ಇನ್ನಷ್ಟು ವಿವರವಾಗಿ ವಿಭಾಗಿಸಬಹುದು.

**ಉದಾಹರಣೆಗೆ**

ಕ್ಷೇತ್ರ ಕಾರ್ಯಕರ್ತರ ಆಯ್ಕೆ ಮತ್ತು ತರಬೇತಿಯನ್ನು ಈ ಕೆಳಕಂಡಂತೆ ವಿಭಜಿಸಬಹುದು

- ★ ಆಯ್ಕೆಗೆ ಮಾನದಂಡ ಅಭಿವೃದ್ಧಿ
- ★ ಕ್ಷೇತ್ರ ಕಾರ್ಯಕರ್ತರನ್ನು ಗುರುತಿಸುವಿಕೆ ಮತ್ತು ನೇಮಕ
- ★ ತರಬೇತಿ ಅಗತ್ಯ ಅಧ್ಯಯನ
- ★ ತರಬೇತಿ ಕಾರ್ಯಕ್ರಮ ಅಭಿವೃದ್ಧಿ
- ★ ತರಬೇತಿ ಕಾರ್ಯಕ್ರಮ ಆಯೋಜನೆ
- ★ ಮುಂದವರಿದ ತರಬೇತಿ ಮತ್ತು ಕೌಶಲ್ಯಗಳ ಪರಾಮರ್ಶೆ

## ವೇಳಾಪಟ್ಟಿ

ಆರಂಭದಲ್ಲೇ ಯೋಜನೆಗಳ ಫಲಪ್ರದವಾಗದು ಎಂಬುದನ್ನು ಪ್ರತಿನಿಧಿಗಳಿಗೆ ಮನದಟ್ಟು ಮಾಡಿಕೊಡುವುದು ಮುಖ್ಯ. ಸೂಕ್ತ ಯೋಜನೆಗೆ ಪರಿಣಾಮಕಾರಿ ಅನುಷ್ಠಾನ ವೇಳಾಪಟ್ಟಿ ಅಗತ್ಯ. ನಿರ್ದಿಷ್ಟ ಸೇವೆ ಅಭಿವೃದ್ಧಿಗೆ ಎಷ್ಟು ಸಮಯ ಬೇಕು ನೀವು ಒದಗಿಸಬೇಕಾದ ಸೇವೆ ಏನು ಮತ್ತು ನಿರ್ದಿಷ್ಟ ಸೇವೆ ಯಾವಾಗ ಕಾರ್ಯಗರ್ತವಾಗುತ್ತದೆ ಎಂಬುದು ಇದರ ಅರ್ಥ.

ಈ ಮೇಲಿನದನ್ನು ಮಾದರಿ ವೇಳಾಪಟ್ಟಿಯಾಗಿ ಬಳಸಿ ಪ್ರಾತ್ಯಕ್ಷಿಕೆ.

## ಸಿದ್ಧಗೊಳಿಸಿ

**ಸಿಬ್ಬಂದಿ ಮಟ್ಟಗಳು:**

ಸಿಬ್ಬಂದಿ ಮಟ್ಟಗಳಲ್ಲಿ ಎದುರಾಗುವ ಆರ್ಥಿಕ ಮುಗ್ಗಟ್ಟುಗಳನ್ನು ಮತ್ತು ಪ್ರತಿಸೇವೆಗೆ ಪರಿಣಾಕಾರಿ ವೆಚ್ಚವನ್ನು ಪ್ರತಿನಿಧಿಗಳು ಅರ್ಥಮಾಡಿಕೊಳ್ಳಬೇಕು.

ಸೇವೆಗೆ ತುಂಬಾ ಮಂದಿ ಸಿಬ್ಬಂದಿಯನ್ನು ಬಳಸಿಕೊಂಡರೆ ಆರ್ಥಿಕ ತೊಂದರೆ, ಪರಿಣಾಮಕಾರಿಯಲ್ಲದ ಸೇವೆ ಮತ್ತು ತೊಂದರೆ ಫಲಿತಾಂಶಗಳಿಗೆ ಕಾರಣವಾಗಬಹುದು.

**ಉದಾಹರಣೆಗೆ:**

200 ಫಲಾನುಭವಿ ಜನಸಂಖ್ಯೆ ಇರುವ ಒಂದು ಸ್ಥಳದಲ್ಲಿ 10 ಕ್ಷೇತ್ರ ಕಾರ್ಯಕರ್ತರು ಕಾರ್ಯ ನಿರ್ವಹಿಸಿದರೆ, 20 ಜನಸಂಖ್ಯೆಗೆ ಒಬ್ಬ ಕ್ಷೇತ್ರ ಕಾರ್ಯಕರ್ತ ಎಂದಾಗುತ್ತದೆ. ಇದು ಅಸಮತೋಲನ ಎಂಬುದು ವೆಚ್ಚ ಅನುಕೂಲ ವಿಶ್ಲೇಷಣೆ ಸೂಚಿಸುತ್ತದೆ. ಇಂಥ ಯೋಜನೆಗೆ ದಾನಿಗಳು ಬೆಂಬಲ ನೀಡುವುದಿಲ್ಲ.

ಮಧ್ಯಾಹ್ನ1.00 ಭೋಜನ

ಮಧ್ಯಾಹ್ನ 2.00ಬಿಸಿಸಿ ಎಂದರೇನು?

## ಮಧ್ಯಸ್ಥಿಕೆದಾರರ ಮಂಡನೆ

ಬಿಸಿಸಿ ಎಂದರೇನು ವಿವರಿಸಿ. ಉದ್ದೇಶಗಳು, ಕಾರ್ಯತಂತ್ರಗಳು ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಿಂದಿನ ಚರ್ಚೆಗಳ ಬಗ್ಗೆ ಪ್ರತಿನಿಧಿಗಳಿಗೆ ನೆನಪಿಸಿ ಈ ಚರ್ಚೆಗಳಿಂದ ಯೋಜನೆಯು ಹೀಗೆ ಬಳಸಲ್ಪಡುತ್ತದೆ.

ಸಮಾನ ಶಿಕ್ಷಣ ಮತ್ತು ಬೆಂಬಲದ ಮೂಲಕ ವೈಯಕ್ತಿಕ ಸಂಪರ್ಕ ಸಮಾನರು ಎಂಬ ಪದವನ್ನು ವ್ಯಾಖ್ಯಾನಿಸಿ, ಅಂದರೆ ಸಮಾನ ವಯಸ್ಸು, ಹಿನ್ನೆಲೆ ಇತ್ಯಾದಿ.

ಗಮನಾರ್ಹ ನಡವಳಿಕೆ ಬದಲಾವಣೆ ಉತ್ತೇಜನದತ್ತ ನಡೆಸುವ ವಿಧಾನದ ಒಂದು ಭಾಗ ಈ ಪ್ರಕ್ರಿಯೆ ಆರೋಗ್ಯ ಸೇವೆಗಳು, ಸಮುದಾಯ ನಿರ್ಮಾಣ ರೂಪುರೇಷೆಗಳು, ಸಲಹೆ, ಕಾಂಡೋಮ್ ಪ್ರವರ್ತನೆ ಮತ್ತು ಪೂರಕ ವಾತಾವರಣ ಅಭಿವೃದ್ಧಿಯೊಂದಿಗೆ ಬಿಸಿಸಿ ಪ್ರಮುಖ ಅಂಶವಾಗಿ ಗೋಚರಿಸಲ್ಪಡುತ್ತದೆ.

ಹಿಂದೆ ತೋರಿಸಲ್ಪಟ್ಟ ನಡವಳಿಕೆ ನಕ್ಷೆಯನ್ನು ಗಮನಿಸಿ

ನಡವಳಿಕೆ ಪರಿವರ್ತನೆ ಎಷ್ಟು ಕಷ್ಟ ಎಂಬುದನ್ನು ತೋರಿಸಲು ಮಧ್ಯಸ್ಥಿಕೆದಾರರು ವೈಯಕ್ತಿಕ ಉದಾಹರಣೆ (ಸಾಧ್ಯವಾದರೆ) ಬಳಸಬೇಕು. ಉದಾಹರಣೆ ಸಿಗರೇಟು ಸೇವನೆ, ನಡವಳಿಕೆ ಬದಲಾವಣೆ ಹಾಗೂ ಅದರ ಪರಿವರ್ತನೆಗೆ ವೈಯಕ್ತಿಕ ಹೂಡಿಕೆ ಮತ್ತು ಉತ್ತೇಜನದ ಅಗತ್ಯವಿದೆ ಎಂಬುದನ್ನು ವಿವರಿಸಬೇಕು. ವೈಯಕ್ತಿಕ ಬಂಡವಾಳ ಹೂಡಿ ಪರಿವರ್ತನೆಗೆ ವ್ಯಕ್ತಿಗಳ ಮನವೊಲಿಸುವುದು ಒಂದು ಸವಾಲು.

ನಡವಳಿಕೆ ಬದಲಾವಣೆಗೆ ಬಿಸಿಸಿ ಒಂದು ಸಂದೇಶ ಸಂಪರ್ಕ.

ಸಮಯ: 30 ನಿಮಿಷಗಳು

**ಅಭ್ಯಾಸ 18:** ಯಾವ ಸಂದೇಶಗಳನ್ನು ನೀಡಬೇಕು

ಸಮೂಹಗಳಲ್ಲಿ ಬಿಸಿಸಿಯ ಭಾಗವಾಗಿ ಸಂದೇಶಗಳು ಯಾವುದಿರಬೇಕೆಂಬ ಬಗ್ಗೆ ಚಿಂತನೆ ನಡೆಸಲು ಪ್ರತಿನಿಧಿಗಳಿಗೆ ತಿಳಿಸಬೇಕು. ಇಂಥ ಸಂದೇಶಗಳ ಪಟ್ಟಿಯನ್ನು ಸಿದ್ಧಪಡಿಸುವಂತೆ ತಿಳಿಸಿ ನಡವಳಿಕೆ ಪರಿವರ್ತನೆಗೆ ವ್ಯಕ್ತಿಗಳ ಮನವೊಲಿಕೆಯಲ್ಲಿ ಸಫಲವಾಗುವ ಕಾರಣಗಳನ್ನು ಅಭಿವೃದ್ಧಿಗೊಳಿಸುವಂತೆಯೂ ತಿಳಿಸಬೇಕು.

ಸಮಯ: 20ನಿಮಿಷಗಳು

ಇದಾದ ನಂತರ ಪ್ರತಿ ಸಮೂಹ ತಮ್ಮ ಮಂಡನೆಗಳನ್ನು ಮಂಡಿಸಬೇಕು. ಗುರುತಿಸಲ್ಪಟ್ಟ ಪ್ರತಿ ಸಂದೇಶಗಳ ಗುಣಮಟ್ಟ ಮತ್ತು ಮೌಲ್ಯದ ಬಗ್ಗೆ ಚರ್ಚಿಸಬೇಕು. ಇವು ಯಶಸ್ವಿಯಾಗುವುದೆ? ಇವು ಸಫಲವಾಗಲು ಏನು ಮಾಡಬೇಕು? ಇವು ಸೂಕ್ತವಾಗಿವೆಯೆ? ಪಡೆಯಬಹುದೆ? ಉದ್ದೇಶಿತ ಸಮೂಹ/ನಡವಳಿಕೆಗೆ ಸಮರ್ಪಕವೆ?

ಸಮಯ: 30 ನಿಮಿಷಗಳು

## ಉದ್ದೇಶ

ಸಮುದಾಯ ಆಧರಿತ ಎಂಎಸ್ಎಂ ಯೋಜನೆ ಹಿನ್ನೆಲೆಯಲ್ಲಿ ಬಿಸಿಸಿ ಸಮಾನ ರೂಪುರೇಷೆಗಳನ್ನು ಒಳಗೊಂಡಿದೆ.

- ಜ್ಞಾನ ಮತ್ತು ಮಾಹಿತಿ ಒದಗಿಸಲು ಶಿಕ್ಷಣ
- ನಡವಳಿಕೆ ಬದಲಾವಣೆಗೆ ಪ್ರೋತ್ಸಾಹ ಮತ್ತು ನಿರ್ವಹಣಾ ಬೆಂಬಲ
- ಮತ್ತೊಂದು ನಡವಳಿಕೆ ಪರಿವರ್ತನೆ ಪ್ರಕ್ರಿಯೆ ನಕ್ಷೆಯನ್ನು ಇಲ್ಲಿ ಬಳಸಬಹುದು
- ಜ್ಞಾನ
- ಸಮ್ಮತಿ
- ಉದ್ದೇಶ
- ಅಭ್ಯಾಸ
- ಬದಲಾವಣೆಗಾಗಿ ಸಲಹೆ

ನಡವಳಿಕೆ ಪರಿವರ್ತನೆ ಪ್ರಕ್ರಿಯೆ ಈ ಕೆಳಕಂಡ ಅಂಶಗಳನ್ನು ಒಳಗೊಂಡಿರಬೇಕು ಎಂಬುದನ್ನು ಜ್ಞಾಪಕದಲ್ಲಿಡಿ.

- ಜ್ಞಾನ
- ಬಯಕೆ
- ಇಚ್ಛಾಶಕ್ತಿ
- ಕೌಶಲ್ಯ
- ಸಾಮರ್ಥ್ಯ/ಶಕ್ತಿ

ಆದ್ದರಿಂದ ವ್ಯಕ್ತ/ ಸಮೂಹ ಬದಲವಾಣೆಗೆ ಅಗತ್ಯವಾದ ಸಮ್ಮತಿ ಮತ್ತು ಸ್ವೀಕಾರವನ್ನು ಮೊದಲು ಪಡೆಯಬೆಕು. ಸಮಸ್ಯೆಗಳನ್ನು ಅವರು ಗುರುತಿಸಬೇಕು. ಸಾಮಾನ್ಯವಾಗಿ ಸಮೂಹದಲ್ಲಿರುವ ಇತರರು ಸಮಸ್ಯೆಯನ್ನು ಮುಂದಿಟ್ಟಾಗ ಅದನ್ನು ಮುಕ್ತವಾಗಿ ಚರ್ಚಿಸಬೇಕು. ಒಮ್ಮೆ ವ್ಯಕ್ತಿ/ ಸಮೂಹ ಸಮಸ್ಯೆಯನ್ನು ಗುರುತಿಸಿದಾಗ ವೈಯಕ್ತಿಕ ಕ್ರಮದ ಅಗತ್ಯವಿರುತ್ತದೆ. ಇದು ಬದಲಾವಣೆಗೆ ಸಮ್ಮತಿ ಅಥವಾ ಉದ್ದೇಶವಾಗುತ್ತವೆ.

ಇದು ನಡವಳಿಕೆ ಅಭ್ಯಾಸದ ಪರಿವರ್ತನೆಗೆ ಕಾರಣವಾಗುತ್ತದೆ. ಇವು ಉತ್ತೇಜನ ಅಥವಾ ವೈಯಕ್ತಿಕ ತೃಪ್ತಿಗೆ ಕಾರಣವಾದರೆ ಇದು ಒಳ್ಳೆಯ ಅನುಭವದ ಭಾವನೆ ನೀಡುತ್ತದೆ. ಇತರರಲ್ಲಿ ಇಂಥ ಬದಲಾವಣೆಗೆ ಸಲಹೆಗೂ ಕಾರಣವಾಗುತ್ತದೆ.

ನಗರದಲ್ಲಿ ಎಂಎಸ್‌ಎಂ ನಡವಳಿಕೆಗಳು ಮತ್ತು ಅಸ್ತಿತ್ವಗಳ ಹಿನ್ನೆಲೆಯಲ್ಲಿ ಯಾರು ಕಾಂಡೋಮ್‌ಗಳನ್ನು ಬಳಸುತ್ತಾರೆ?

## ಬಿಸಿಸಿ ಸಂದೇಶಗಳು

ಎಂಎಸ್‌ಎಂ ನಡವಳಿಕೆಗಳು ಮತ್ತು ಅಸ್ತಿತ್ವಗಳ ಶ್ರೇಣಿಯ ಹಿನ್ನೆಲೆಯೊಳಗೆ ವಿವಿಧ ವ್ಯಕ್ತಿಗಳು, ಸಮೂಹಗಳು ಮತ್ತು ಜಾಲಗಳಿಗೆ ವಿಭಿನ್ನ ಸಂದೇಶಗಳ ಅಗತ್ಯವಿದೆ.

## ಸಂದೇಶಗಳು

- ಜನರ ಬಳಿಗೆ ಹೋಗಬೇಕು. ಬದಲಾವಣೆ ಬಯಕೆಯಲ್ಲಿದೆ. ಬುದ್ಧಿಜೀವಿಗಳ ಧೋರಣೆಗಳು ಅಸಮರ್ಪಕ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಸಂದೇಶಗಳು ಪೂರಕ ಭಾವನಾತ್ಮಕ ಪ್ರತಿಕ್ರಿಯೆಯನ್ನು ಉತ್ತೇಜಿಸಬೇಕು ಮತ್ತು ಸಕಾರವಾಗಿರಬೇಕು.

  ಅದು ಸರಳವಾಗಿದ್ದು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬೇಕು.
- ವೈಯಕ್ತಿಕ ಲಾಭಗಳ ಬಗ್ಗೆ ತಿಳಿಸಬೇಕು. ತಮ್ಮ ನಡವಳಿಕೆಗಳ ಪರಿವರ್ತನೆಗೆ ಜನರಲ್ಲಿ ಬಲವಾದ ಪ್ರೇರಣೆ ಬೇಕು.
- ನಂಬಿಕೆ ಸೃಷ್ಟಿ - ಜನರು ತಮ್ಮ ಇಷ್ಟಕ್ಕೆ ಅನುಗುಣವಾಗಿ ನಡೆಯಲು ತಾವು ನಂಬಿರುವ ನಂಬಿಕೆಯ ಮೂಲಗಳಿಂದ ಸಂದೇಶ ಬಂದಿರಬೇಕು.
- ಕ್ರಿಯೆಗೆ ಕರೆ- ಸಂದೇಶ ಪಡೆದ ನಂತರ ಜನರು ಏನು ಮಾಡಬೇಕು, ಹೇಗೆ ಮಾಡಬೇಕು, ಏನನ್ನು ಖರೀದಿಸಬೇಕು ಎಲ್ಲಿ ಹೇಗೆ ಏನು ಯಾವಾಗ ಎಂಬುದನ್ನು ನಿರ್ದಿಷ್ಟವಾಗಿ ತಿಳಿದಿರಪಬೇಕು.
- ಸಂದೇಶವನ್ನು ವಿಲೀನಗೊಳಿಸಬೇಕು.

ಯಾವುದೇ ಶೈಕ್ಷಣಿಕ ಸಾಮಗ್ರಿಗಳ ಅಭಿವೃದ್ಧಿಯಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಬೇಕು.

- ಶಿಕ್ಷಣದ ರೂಪುರೇಷೆ ಹೇಗೆ ನಿರ್ದಿಷ್ಟವಾಗಿದೆ?

- ★ ಯಾವ ಭಾಷೆಯಲ್ಲಿ ಅದು ಇದೆ?
- ★ ಯಾವ ಪದ ಮತ್ತು ಪ್ರತಿಬಿಂಬಗಳನ್ನು ಬಳಸಲಾಗಿದೆ.
- ★ ಇದು ಸಾಂಸ್ಕೃತಿಕ ಚೌಕಟ್ಟು ಮತ್ತು ವಿತರಣೆಯ ಹಿನ್ನೆಲೆಗೆ ಪೂರಕವಾಗಿದೆಯೇ
- ★ ಕಾರ್ಯಕ್ರಮ ಪಟ್ಟಿಯನ್ನು ನಿಯಂತ್ರಿಸುವವರು ಯಾರು?
- ★ ಮಾಹಿತಿಯನ್ನು ರೂಪಿಸುವವರು ಯಾರು?
- ★ ಮಾಹಿತಿಯನ್ನು ಸ್ವೀಕರಿಸುವವರು ಯಾರು?
- ★ ಮಾಹಿತಿ ಹೇಗೆ ರವಾನೆಯಾಗುತ್ತದೆ?
- ★ ಸಾಂಸ್ಕೃತಿಕ ಸಂವೇದನೆ ಮತ್ತು ಸಾಂಸ್ಕೃತಿಕ ಸೂಕ್ತತೆ ನಡುವಣ ವ್ಯತ್ಯಾಸವನ್ನು ನಾವು ಗುರುತಿಸಬಹುದೆ?
- ★ ಇಂಥ ಮಾಹಿತಿಗಳ ಉತ್ಪಾದನೆಗಾಗಿ ಭಾವನಾತ್ಮಕ ಅಗತ್ಯಗಳನ್ನು ಸೇವೆಗಳು ಪೂರೈಸುವುದೇ?
- ★ ಇಂಥ ಸೇವೆಗಳನ್ನು ಯಾರು ನಿರ್ವಹಿಸುತ್ತಾರೆ
- ★ ಅವರು ಏನನ್ನು ಪೂರೈಸುತ್ತಾರೆ?
- ★ ಅವರು ಹೇಗೆ ಸೇವೆಗಳನ್ನು ಒದಗಿಸುತ್ತಾರೆ?
- ★ ಅವರು ಹೇಗೆ ಸೂಕ್ತರಾಗಿರುತ್ತಾರೆ?
- ★ ಅವರು ಯಾವ ಕೌಶಲ್ಯ ಹೊಂದಿರುತ್ತಾರೆ?
- ★ ಯಾವ ಸಂದೇಶಗಳನ್ನು ರವಾನಿಸಬೇಕು?
- ★ ಇದನ್ನು ಸುರಕ್ಷಿತವಾಗಿ ಮಾಡಿ
- ★ ಉದ್ದೇಶಗಳು ಏನು?
- ★ ಮಾಹಿತಿ ನೀಡುವಿಕೆ?
- ★ ನಡವಳಿಕೆ ಬದಲಾವಣೆ?
- ★ ಎಚ್‌ಐವಿ ಸೋಂಕು ಪ್ರಮಾಣ ಇಳಿಕೆ?
- ★ ಎಚ್‌ಐವಿ ಹಬ್ಬುವಿಕೆ ತಡೆ?
- ★ ಮಹಿಳೆ/ ಪುರುಷರ ಸಂತಾನೋತ್ಪತ್ತಿ ಆರೋಗ್ಯ ವರ್ಧನೆ

ಮಧ್ಯಾಹ್ನ3.20: ಕಾಂಡೋಮ್‌ಗಳ ಪ್ರವರ್ತನೆ

**ಅಭ್ಯಾಸ 19:** ಕಾಂಡೋಮ್‌ಗಳ ಪ್ರವರ್ತನೆ

ನಗರದಲ್ಲಿನ ಎಂಎಸ್‌ಎಂ ಜಾಲದಲ್ಲಿ ಸಂದೇಶಗಳು ಮತ್ತು ಕಾಂಡೋಮ್ ಬಳಕೆಯ ವಿಧಾನಗಳ ಬಗ್ಗೆ ಚರ್ಚೆ ನಡೆಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು.

ಸಮಯ: 20 ನಿಮಿಷಗಳು

ಇದಾದ ಬಳಿಕ ಪ್ರತಿ ಸಮೂಹ ತಮ್ಮ ಮಂಡನೆಗಳನ್ನು ಮಂಡಿಸಬೇಕು. ಎಲ್ಲ ಪ್ರಮುಖ ಅಂಶಗಳನ್ನು ಪರಾಮರ್ಶಿಸಬೇಕು. ವಿಧಾನ ಮತ್ತು ಸಂದೇಶಗಳನ್ನು ವಿಶ್ಲೇಷಿಸಬೇಕು. ಪ್ರತಿನಿಧಿಗಳಿಂದ ಮಾಹಿತಿ ಪಡೆಯಬೇಕು.

ಕಾಂಡೋಮ್‌ಗಳನ್ನು ಪಡೆಯುವ ಮತ್ತು ವಿತರಿಸುವ ವಿಷಯಗಳ ಬಗ್ಗೆ ಚರ್ಚಿಸಬೇಕು. ಕಾಂಡೋಮ್‌ಗಳನ್ನು ಯಾರು ವಿತರಿಸುತ್ತಾರೆ. ಹೇಗೆ, ಯಾವ ದರದಲ್ಲಿ?

ಸಾರ್ವಜನಿಕ ಲೈಂಗಿಕ ಪರಿಸರ, ಲೈಂಗಿಕ ಕ್ರಿಯೆಯಲ್ಲಿ ತೊಡಗುವ ವ್ಯಕ್ತಿಗಳ ಚಲನವಲನ, ಯಾರೊಂದಿಗೆ ಯಾರು ತೊಡಗುತ್ತಾರೆ. ಸಮಯ, ಲೂಬ್ರಿಕೇಷನ್- ಈ ವಿಷಯಗಳ ಬಗ್ಗೆ ಅನ್ವೇಷಣೆ ನಡೆಸಬೇಕು.

ಸಮಯ: 30ನಿಮಿಷಗಳು

## ಉದ್ದೇಶ

ಎಂಎಸ್‌ಎಂ ಪರಿಸರದಲ್ಲಿ ಕಾಂಡೋಮ್ ಬಳಕೆ ಪ್ರವರ್ತನೆ ವಿಷಯಗಳ ಬಗ್ಗೆ ಪ್ರತಿನಿಧಿಗಳು ಅರ್ಥಮಾಡಿಕೊಳ್ಳುವಂತೆ ಮಾಡುವುದು.

## ಮಧ್ಯಸ್ಥಿಕೆಗಾರರ ಟಿಪ್ಪಣಿ

ಕಾಂಡೋಮ್ ವಿತರಣೆ ಹಿನ್ನೆಲೆಯಲ್ಲಿ ಭಾರತೀಯ ಹಿನ್ನೆಲೆಯೊಳಗೆ ಲೈಂಗಿಕ ಅಸ್ತಿತ್ವ ಮತ್ತು ಗುರುತಿಸಿಕೊಳ್ಳುವಿಕೆ ವಿಷಯಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಪ್ರಾಥಮಿಕ ರೂಪುರೇಷೆ ಕೋವೆ/ಪಂಥಿ ಆಯಾಮದಂತೆ ಕಾಣಲ್ಪಡುತ್ತದೆ.

ಇದನ್ನು ಸೃಷ್ಟವಾಗಿ ಅರ್ಥಮಾಡಿಕೊಳ್ಳಲು, ಸರಣಿ ಆರಂಭದಲ್ಲಿ ನೀಡಲಾಗುವ ದಾಖಲೆಯನ್ನು ಓದಬೇಕು.

ಇದು ಕಾಂಡೋಮ್ ಬಳಸುವ ಪಂಥಿ ಹಾಗೂ ಅದನ್ನು ಬಳಸುವಂತೆ ಮನವೊಲಿಸುವ ಕೋವೆ ಇದನ್ನು ಅರ್ಥಮಾಡಿಕೊಳ್ಳುವಂತೆ ಮಾಡಬೇಕು. ಸಂದೇಶ ಮತ್ತು ವಿಧಾನಗಳಲ್ಲಿ ಇದನ್ನು ಗುರಿತಿಸಬೇಕು.

ರೋಗ ನಿಯಂತ್ರಣಕ್ಕೆ ಕಾಂಡೋಮ್ ವಿತರಣೆಯಿಂದ ಕೋವೆ ಕಳಂಕ ಇನ್ನಷ್ಟು  ಹೆಚ್ಚಾಗುವುದೇ ಎಂಬುದು ಚರ್ಚೆಯ ಒಂದು ಭಾಗವಾಗಬೇಕು

ಕಾಂಡೋಮ್ ಪ್ರವರ್ತನೆಯ ಒಂದು ಭಾಗವೂ ಸ್ವಚ್ಛತೆ ವಿಷಯಗಳಿಗೆ ಸಂಬಂಧಿಸಿದ್ದಾಗಿದ್ದು, ಶಿಶ್ನ ಮತ್ತು ಗುದದ್ವಾರ ಈ ಎರಡನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಇದರಿಂದ ಕಳಂಕ ತಗುಲುವುದು ಕಡಿಮೆಯಾಗುತ್ತದೆ. ಕ್ಷೇತ್ರದಲ್ಲಿರುವ ಕೋವೆ ಒಂದೇ ರಾತ್ರಿ ಬಹು ಸಂಗಾತಿಗಳತ್ತ ಒಲವು ವ್ಯಕ್ತಪಡಿಸಿದರೆ ಇದು ಪೂರಕ ಪರಿಣಾವಾಗಿ ಬಳಸಲ್ಪಡುತ್ತದೆ.

ಮತ್ತೊಂದು ವಿಷಯವೆಂದರೆ ವಿತರಣೆ ವಿಧಾನ. ಕಾಂಡೋಮ್‌ಗಳನ್ನು ಯಾರು ವಿತರಿಸುತ್ತಾರೆ? ಕಾಂಡೋಮ್‌ಗಳನ್ನು ಎಲ್ಲಿಂದ ಪಡೆಯಬೇಕು? ಅವುಗಳ ಉಪಯೋಗ ಎಷ್ಟು ಬಾರಿ? ಕಾಂಡೋಮ್‌ಗಳನ್ನು ಉಚಿತವಾಗಿ ವಿತರಿಸಬೇಕೆ? ಅಥವಾ ದರ ನಿಗದಿಗೊಳಿಸಬೇಕೆ? ಸಾಮಾಜಿಕ ಮಾರುಕಟ್ಟೆ ವಿಧಾನಗಳನ್ನು ಬಳಸಬೇಕೆ?

ಇನ್ನು ಲೂಬ್ರಿಕೇಷನ್ ವಿಧಾನ, ವಿಶೇಷವಾಗಿ ಗುದಸಂಭೋಗ ವಿಧಾನ ಹಾಗೂ ತೀವ್ರ ಗುದ ಸಂಭೋಗ ಮತ್ತು ಕಡಿಮೆ ಲೂಬ್ರಿಕೇಷನ್ ಬಳಕೆಯಿಂದಾಗಿ ಗುದ ಜಖಂ ಅಥವಾ ಅತಿಯಾದ ರಕ್ತಸ್ರಾವ ಮಟ್ಟಗಳ ಹಿನ್ನೆಲೆಯಲ್ಲಿ ಈ ವಿಷಯಗಳ ಬಗ್ಗೆ ಗಂಭೀರ ಗಮನ ಹರಿಸಬೇಕು.

ಪರಿಣಾಮಕಾರಿ ಕಾಂಡೋಮ್ ಪ್ರವರ್ತನ ಕಾರ್ಯಕ್ರಮಕ್ಕೆ ಎಷ್ಟು ಕಾಂಡೋಮ್‌ಗಳು ಬೇಕೆಂಬ ಬಗ್ಗೆ ಲೆಕ್ಕ ಹಾಕುವಂತೆ ಪ್ರತಿನಿಧಿಗಳಿಗೆ ತಿಳಿಸುವುದು ಉಪಯುಕ್ತಕರ. ಮಾಹಿತಿ ಮತ್ತು ಅಧ್ಯಯನ ವರದಿಯಿಂದ ಅಂದಾಜು ನೀಡಲು ಸಾಧ್ಯವಾಗುತ್ತದೆ.

ಕೋವೆಗಳಲ್ಲಿ ಒಂದು ರಾತ್ರಿ ಗುದ ಸಂಭೋಗ ನಡೆಸುವವರ ಸರಾಸರಿ ಸಂಖ್ಯೆ=  ಪ್ರತಿದಿನ ಬೇಕಾದ ಕಾಂಡೋಮ್‌ಗಳ ಸಂಖ್ಯೆ

ಇದು ದರದ ಬಗ್ಗೆ ಚರ್ಚೆಗೆ ಮತ್ತು ಉಚಿತ ವಿತರಣೆ ಮತ್ತು / ಅತವಾ ಸಾಮಾಜಿಕ ಮಾರುಕಟ್ಟೆ ವಿಷಯಗಳ ಚರ್ಚೆಗೆ ಅನುವುಮಾಡಿಕೊಡಬೇಕು.

ಸಂಜೆ 4.10 ವಿರಾಮ

ಸಂಜೆ 4.25 ಎಸ್‌ಟಿಐ ಚಿಕಿತ್ಸೆ ಮತ್ತು ಆರೈಕೆ

**ಅಭ್ಯಾಸ 20:**ಎಸ್‌ಟಿಐ ಚಿಕಿತ್ಸೆ ಮತ್ತು ಆರೈಕೆಯನ್ನು ಹೇಗೆ ನೀಡಬೇಕು?

ಎಂಎಸ್ಎಂ ಕೋವೆಗಳು ಮತ್ತು ಗುದ ಲೈಂಗಿಕತೆ ಹಿನ್ನೆಲೆಯಲ್ಲಿ ಎಸ್‌ಟಿಐ ಚಿಕಿತ್ಸೆ ಮತ್ತು ಆರೈಕೆಯನ್ನು ಯಾರು ನೀಡಬೇಕೆಂದು ಪ್ರತಿನಿಧಿಗಳಿಗೆ ಕೇಳಬೇಕು. ಇದು ಸರ್ಕಾರಿ ಕ್ಲಿನಿಕ್ ಆಗಿರಬೇಕೆ? ಇಲ್ಲಿ ಸೇವೆಗಳು ಉಚಿತ.

ಇದು ಖಾಸಗಿ ಕ್ಲಿನಿಕ್ ಆಗಿರಬೇಕೆ? ದರ ಮತ್ತು ಪಡೆಯುವ ವಿಧಾನ ಹೆಗೆ?

ಇದು ಯೋಜನಾ ಕ್ಲಿನಿಕ್ ಆಗಿರಬೇಕೆ? ಔಷಧಿದರ ಮತ್ತು ಪಡೆಯುವಿಕೆ ಹೇಗೆ?

ಇಂಥ ಕಾರ್ಯಕ್ರಮವನ್ನು ವ್ಯಾಖ್ಯಾನಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು. ಇದರ ಅರ್ಥ. ಸೇವೆ ಒದಗಿಸುವವರು, ಪಡೆಯುವ ವಿಧಾನ, ನಿರ್ದಿಷ್ಟತೆ, ದರ, ಕಳಂಕತೆ ಮತ್ತು ನಾಚಿಕೆ ವಿಷಯಗಳನ್ನು ಅನ್ವೇಷಿಸುವುದು.

ಸಮಯ: 20ನಿಮಿಷಗಳು

ಸಮೂಹಗಳನ್ನು ಒಟ್ಟಿಗೆ ಸೇರಿಸಿ ತಮ್ಮ ಚರ್ಚೆಗಳನ್ನು ಮಂಡಿಸುವಂತೆ ಪ್ರತಿಗುಂಪಿಗೂ ತಿಳಿಸಬೇಕು. ಅಂಶಗಳನ್ನು ಪರಾಮರ್ಶಿಸಬೇಕು ಮತ್ತು ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು.

ಸಮಯ: 25 ನಿಮಿಷಗಳು

## ಉದ್ದೇಶ

ಎಂಎಸ್ಎಂಗೆ ಸೂಕ್ತ ಮತ್ತು ಪಡೆಯಬಹುದಾದ ಎಸ್‌ಐಟಿ ಚಿಕಿತ್ಸೆ ಮತ್ತು ಆರೈಕೆ ಸೇವೆ ಬಗೆಗಿನ ರೂಪುರೇಷೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವಂತೆ ಪ್ರತಿನಿಧಿಗಳಿಗೆ ಅನುವು ಮಾಡಿಕೊಡುವುದು.

**ಸಂಜಿ 5.10 ಕನಿಷ್ಠ ಗುಣಮಟ್ಟಗಳು**

'ಕನಿಷ್ಠ ಗುಣಮಟ್ಟಗಳು' ಇದನ್ನು ವ್ಯಾಖ್ಯಾನಿಸಿ

**ಅಭ್ಯಾಸ21: ಯೋಜನಾ ಸೇವೆಗಳಿಗಾಗಿ ಕನಿಷ್ಠ ಗುಣಮಟ್ಟಗಳ ಅಭಿವೃದ್ಧಿ**

ಬಿಸಿಸಿಗಾಗಿ ಕನಿಷ್ಠ ಗುಣಮಟ್ಟಗಳನ್ನು ನೀಡಲು ಮಾರ್ಗಸೂಚಿಗಳನ್ನು ಅಭಿವೃದ್ಧಿಗೊಳಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು.

- ★ ಎಸ್‌ಟಿಐ ಚಿಕಿತ್ಸೆ ಮತ್ತು ಆರೈಕೆ
- ★ ಕಾಂಡೋಮ್ ಕಾರ್ಯಕ್ರಮ
- ★ ಪೂರಕ ವಾತಾರವಣ

ಈ ಚರ್ಚೆಗಳು ಪ್ರಮುಖ ವಿಷಯಗಳ ಬಗ್ಗೆ ನಡೆಯಬೇಕು

- ★ ಪಡೆಯುವಿಕೆ
- ★ ನಿರ್ದಿಷ್ಟತೆ
- ★ ದೊರೆಯುವಿಕೆ
- ★ ದರಗಳು
- ★ ಪ್ರಮಾಣ
- ★ ಗುಣಮಟ್ಟ

ಸೇವೆಗಳ ಬಳಕೆದಾರರಿಗೆ ಸೇವೆ ಒದಗಿಸುವುದರ ಮೇಲೆ ಗುಣಮಟ್ಟದ ಖಾತ್ರಿಯನ್ನು ಇದು ಒಳಗೊಂಡಿರುತ್ತದೆ.

ಸಮಯ: 30 ನಿಮಿಷಗಳು

ಇದಾದ ಬಳಿಕ ಸಮೂಹಗಳನ್ನು ಒಟ್ಟಿಗೆ ಸೇರಿಸಿ, ತಮ್ಮ ಗುಣಮಟ್ಟಗಳನ್ನು ಮಂಡಿಸುವಂತೆ ಪ್ರತಿ

ಗುಂಪಿಗೂ ತಿಳಿಸಿಬೇಕು. ಪ್ರಮುಖ ಅಂಶಗಳ ಬಗ್ಗೆ ಪರಾಮರ್ಶಿಸಿ, ಮಾಹಿತಿ ನೀಡುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು.

ಸಮಯ: 30ನಿಮಿಷಗಳು

## ಉದ್ದೇಶ

ಕನಿಷ್ಠ ಗುಣಮಟ್ಟ ಮತ್ತು ಖಾತ್ರಿ ಪರಿಕಲ್ಪನೆಯನ್ನು ಪ್ರತಿನಿಧಿಗಳಿಗೆ ಅರ್ಥೈಸುವುದು ನಿಧಿಗಳನ್ನು ಸ್ವೀಕರಿಸುವವರಾಗಿ ದಾನಿಗಳ ಅಗತ್ಯಗಳನ್ನು ತೃಪ್ತಿಪಡಿಸಲು ಹಕ್ಕು ಭಾದ್ಯರಾಗಿರುತ್ತಾರೆ. ಅಲ್ಲದೆ ಸೇವೆ ಒದಗಿಸುವವರು ತೃಪ್ತರಾಗುವಂತೆ ಮತ್ತು ಸೇವೆಗಳು ಸೂಕ್ತವಾಗಿ ಅಗತ್ಯವಾಗಿ ಮತ್ತು ಸಮರ್ಪಕವಾಗಿ ತಲುಪುವಂತೆ ನೋಡಿಕೊಳ್ಳುವ ನೈತಿಕ ಹೊಣೆಯೂ ಇರುತ್ತದೆ.

**ಸಂಜೆ 6.30 ಮುಕ್ತಾಯ**

ಎಲ್ಲ ಪ್ರತಿನಿಧಿಗಳು ಎದ್ದು ನಿಂತು ಕೆಲವು ವ್ಯಾಯಮ ಮಾಡುವಂತೆ ತಿಳಿಸಬೇಕು. ದಿನದ ಸಮಸ್ಯೆಗಳು ಮತ್ತು ತಾವು ಎದುರಿಸಿದ ಸವಾಲುಗಳ ಬಗ್ಗೆ ಮುಕ್ತಾಯದ ಹೇಳಿಕೆಗಳನ್ನು ನೀಡಬೇಕು. ಪ್ರತಿನಿಧಿಗಳ ಬಗ್ಗೆ ಮತ್ತು ಅವರು ಹಂಚಿಕೊಂಡ ವಿಚಾರಗಳ ಬಗ್ಗೆ ಹಾಸ್ಯಮಯವಾಗಿ ಪೂರಕ ಹೇಳಿಕೆಗಳನ್ನು ನೀಡಬೇಕು. ಮುಂದಿನ ದಿನದ ಸಮಯ ಪಾಲನೆ ಬಗ್ಗೆ ಎಲ್ಲ ಪ್ರತಿನಿಧಿಗಳಿಗೂ ಜ್ಞಾಪಿಸಬೇಕು.

ಪ್ರತಿನಿಧಿಗಳಿಗೆ ಪ್ರವಾಸ ಚೀಲಗಳು ಮತ್ತು ಯಾವುದೇ ಭತ್ಯೆಗಳಿದ್ದರೆ ನೀಡಬೇಕು. ನೋಂದಣಿ ಅರ್ಜಿಯಲ್ಲಿ ಅವರ ಹೆಸರನ್ನು ಗುರುತು ಮಾಡಿಕೊಳ್ಳಬೇಕು.

ಎರಡನೇ ಹಂತ: ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ ನಾಲ್ಕನೇ ದಿನ: ಯೋಜನಾ ನಿರ್ವಹಣೆ(ಭಾಗ ಒಂದು)

**ಬೆಳಿಗ್ಗೆ 9.00 ಸ್ವಾಗತ ಮತ್ತು ಮನನ**

ಪ್ರತಿನಿಧಿಗಳು ಕಾರ್ಯಾಗಾರದ ಸ್ಥಳವನ್ನು ಪ್ರವೇಶಿಸುತ್ತಿದ್ದಂತೆ ಅವರ ಬಳಿ ಹೆಸರು ಪಟ್ಟಿ ಬರವಣಿಗೆ ಪ್ಯಾಡ್ ಮತ್ತು ಪೆನ್ ಇರುವುದನ್ನು ಗಮನಿಸಬೇಕು. ದೈನಂದಿನ ನೋಂದಣಿ ಅರ್ಜಿಯನ್ನು ಸಹ ಭರ್ತಿ ಮಾಡಬೇಕು.

ಹಿಂದಿನ ರಾತ್ರಿ ಮಾಡಿದ ಉತ್ತಮ ಕೆಲಸದ ಬಗ್ಗೆ ತಿಳಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು ಇದನ್ನು ಹಾಸ್ಯಮಯವಾಗಿ ನಡೆಸಬೇಕು. ಇದಕ್ಕೆ ಮಧ್ಯಸ್ಥಿಕೆಯದಾರರು ಪ್ರತಿಕ್ರಿಯೆ ನೀಡಬೇಕು.

ಸಮಯ: 15 ನಿಮಿಷಗಳು

**ಬೆಳಿಗ್ಗೆ 9.15 ಮೂರನೇ ದಿನದ ಮಾಹಿತಿ**

## ಸಮೂಹ ಚರ್ಚೆ

ಹಿಂದಿನ ದಿನದ ಭಾವನೆ, ಏನನ್ನು ಅವರು ಕಲಿತರು, ಮತ್ತು ಅವರ ಬಳಿ ಏನಾದರೂ ಪ್ರಶ್ನೆಗಳಿವೆಯೇ ಎಂಬ ಬಗ್ಗೆ ಪ್ರತಿನಿಧಿಗಳಿಗೆ ಕೇಳಬೇಕು.

ಸಮಯ: 30ನಿಮಿಷಗಳು

**ಬೆಳಿಗ್ಗೆ 9.45 ಸಾಂಸ್ಥಿಕ ವಿನ್ಯಾಸ ಅಭಿವೃದ್ಧಿ**

## ಮಧ್ಯಸ್ಥಿಕೆದಾರರ ಮಂಡನೆ

ಎಂಎಸ್‌ಎಂ ಸಮುದಾಯ ಆಧಾರಿತ ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನಕ್ಕೆ ಅನುಕೂಲವಾಗುವ ಸಂಸ್ಥೆ, ಅಭಿವೃದ್ಧಿ ರೂಪುರೇಷೆಗಳ ಬಗ್ಗೆ ಚರ್ಚಿಸಬೇಕು. ಇದರಲ್ಲಿ ಕಾನೂನು, ದಾನಿ ಮತ್ತು ಸೇವೆ, ಪೂರೈಕೆ, ಕಾರ್ಯಕ್ರಮಗಳು ಮತ್ತು ಆಡಳಿತ ಅಗತ್ಯಗಳು ಒಳಗಂಡಿರುತ್ತವೆ.

ಶಾಸಕ ರಚನೆಯಂಥ ಕಾನೂನು ಅಗತ್ಯಗಳು ಸಂಸ್ಥೆಯ ನೋಂದಣಿ ಮತ್ತು ಇದು ಸೊಸೈಟಿಯಾಗಿರಬೇಕೆ ಅಥವಾ ಟ್ರಸ್ಟ್ ಆಗಿರಬೇಕೆ ಹಾಗೂ ಇದಕ್ಕೆ ಯಾವ ಕಾನೂನು ಹೊಣೆಗಾರಿಕೆಗಳಿವೆ ಎಂಬ ಬಗ್ಗೆ ಸಂಕ್ಷಿಪ್ತ ಚರ್ಚೆ ನಡೆಸುವ ಅಗತ್ಯವಿದೆ.

ಸಮಯ: 25ನಿಮಿಷಗಳು

ಅಭ್ಯಾಸ22: ಎಂಎಸ್ಎಂ ಲೈಂಗಿಕ ಆರೋಗ್ಯ ಸಂಸ್ಥೆಗೆ ಯಾವ ವಿನ್ಯಾಸದ ರಚನೆ ಇರಬೇಕು?

ಮಧ್ಯಸ್ಥಿಕೆದಾರರ ಮಂಡನೆ ನಂತರ, ಇಂಥ ಸಂಸ್ಥೆಯ ರಚನೆಯನ್ನು ವ್ಯಾಖ್ಯಾನಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೆಕು ಹಾಗೂ ಸಂಸ್ಥೆಯ ನಕ್ಷೆಯನ್ನು ರಚಿಸಬೇಕು.

ಯೋಜನಾ ಮಾದರಿ ಬಗ್ಗೆ ಪ್ರತಿನಿಧಿಗಳಿಗೆ ತಿಳಿಸಬೇಕು.

- ★ ಕ್ಷೇತ್ರ ಸೇವೆಗಳು
- ★ ಕೇಂದ್ರ ಸೇವೆಗಳು
- ★ ಆರೋಗ್ಯ ಸೇವೆಗಳು

**ಕೇಳಬೇಕಾದ ಪ್ರಶ್ನೆಗಳು:**

- ★ ಯಾರು ಯಾವುದನ್ನು ನಿರ್ವಹಿಸಬೇಕು
- ★ ಸೇವೆಗಳನ್ನು ಯಾರು ಒದಗಿಸುತ್ತಾರೆ
- ★ ಯಾವ ಸೇವೆಗಳನ್ನು ಒದಗಿಸಬೇಕು
- ★ ಸಮಗ್ರ ಹೊಣೆಯನ್ನು ಯಾರು ಹೊರುತ್ತಾರೆ.

ಸಮಯ : 25ನಿಮಿಷಗಳು

ಸಮೂಹಗಳನ್ನು ಒಟ್ಟಾಗಿ ಸೇರಿಸಬೇಕು ಪ್ರತಿ ಗುಂಪು ಸಂಸ್ಥೆಯ ಚಿತ್ರಣವನ್ನು ಮಂಡಿಸುವಂತೆ ತಿಳಿಸಿ ಅದರ ಹಿಂದಿನ ಕಾರಣವನ್ನು ನಮೂದಿಸಬೇಕು. ಟೀಕೆ ಟಿಪ್ಪಣಿಗಳನ್ನು ಮಾಡಿ ಪ್ರತಿನಿಧಿಗಳಿಂದ ಮಾಹಿತಿ ಪಡೆಯಬೇಕು. ಸಂಸ್ಥೆ ಸಾಮಾನ್ಯ ಚಿತ್ರಣವನ್ನು ಅಭಿವೃದ್ಧಿಗೊಳಿಸಬೇಕು.

ಸಮಯ :25ನಿಮಿಷಗಳು

## ಉದ್ದೇಶ

ಸಾಂಸ್ಥಿಕ ರೂಪುರೇಷಗಳನ್ನು ಪ್ರತಿನಿಧಿಗಳು ಅರ್ಥಮಾಡಿಕೊಳ್ಳುವಂತೆ ಮಾಡುವನು ಮತ್ತು ಯೋಜನೆ ಚರ್ಚೆಗಾಗಿ ಸಂಸ್ಥೆಯ ಚಿತ್ರಣವನ್ನು ಅಭಿವೃದ್ಧಿಗೊಳಿಸುವುದು.

ಬೆಳಿಗ್ಗೆ 11.00 ವಿರಾಮ

ಬೆಳಿಗ್ಗೆ 11.15 ಸಿಬ್ಬಂದಿ ಅಗತ್ಯಗಳು

**ಅಭ್ಯಾಸ 23:** ಎಂಎಸ್ಎಂ ಲೈಂಗಿಕ ಆರೋಗ್ಯ ಯೋಜನೆಗಾಗಿ ಸಿಬ್ಬಂದಿ ಮಟ್ಟಗಳನ್ನು ಗುರುತಿಸುವಿಕೆ

ಪೀಠಿಕೆ ವಿಭಾಗದ ಟಿಪ್ಪಣಿಗಳನ್ನು ಬಳಸಿ ಕೋವೆ ರೂಪುರೇಷೆಯನ್ನು ಸಿದ್ಧಗೊಳಿಸಬೇಕು. ಮತ್ತು ಅದರಲ್ಲಿ ವಿವರಿಸಲಾದ ಮಧ್ಯಸ್ಥಿಕೆ ಮಾದರಿಯ ಮೇಲೆ ಬೆಳಕು ಚೆಲ್ಲಬೇಕು. ಯೋಜನಾ ಮಾದರಿಯನ್ನು ಚರ್ಚೆಗಳ ಚೌಕಟ್ಟಾಗಿ ತೆಗೆದುಕೊಂಡು, ಪ್ರತಿನಿಧಿಗಳು ಈಗಾಗಲೇ ಗುರುತಿಸಿದ ನಿರ್ದಿಷ್ಟ ಸೇವೆಗಳು ಮತ್ತು ಚಟುವಟಿಕೆಗಳನ್ನು ಅನ್ವೇಷಿಸಬೇಕು ಹಾಗೆಯೇ ಸಾಂಸ್ಥಿಕ ವಿನ್ಯಾಸಗಳನ್ನು ಅರಿಯಬೇಕು.

- ★ ಕ್ಷೇತ್ರ
- ★ ಕೇಂದ್ರ
- ★ ಕ್ಲಿನಿಕ್

ಕ್ಷೇತ್ರ ಕಾರ್ಯ ಹಾಗೂ ಕ್ಷೇತ್ರ ತಂಡಗಳ ಮಾದರಿ ಬಗ್ಗೆ ಚರ್ಚೆ

## ಕ್ಷೇತ್ರ ತಂಡವನ್ನು ವ್ಯಾಖ್ಯಾನಿಸಿ

★ ಕ್ಷೇತ್ರ ಅಧಿಕಾರಿ- ಮತ್ತು ಆತನ ಪಾತ್ರ

★ ಕ್ಷೇತ್ರ ಮಿತ್ರ - ಮತ್ತು ಆತನ ಪಾತ್ರ

ನಿರ್ದಿಷ್ಟ ಕ್ಷೇತ್ರ ಗಾತ್ರದ ಆಧಾರದ ಮೇಲೆ ಕ್ಷೇತ್ರ ಮಿತ್ರರ ಸಂಖ್ಯೆ. ಇದು ತಲಾ ಒಂದು ಕ್ಷೇತ್ರದಲ್ಲಿ ಒಂದರಿಂದ ನಾಲ್ಕರವರೆಗೂ ಅಂತರವಿರಬಹುದು.

'ಸಮಾನ ಮನಸಿನ ಶಿಕ್ಷಕರು'ಮತ್ತು 'ಕ್ಷೇತ್ರ ಮಿತ್ರ'ಇವರ ನಡುವಣ ವ್ಯತ್ಯಾಸವನ್ನು ವಿವರಿಸಿ ಎಷ್ಟು ಮಂದಿ ಸಿಬ್ಬಂದಿ ಇರಬೇಕೆಂದು ಪ್ರತಿನಿಧಿಗಳು ಗುರುತಿಸುತ್ತಾರೆ. ಅವರು ಏನು ಮಾಡಬಯಸುತ್ತಾರೆ, ಈ ವಿಭಿನ್ನ ಕೆಲಸಗಳನ್ನು ಯಾರು ನಿರ್ವಹಿಸುತ್ತಾರೆ. ಈ ಸಿಬ್ಬಂದಿ ಸ್ಥಾನಕ್ಕೆ ಯುವ ಕೌಶಲ್ಯಗಳ ಅಗತ್ಯವಿದೆಯೇ ಎಂಬ ಬಗ್ಗೆ ಪ್ರತಿನಿಧಿಗಳನ್ನು ಕೇಳಬೇಕು.

ಸಮಯ:30 ನಿಮಿಷಗಳು

ಸಮೂಹಗಳನ್ನು ಒಟ್ಟಿಗೆ ಸೇರಿಸಿ, ಸಿಬ್ಬಂದಿ ಅಗತ್ಯಗಳ ಬಗ್ಗೆ ತಿಳಿಸುವಂತೆ ಪ್ರತಿ ಗುಂಪಿಗೆ ಹೇಳಬೇಕು. ಪ್ರತಿನಿಧಿಗಳ ಮಾಹಿತಿಯನ್ನು ಪರಾಮರ್ಶಿಸಿ, ಟೀಕಿಸಬೇಕು. ಸಿಬ್ಬಂದಿ ಮಟ್ಟಗಳು ಮತ್ತು ಅಗತ್ಯಗಳ ಬಗ್ಗೆ ಒಮ್ಮತವನ್ನು ಅಭಿವೃದ್ಧಿಗೊಳಿಸಬೇಕು.

ವಿವಿಧ ಸ್ಥಾನಗಳಿಗಾಗಿ ಹುದ್ದೆ ವಿವರಣೆ ಬಗ್ಗೆ ಚರ್ಚಿಸಬೇಕು. ಈ ಪ್ರಕ್ರಿಯೆಗಾಗಿ ಪುಸ್ತಕ5 ರಲ್ಲಿರುವಂತೆ ಹುದ್ದೆ ವಿವರಣೆಯನ್ನು ಬಳಸಬೇಕು.

ಸಮಯ: 30 ನಿಮಿಷಗಳು

## ಉದ್ದೇಶ

ಸಿಬ್ಬಂದಿ ಅಗತ್ಯಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಪ್ರತಿನಿಧಿಗಳಿಗೆ ಅನುವು ಮಾಡಿಕೊಡುವುದು.

## ಮಧ್ಯಾಹ್ನ 12.15: ಆಡಳಿತ ಮಂಡಳಿ ನೀತಿಗಳು ಮತ್ತು ವಿಧಾನಗಳು ಮಧ್ಯಸ್ಥಿಕೆದಾರರ ಮಂಡನೆ

ಸಂಸ್ಥೆಯ ಅಭಿವೃದ್ಧಿಗಾಗಿ ಕೆಲವು ಮಾರ್ಗಸೂಚಿಗಳಿದ್ದು, ಸಾಂಸ್ಥಿಕ ರೂಪುರೇಷೆಗೆ ಇದು ಮುಖ್ಯವಾಗಿದೆ. ಇದರಿಂದ ಪರಿಣಾಮಕಾರಿ ಮತ್ತು ಸಮರ್ಥ ಆಡಳಿತ ನಿರ್ವಹಣೆ ಸಾಧ್ಯವಾಗಿ, ಉತ್ತಮ ಗುಣಮಟ್ಟದ ಸೇವೆ ಒದಗಿಸಲು ಅನುವಾಗುತ್ತವೆ. ಇದನ್ನು ನೀತಿಗಳು ಮತ್ತು ವಿಧಾನಗಳೆಂದು ಕರೆಯಲಾಗುತ್ತದೆ. ಇದರಲ್ಲಿ ಈ ಕೆಳಕಂಡವುಗಳು ಒಳಗೊಂಡಿರುತ್ತದೆ.

ಆಡಳಿತ ಮಂಡಳಿ ಪರಾಮರ್ಶೆಗಳು(ಸಿಬ್ಬಂದಿ ಮತ್ತು ಸೇವೆ ಎರಡೂ)

ಕ್ರಮಬದ್ಧ ಸಿಬ್ಬಂದಿ ಸಭೆಗಳು

ರಹಸ್ಯ ನೀತಿ

ಕುಂದುಕೊರತೆ ವಿಧಾನಗಳು

ಶಿಸ್ತು ವಿಧಾನಗಳು

ಉದ್ಯೋಗದ ನೀತಿ ಮತ್ತು ನಿಬಂಧನೆಗಳು

ದೂರುಗಳ ವಿಧಾನಗಳು

ಕಚೇರಿ ನಿಯಮಗಳು

ವರದಿ ವಿಧಾನಗಳು

ಆಡಳಿತ ವಿನ್ಯಾಸಗಳು

ಸೂಕ್ತ ನೀತಿಗಳು ಮತ್ತು ವಿದಾನಗಳಿಂದಾಗಿ ಕಿರುಕುಳ, ಶೋಷಣೆ ಮತ್ತು ಶೋಷಣೆಗಳಿಂದ ಆಡಳಿತ ಮಂಡಳಿ ಸಿಬ್ಬಂದಿ ಮತ್ತು ಸೇವಾ ಗ್ರಾಹಕರನ್ನು ರಕ್ಷಿಸಬಹುದು.

ಉತ್ತಮ ಯೋಜನಾ ನಿರ್ವಹಣೆ ಮತ್ತು ಸೇವೆ ಪೂರೈಕೆಗೆ ಇವು ಏಕೆ ಮುಖ್ಯ ಎಂಬ ಬಗ್ಗೆ ಚರ್ಚಿಸಬೇಕು. ಸಮಾನತೆ, ನ್ಯಾಯೋಚಿತ, ಪ್ರಾಕೃತಿಕ ನ್ಯಾ, ಆಡಳಿತ ಮಂಡಳಿಯಿಂದ ಸಿಬ್ಬಂದಿಯನ್ನು ನಡೆಸಿಕೊಳ್ಳುವ ರೀತಿ, ಕೆಲಸ ನಿರ್ವಹಿಸುವ ಉತ್ತಮ ಪರಿಸರ ಮತ್ತು ನಿಯಮಗಳು ಹಾಗೂ ನೈತಿಕ ಗುಣಮಟ್ಟ ಈ ವಿಷಯಗಳ ಬಗ್ಗೆ ಚರ್ಚೆ ನಡೆಯುವಂತೆ ನೋಡಿಕೊಳ್ಳಬೇಕು.

ಸಮಯ: 45 ನಿಮಿಷಗಳು

## ಉದ್ದೇಶ

ಉತ್ತಮ ಗುಣಮಟ್ಟದ ಯೋಜನಾ ನಿರ್ವಹಣೆ ಮತ್ತು ಸೇವೆ ಪೂರೈಕೆಗೆ ನೆರವಾಗಲು ಪರಿಣಾಮಕಾರಿ ಮತ್ತು ಸೂಕ್ತ ನೀತಿಗಳು ಮತ್ತು ವಿಧಾನಗಳ ಅಗತ್ಯವಿದೆ ಎಂಬುದನ್ನು ಪ್ರತಿನಿಧಿಗಳು ಅರ್ಥಮಾಡಿಕೊಳ್ಳುವಂತೆ ಮಾಡಬೇಕು. ಇಂಥ ನೀತಿಗಳು ಮತ್ತು ವಿಧಾನಗಳು ಸಮರ್ಥ ಮತ್ತು ಪರಿಣಾಕಾರಿ ಆಡಳಿತಕ್ಕೆ ನೆರವಾಗುತ್ತವೆ. ಮತ್ತು ಸಿಬ್ಬಂದಿ ಅಭಿವೃದ್ಧಿಗೆ ಪೂರಕವಾದ ರೂಪರೇಷೆಯ ಸಬಲೀಕರಣಕ್ಕೆ ಸಹಾಯವಾಗುತ್ತದೆ ಎಂಬುದನ್ನು ಪ್ರತಿನಿಧಿಗಳಿಗೆ ಮನದಟ್ಟು ಮಾಡಿಕೊಡಬೇಕು.

ಮಧ್ಯಾಹ್ನ 1.00 ಭೋಜನ

ಮಧ್ಯಾಹ್ನ 2.00 ಆಯವ್ಯಯ ಅಭಿವೃದ್ಧಿ

ಅಭ್ಯಾಸ 24: ಯೋಜನಾ ಆಯವ್ಯಯ ಅಭಿವೃದ್ಧಿ

ಗುರುತಿಸಿ ಸಮ್ಮತಿಸಲ್ಪಟ್ಟ ಸಿಬ್ಬಂದಿ ಮಟ್ಟದೊಂದಿಗೆ ಹಿಂದಿನ ಚಟುವಟಿಕೆಗಳು ಮತ್ತು ಸೇವೆಗಳಿಂದ ಮೊದಲ ವರ್ಷಕ್ಕೆ ಆಯವ್ಯಯವನ್ನು ಸಿದ್ದಪಡಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು. ಇದರಲ್ಲಿ ಈ ಕೆಳಗಿನವು ಒಳಗೊಂಡಿದೆ.

- ★ ಸಿಬ್ಬಂದಿ ವೆಚ್ಚಗಳು
- ★ ಕಾರ್ಯನಿರ್ವಹಣಾ ವೆಚ್ಚಗಳು
- ★ ಯೋಜನಾ ವೆಚ್ಚಗಳು
- ★ ಪೀಠೋಪಕರಣಗಳು

ಪ್ರತಿಯೊಂದರ ಬಗ್ಗೆ ವಿವರಿಸಬೇಕು.

ಸಮಯ: 30 ನಿಮಿಷಗಳು

ಇದಾದ ಬಳಿಕ ಸಮೂಹಗಳನ್ನು ಒಗ್ಗೂಡಿಸಿ ತಮ್ಮ ಆಯವ್ಯಯ ಮಂಡಿಸುವಂತೆ ಪ್ರತಿ ಗುಂಪಿಗೂ ತಿಳಿಸಿಬೇಕು. ಸಮೂಹ ಆಯವ್ಯಯಗಳ ಬಗ್ಗೆ ಪರಾಮರ್ಶಿಸಿ ಟೀಕಿಸಬೇಕು. ಹೊಸ ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆಗಾಗಿ, ನಿರ್ದಿಷ್ಟ ದಾನಿಗಳ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಸಿಬ್ಬಂದಿ ಮಟ್ಟಗಳು, ವೇತನಗಳು, ಕಾರ್ಯನಿರ್ವಹಣಾ ವೆಚ್ಚಗಳು, ಯೋಜನಾ ವೆಚ್ಚಗಳು ಮತ್ತು ಮುಂತಾದ ಸ್ವೀಕಾರಾರ್ಹ ಅಂಶಗಳುಳ್ಳ ಮೊದಲ ಕಾರ್ಯನಿರ್ವಹಣಾ ವರ್ಷದ ಆಯವ್ಯಯ ಅಭಿವೃದ್ಧಿಗೊಳಿಸಬೇಕು.

## ಎನ್‌ಎಫ್‌ಐ ದಾಖಲೆಗಳಿಂದ ಉದಾಹರಣೆಗಳನ್ನು ಬಳಸಿ

ನಿಮಗೆ ಬೇಕಾದ ಮತ್ತು ನೀವು ಪಡೆಯಬಹುದಾದ ನಡುವಣ ವ್ಯತ್ಯಾಸವನ್ನು ಟಿಪ್ಪಣಿ ಮಾಡಬೇಕು

ಇದಕ್ಕೆ ಸಂಸ್ಥೆ ಮತ್ತು ದಾನಿ ನಡುವಣ ಸಂಧಾನ ಮುಖ್ಯ.

ಹೊಸ ಲೈಂಗಿಕ ಆರೋಗ್ಯ ಯೋಜನೆಗೆ ದಾನಿಗಳ ಯಾರೆಂಬ ಬಗ್ಗೆ ಚರ್ಚಿಸಬೇಕು.

ಸಮಯ: 60 ನಿಮಿಷಗಳು

## ಉದ್ದೇಶ

ದಾನಿಗಳ ಅಡೆತಡೆಗಳ ಹಿನ್ನಲೆಯಲ್ಲಿ ಹೇಗೆ ಆಯವ್ಯಯಗಳನ್ನು ಅಭಿವೃದ್ಧಿಗೊಳಿಸಬೆಕು ಎಂಬ ಬಗ್ಗೆ ಅರ್ಥ ಮಾಡಿಕೊಳ್ಳಲು ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸುವುದು.

## ಮಧ್ಯಸ್ಥಿಕೆದಾರರ ಟಿಪ್ಪಣಿಗಳು

ಆಯವ್ಯಯ ಹಣಕಾಸು ಯೋಜನೆಯಾಗಿದ್ದು, ಯೋಜನೆ ಅನುಷ್ಠಾನಕ್ಕೆ ಅಗತ್ಯವಾದ ಸಂಪನ್ಮೂಲಗಳ ವಿವರಗಳನ್ನು ನೀಡುತ್ತದೆ.

ಆಯವ್ಯಯವನ್ನು ಈ ಉದ್ದೇಶಗಳಿಗಾಗಿ ಬಳಸುತ್ತಾರೆ.

★ ಯೋಜನಾ ಚಟುವಟಿಕೆಗಳಿಗೆ ಅಗತ್ಯವಾದ ವೆಚ್ಚಗಳ ವಿಧಾನಗಳನ್ನು ಅಂದಾಜು ಮಾಡಲು

★ ಉದ್ದೇಶಗಳ ಸಾಧನೆಗೆ ಅಗತ್ಯವಾದ ನಿರೀಕ್ಷಿತ ಸಂಪನ್ಮೂಲಗಳ ಬಗ್ಗೆ ಹಣಕಾಸು ನೀಡುವವರಿಗೆ ಮಾಹಿತಿ ಒದಗಿಸುತ್ತದೆ.

★ ವೆಚ್ಚ ನಿರ್ಧಾರಗಳಲ್ಲಿ ಯೋಜನಾ ಅನುಷ್ಠಾನಕ್ಕೆ ಮಾರ್ಗದರ್ಶನ ನೀಡುತ್ತದೆ.

ಯೋಜನಾ ವೆಚ್ಚಗಳ ಬಗ್ಗೆ ನಿಗಾ ವಹಿಸಲು ಆಧಾರ ರೇಖೆಯಾಗಿರುತ್ತದೆ.

ಪ್ರತಿ ವೆಚ್ಚ ವಿಭಾಗಕ್ಕೆ ಅಗತ್ಯವಾದ ಒಟ್ಟು ಮೊತ್ತ ನಿರ್ಮಾಣದ ಮೂಲಕ ನಿರ್ದಿಷ್ಟವಾಗಿರಬೇಕು. ವೆಚ್ಚಕ್ಕೆ ಪೂರಕವಾದ ಎಲ್ಲ ಅಂಶಗಳ ಬಗ್ಗೆ ವಿಸ್ತೃತ ಲೆಕ್ಕಚಾರಗಳ ಮೂಲಕ ಇದು ಸಾಧ್ಯವಾಗುತ್ತದೆ.

ಉದಾಹರಣೆಗೆ ಕ್ಷೇತ್ರ ಕಾರ್ಯಕರ್ತರ ಪ್ರವಾಸ ವೆಚ್ಚ ಇದನ್ನು ಒಳಗೊಂಡಿರಬೇಕು

★ ಪ್ರವಾಸದ ಸಂಖ್ಯೆ

★ ಪ್ರತಿ ಪ್ರವಾಸದ ಕಿಲೋಮೀಟರ್‌ಗಳ ಸಂಬಳ

★ ಸಾರಿಗೆ ವೆಚ್ಚಗಳು

★ ವಾಹನದ ಪ್ರತಿ ಲೀಟರ್ ಪೆಟ್ರೋಲ್‌ನಿಂದ ಕ್ರಮಿಸಿದ ಕಿಲೋಮೀಟರ್‌ಗಳ ಸಂಖ್ಯೆ

★ ಪ್ರತಿ ಪ್ರಯಾಣದ ಪ್ರತಿ ಲೀಟರ್ ಪೆಟ್ರೋಲ್ ವೆಚ್ಚಗಳು ಅಥವಾ ಸ್ಥಳೀಯ ಸಾರಿಗೆ ವೆಚ್ಚಗಳು ಯಂತ್ರೋಪಕರಣ ವೆಚ್ಚದಲ್ಲಿ ಕಚೇರಿಯ ಪೀಠೋಪಕರಣಗಳು ಸೇರಿರುತ್ತವೆ. ಉದಾಹರಣೆಗೆ ಮೇಜು, ಕುರ್ಚಿಗಳು ಇತ್ಯಾದಿ.

ಟೈಪ್‌ರೈಟರ್ ಅಥವಾ ಕಂಪ್ಯೂಟರ್ ಹೊಂದಬೇಕು?

ಸಂಚಿತ ವೆಚ್ಚಗಳು ಇವುಗಳನ್ನು ಒಳಗೊಂಡಿರುತ್ತದೆ.

★ ಸ್ಥಳ ಬಾಡಿಗೆ: ಎಲ್ಲ ಸಿಬ್ಬಂದಿ ಮತ್ತು ಕೇಂದ್ರ ಆಧರಿತ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವಷ್ಟು ಸ್ಥಳ ವಿಶಾಲವಾಗಿದೆಯೇ?

★ ವಿದ್ಯುಚ್ಛಕ್ತಿ/ಅನಿಲ

★ ಫೋಟೋಕಾಪಿ/ ಪ್ರಿಂಟ್

★ ದೂರವಾಣಿ ಕರೆಗಳು ಇತ್ಯಾದಿ

ತರಬೇತಿ ಅಗತ್ಯಗಳು ಮತ್ತು ಸಾಮರ್ಥ್ಯ ನಿರ್ಮಾಣದ ಬಗ್ಗೆ?

ಏನು ಬೇಕು, ಏನು ಯಾವ ಉದ್ದೇಶ ಇವುಗಳನ್ನು ಹೊಂದಿಸಬೇಕು.

## ಚರ್ಚೆ

- ★ ಯೋಜನೆ ಏನು ಸೇವೆಗಳನ್ನು ಒದಗಿಸ ಬಯಸುತ್ತದೆ
- ★ ಎಷ್ಟು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು.
- ★ ಈ ಸಿಬ್ಬಂದಿಯ ಕೌಶಲ್ಯಗಳೇನು?

## ನಿರ್ಧಾರ

- ★ ಸಿಬ್ಬಂದಿ ವೇತನಗಳು
- ★ ಪ್ರತಿ ಸೇವೆಗಳಿಗೆ ನೀವು ಏನನ್ನು ಒದಗಿಸುತ್ತೀರಿ ಮತ್ತು ಇದಕ್ಕೆ ಎಷ್ಟು ವೆಚ್ಚವಾಗುತ್ತದೆ
- ★ ನಿಮ್ಮ ಯೋಜನೆ ಅಭಿವೃದ್ಧಿಗೆ ತಾಂತ್ರಿಕ ನೆರವಿನ ಅಗತ್ಯವಿದೆಯೇ?

ದಾನಿಗಳ ಮಾರ್ಗದರ್ಶನಗಳನ್ನು ವಿವರಿಸಿ, ಉದಾಹರಣೆ ಪ್ರದರ್ಶಿಸಬೇಕು

ಮಧ್ಯಾಹ್ನ3.30 ಮುಂದುವರಿಕೆ

## ಸಮೂಹ ಚರ್ಚೆ

ಮುಂದುವರಿಕೆ ಅಂಶವನ್ನು ಈ ಕೆಳಕಂಡ ಅಂಶಗಳನ್ನು ವ್ಯಾಖ್ಯಾನಿಸಿ

- ★ ನಡವಳಿಕೆ ಬದಲಾವಣೆ
- ★ ಯೋಜನಾ ಜೀವಾವಧಿ
- ★ ಹಣಕಾಸು

## ಪ್ರತಿನಿಧಿಗಳಿಗೆ ಕೇಳಬೇಕಾದ ಪ್ರಶ್ನೆಗಳು ಕೆಳಕಂಡಂತಿವೆ

★ ಯೋಜನೆಯ ಸಿಬ್ಬಂದಿ ಆರಂಭಿಕವಾಗಿ ಕೈಗೊಂಡ ಯೋಜನಾ ಚಟುವಟಿಕೆಗಳನ್ನು ಸಮುದಾಯ ಕೈಗೊಳ್ಳಬೇಕೆ? ಸರ್ಕಾರ ಕೈಗೊಳ್ಳಬೇಕೆ?

★ ಅನುಕೂಲಗಳಿಗಾಗಿ ಯೋಜನೆಯನ್ನು ಕೈಗೊಳ್ಳಲು ಯಾವುದಾದರೂ ಕ್ರಮಗಳಿವೆಯೇ?

★ ಯೋಜನೆಯ ಸಂಚಿತ ವೆಚ್ಚದ ಪರಿಣಾಮಗಳೇನು? ಯೋಜನೆ ಚಟುವಟಿಕೆಗಳ ಅನುಷ್ಠಾನಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಮೂಲಕ ಇದನ್ನು ತಗ್ಗಿಸಬಹುದೇ?

★ ಸೂಚನೆ: ಸಂಚಿತ ವೆಚ್ಚಗಳು ಚಟುವಟಿಕೆಗೆ ಸೌಲಭ್ಯದ ಅಗತ್ಯ ದಿನನಿತ್ಯದ ಕಾರ್ಯನಿರ್ವಹಣಾ ವೆಚ್ಚವಾಗಿರುತ್ತದೆ. ಉದಾಹರಣೆಗೆ ಬಾಡಿಗೆ ವಿದ್ಯುತ್, ದೂರವಾಣಿ ಬಿಲ್ ಇತ್ಯಾದಿ.

★ ಯೋಜನೆ ಅವಧಿಗಿಂತ ಮಿಗಿಲಾಗಿ ಹಣಕಾಸು ಬೆಂಬಲ ಅಗತ್ಯವಾದರೆ ಅದನ್ನು ಪಡೆಯಲು ಇರುವ ಆಯ್ಕೆಗಳು ಯಾವುವು? ಉದಾಹರಣೆಗೆ ಸೇವೆಗಳಿಗೆ ಶುಲ್ಕ, ವಂತಿಕೆಗಳು, ಕೊಡುಗೆಗಳು, ಸಾಮಾಜಿಕ ಮಾರುಕಟ್ಟೆ, ಆದಾಯ ಸೃಷ್ಟಿ ಚಟುವಟಿಕೆಗಳು ಇತ್ಯಾದಿ. ಎಲ್ಲ ಪ್ರಮುಖ ಅಂಶಗಳನ್ನು ಪಟ್ಟಿ ಮಾಡಬೇಕು. ಪರಾಮರ್ಶಿಸಿ, ಪ್ರತಿನಿದಿಗಳಿಂದ ಮಾಹಿತಿ ಕೇಳಬೇಕು.

ಸಮಯ: 30 ನಿಮಿಷಗಳು

## ಉದ್ದೇಶ

ಯೋಜನೆ ಮುಂದುವರಿಕೆಗೆ ಸ್ವಯಂ- ಹಣಕಾಸು ರೂಪುರೇಷೆ ಅನ್ವೇಷಿಸಲು ಪ್ರತಿನಿಧಿಗಳಿಗೆ ಅನುವು ಮಾಡಿಕೊಡುವುದು.

ಸಂಜೆ4.00 ವಿರಾಮ

ಸಂಜೆ4.15 ವೇಳಾ ಪಟ್ಟಿ ಮತ್ತು ಕಾರ್ಯ ಯೋಜನೆ ಅಭಿವೃದ್ಧಿ ಮಧ್ಯಸ್ಥಿಕೆದಾರರ ಮಂಡನೆ

ವೇಳಾಪಟ್ಟಿ ಮತ್ತು ಕಾರ್ಯ ಯೋಜನೆ ಪರಿಕಲ್ಪನೆಯನ್ನು ವ್ಯಾಖ್ಯಾನಿಸಬೇಕು. ವೇಳಾ ಪಟ್ಟಿ, ಸೇವೆ ಅನುಷ್ಠಾನ ಪ್ರಕ್ರಿಯೆ ಗುರುತಿಸಲು ನೆರವಾಗುತ್ತದೆ. ಕಾರ್ಯ ಯೋಜನೆ, ಚಟುವಟಿಕೆಗಳ ವೇಳಾಪಟ್ಟಿ ನೀಡುತ್ತದೆ.

ಸಮಯ: 15ನಿಮಿಷಗಳು

ಅಭ್ಯಾಸ: 15ನಿಮಿಷಗಳು

**ಅಭ್ಯಾಸ 25: ವೇಳಾಪಟ್ಟಿ ಮತ್ತು ಕಾರ್ಯ ಯೋಜನೆ ತಯಾರಿ**

ಅನುಷ್ಠಾನ ಕಾರ್ಯಕ್ರಮಕ್ಕೆ ಅಗತ್ಯವಾಗಿ ಬೇಕಾದ ಸೇವೆಗಳು ಮತ್ತು ಅಭಿವೃದ್ಧಿಯತ್ತ ಗಮನಹರಿಸುವಂತೆ ಎರಡೂ ಕಾರ್ಯಸಮೂಹಗಳ ಪ್ರತಿ ಗುಂಪಿಗೆ ತಿಳಿಸಬೇಕು.

ಬಳಿಕ, ವಿಭಿನ್ನ ಸೇವೆಗಳು ಮತ್ತು ಸೇವಾ ವೇಳಾಪಟ್ಟಿಗಾಗಿ ಈ ಮುಖ್ಯ ಚಟುವಟಿಕೆಗಳನ್ನು ಗಮನಿಸಬೇಕು. ಪ್ರತಿ ಚಟುವಟಿಕೆಗಾಗಿ ಪೂರ್ಣಗೊಳಿಸಲು ಅಗತ್ಯವಿರುವ ಎಲ್ಲ ಹೊಣೆಗಳ ಸವಿವರ ಪಟ್ಟಿಯನ್ನು ಪ್ರತಿ ಗುಂಪು ಅಭಿವೃದ್ಧಿಗೊಳಿಸುತ್ತದೆ. ಅದನ್ನು ಯಾರು ನಿರ್ವಹಿಸುತ್ತಾರೆ ಮತ್ತು ಎಂದು ಕಾರ್ಯ ಆರಂಭವಾಗಿ ಮುಕ್ತಾಯಗೊಳ್ಳುತ್ತವೆ ಎಂಬುದನ್ನು ತಿಳಿಸಬೇಕು. ಅನೇಕ ಚಟುವಟಿಕೆಗಳಿದ್ದರೆ, ಚಟುವಟಿಕೆಗಳ ಉದಾಹರಣೆಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಗುಂಪಿಗೆ ತಿಳಿಸಬೇಕು.

ಈ ಹೊಣೆಯಿಂದ, ವೇಳಾ ಪಟ್ಟಿಯ ಮಾಹಿತಿಯಾಗಿ ಸಂಘಟಿಸುವಂತೆ ಗುಂಪುಗಳಿಗೆ ತಿಳಿಸಬೇಕು. ವೇಳಾಪಟ್ಟಿ ಹೊಣೆಗಳ ಕ್ರಮಬದ್ಧತೆಯನ್ನು ಸೂಚಿಸುತ್ತದೆ ಮತ್ತು ಪ್ರತಿ ಹೊಣೆಗಾರಿಕೆ ಯಾವಾಗ ಆರಂಭಗೊಂಡು ಪೂರ್ಣಗೊಳ್ಳುತ್ತದೆ ಎಂಬ ಬಗ್ಗೆ ಚಿತ್ರದ ಮೂಲಕ ತೋರಿಸಬೇಕು.

ಸಮಯ: 45ನಿಮಿಷಗಳು

ಇದಾದ ಬಳಿ, ಎರಡು ಗುಂಪುಗಳನ್ನು ಒಗ್ಗೂಡಿಸಿ, ತಮ್ಮ ಕಾರ್ಯಯೋಜನೆ ಮತ್ತು ವೇಳಾ ಪಟ್ಟಿಯನ್ನು ಮಂಡಿಸುವಂತೆ ಪ್ರತಿ ಸಮೂಹಕ್ಕೆ ತಿಳಿಸಬೇಕು. ಪರಾಮರ್ಶಿಸಿ, ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು.

ಸಮಯ: 45ನಿಮಿಷಗಲು

## ಉದ್ದೇಶ

ಚಟುವಟಿಕೆಗೆ ಅನುವಾಗುವಂತೆ ಹೊಣೆಯ ಶ್ರೇಣಿಯನ್ನು ಅಭಿವೃದ್ಧಿಗೊಳಿಸುವ ಪ್ರಕ್ರಿಯೆಯನ್ನು ಪ್ರತಿನಿಧಿಗಳು ಅರ್ಥಮಾಡಿಕೊಳ್ಳುವಂತೆ ಅನುವು ಮಾಡಿಕೊಡುವುದು ಮತ್ತು ಚಟುವಟಿಕೆಯನ್ನು ಅನುಷ್ಠಾನಗೊಳಿಸಲು ಸೂಕ್ತ ವೇಳಾ ಪಟ್ಟಿ ತಯಾರಿಸುವುದು.

## ಮಧ್ಯಸ್ಥಿಕೆದಾರರ ಟಿಪ್ಪಣಿ

ಈ ಯೋಜನೆಯಲ್ಲಿ ಪಾಲ್ಗೊಂಡು ಪ್ರತಿಯೊಬ್ಬ ಕೆಲಸವನ್ನು ಸಂಘಟಿಸಲು ಈ ಪ್ರಕ್ರಿಯೆ ನೆರವಾಗುತ್ತದೆ. ಪ್ರತಿಯೊಬ್ಬರು ಪಟ್ಟಿಯ ಪ್ರತಿಯನ್ನು ಇಟ್ಟುಕೊಳ್ಳಬೇಕು. ಇದರಿಂದ ಯಾವ ಸಮಯದಲ್ಲಾದರೂ ಯೋಜನೆಯ ಮಾಹಿತಿ, ಮುಂದೆ ಮಾಡಬೇಕಾದ ಕೆಲಸ, ನಿರ್ದಿಷ್ಟ ಜವಾಬ್ದಾರಿಗಳನ್ನು ಯಾರು ಹೊರಬೇಕು ಮತ್ತು ಯಾವಾಗ ಅವರು ಅದನ್ನು ನಿರ್ವಹಿಸಬೇಕು ಎಂಬ ಬಗ್ಗೆ ಸುಲಭವಾಗಿ ನೋಡಲು ಸಾಧ್ಯವಾಗುತ್ತದೆ. ಬದಲಾಯಿಸಲು ಅಗತ್ಯವಿದ್ದಾಗ ಅಥಾವ ಸನ್ನಿವೇಶ ಒದಗಿಬಂದಾಗ ಈ ಪಟ್ಟಿಗಳನ್ನು ಅಗಾಗ್ಗೆ ಮೇಲ್ದರ್ಜೆಗೆ ಏರಿಸಬೇಕು. ಆದ್ದರಿಂದ ವೇಳಾ ಪಟ್ಟಿಗಳನ್ನು ಆಗಾಗಾ ಪರಾಮರ್ಶಿಸುವ ಅಗತ್ಯವಿದೆ.

## ಉದಾಹರಣೆತ ಕಾರ್ಯಯೋಜನೆ ತಯಾರಿ

ಉದ್ದೇಶ: ಪುರುಷರೊಂದಿಗೆ ಲೈಂಗಿಕ ಕ್ರಿಯೆ ನಡೆಸುವ ಪುರುಷರು ಹಾಗೂ ಅವರ ಲೈಂಗಿಕ ಸಂಗಾತಿಗಳಲ್ಲಿ

ಕಾಂಡೋಮ್ ಬಳಕೆಯನ್ನು ಹೆಚ್ಚಿಸುವುದು.

***ರೂಪುರೇಷೆ: ಎಂಎಸ್‌ಎಂಗಳಿಗೆ ಎಸ್‌ಟಿಐ/ ಎಚ್‌ಐವಿ/ಏಡ್ಸ್ ಬಗ್ಗೆ ಮಾಹಿತಿ ಮತ್ತು ಕಾಂಡೋಮ್ ಬಳಕೆ ಬಗ್ಗೆ ಮಾಹಿತಿ ನೀಡಲು ಸಾರ್ವಜನಿಕ ಲೈಂಗಿಕ ಪರಿಸರದಲ್ಲಿ ಕ್ಷೇತ್ರ ಕಾರ್ಯಕರ್ತರ ಬಳಕೆ***

**ಚಟುವಟಿಕೆ ಒಂದು: ಕ್ಷೇತ್ರ ಕಾರ್ಯಕರ್ತರ ಬಳಕೆ**

**ಚಟುವಟಿಕೆ ಒಂದು: ಕ್ಷೇತ್ರ ಕಾರ್ಯಕರ್ತರ ಆಯ್ಕೆ ಮತ್ತು ತರಬೇತಿ**

| **ಹೊಣೆಗಳು** | **ವ್ಯಕ್ತಿಯ ಜವಾಬ್ದಾರಿ** | **ಆರಂಭ/ಮುಕ್ತಾಯ ದಿನಾಂಕಗಳು** |
|---|---|---|
| ಕ್ಷೇತ್ರ ಕಾರ್ಯಕರ್ತರ ಪಾತ್ರಗಳ ವಾಖ್ಯಾನ | ಯೋಜನಾ ಸಮನ್ವಯ | 1ವಾರ |
| ತರಬೇತಿ ಕಾರ್ಯಕ್ರಮ ವಿನ್ಯಾಸ | ಯೋಜನಾ ಸಮನ್ವಯ / ತರಬೇತಿ ನೀಡಪವವ | 2-4ವಾರ |
| ಎಂಎಸ್‌ಎಂ ಜೊತೆ ಸಭೆಗಳಿಗೆ ಏರ್ಪಾಟು | ಯೋಜನಾ ಸಮನ್ವಯಕ | 2-4 ವಾರ |
| ಕ್ಷೇತ್ರ ಕಾರ್ಯಕರ್ತರಾಗಿ ಎಂಎಸ್‌ಎಂ ನೇಮಕಕ್ಕೆ ಆಯ್ಕೆ | ಯೋಜನಾ ಸಮನ್ವಯ /ತರಬೇತಿ | 3.5ವಾರ |
| ತರಬೇತಿಗೆ ದಿನಾಂಕ/ಸ್ಥಳ ವ್ಯವಸ್ಥೆ ಮತ್ತು ಪ್ರತಿನಿಧಿಗಳಿಗೆ ಮಾಹಿತಿ | ಯೋಜನಾ ಸಮನ್ವಯವಾದ | 4-6 |
| ತರಬೇತಿ ಏರ್ಪಾಟು ಹಾಗು | ತರಬೇತು ನೀಡುವವರ | 4-6 ವಾರ |
| ತರಬೆತಿ ಮೌಲ್ಯಮಾಪನ ನೀಡುವವ | ಯೋಜನಾ ಸಮನ್ವಯಕ/ತರಬೇತು | 7 ವಾರ |
| ಕ್ಷೇತ್ರ ಕಾರ್ಯಕರ್ತನ ಆಯ್ಕೆ ಇತ್ಯಾದಿ | ಯೋಜನಾ ಸಮನ್ವಯಕ | 7 ವಾರ |

'ಕಾರ್ಯಯೋಜನೆ' ಮತ್ತು 'ವೇಳಾ ಪಟ್ಟಿ'ಯ ಪರಿಕಲ್ಪನೆಯನ್ನು ವಿವರಿಸಿ

ಸಂಜೆ6-00 ಮುಕ್ತಾಯ

ಎಲ್ಲ ಪ್ರತಿನಿಧಿಗಳು ಎದ್ದು ನಿಂತು ರೇಖಾ ಚಿತ್ರ ಅಭ್ಯಾಸ ಮಾಡುವಂತೆ ತಿಳಿಸಬೇಕು.

ಪ್ರತಿಯೊಬ್ಬರೂ ದಿನದಲ್ಲಿ ಎದುರಿಸಿದ ತೊಂದರೆಗಳು ಮತ್ತು ಸವಾಲುಗಳ ಬಗ್ಗೆ ಕೆಲವು ಮುಕ್ತಾಯ ಹೇಳಿಕೆಗಳನ್ನು ನೀಡುವಂತೆ ತಿಳಿಸಬೇಕು. ಪ್ರತಿನಿಧಿಗಳ ಬಗ್ಗೆ ಹಾಸ್ಯಮಯವಾಗಿ ಕೆಲವು ಹೇಳಿಕೆಗಳನ್ನು ನೀಡಬೇಕು ಮತ್ತು ಅವರು ಹಂಚಿಕೊಂಡ ವಿಚಾರಗಳ ಕುರಿತು ಹೇಳಬೇಕು.

ಮುಂದಿನ ದಿನದ ಸಮಯ ಪಾಲನೆ ಬಗ್ಗೆ ಎಲ್ಲ ಪ್ರತಿನಿಧಿಗಳಿಗೂ ಜ್ಞಾಪಿಸಬೇಕು.

ಪ್ರತಿನಿಧಿಗಳಿಗೆ ಪ್ರವಾಸ ಚೀಲ ಮತ್ತು ಯಾವುದಾದರೂ ಬಾಕಿ ಪಾವತಿ ಇದ್ದರೆ ನೀಡಬೇಕು. ನೋಂದಣಿ ಹಾಳೆಯಲ್ಲಿ ಅವರ ಹೆಸರನ್ನು ಗುರುತು ಹಾಕಿಕೊಳ್ಳಬೇಕು.

# ಎರಡನೇ ಹಂತ: ಎಂ.ಎಸ್.ಎಂ. ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಐದನೇ ದಿನ: ಯೋಜನಾ ನಿರ್ವಹಣೆ (ಭಾಗ ಎರಡು)

**ಬೆಳಿಗ್ಗೆ 9.00 ಸ್ವಾಗತ ಮತ್ತು ನೋಂದಣಿ**

ಪ್ರತಿನಿಧಿಗಳು ಕಾರ್ಯಾಗಾರ ಸ್ಥಳ ಪ್ರವೇಶಿಸುತ್ತಿದ್ದಂತೆ ಅವರ ಬಳಿ ಹೆಸರು ಪಟ್ಟಿ ಬರವಣಿಗೆ ಪ್ಯಾಡ್ ಮತ್ತು ಪೆನ್ ಇದೆಯೇ ಎಂಬುದನ್ನು ನೋಡಬೇಕು. ದಿನನಿತ್ಯದ ನೋಂದಣಿ ಹಾಳೆಯನ್ನು ಭರ್ತಿ ಮಾಡಬೇಕು.

ಕಳೆದ ರಾತ್ರಿ ಮಾಡಿದ ಉತ್ತಮ ಕೆಲಸದ ಬಗ್ಗೆ ಹೇಳುವಂತೆ ಪ್ರತಿನಿಧಿಗಳನ್ನು ಕೇಳಬೇಕು. ಇದನ್ನು ಹಾಸ್ಯಮಯವಾಗಿ ಮಾಡಬೇಕು. ಇದಕ್ಕೆ ಮಧ್ಯಸ್ಥಿಕೆದಾರರು ಪ್ರತಿಕ್ರಿಯೆ ನೀಡಬೇಕು.

**ಬೆಳಿಗ್ಗೆ 9.15 ನಾಲ್ಕನೇ ದಿನದ ಮಾಹಿತಿ**

## ಸಮೂಹ ಚರ್ಚೆ

ಹಿಂದಿನ ದಿನದ ಭಾವನೆ, ಅವರು ಏನನ್ನು ಕಲಿತರು ಮತ್ತು ಯಾವುದಾದರೂ ಪ್ರಶ್ನೆಗಳಿವೆ ಎಂಬ ಬಗ್ಗೆ ಪ್ರತಿನಿಧಿಗಳನ್ನು ಕೇಳಬೇಕು.

ಸಮಯ : 30 ನಿಮಿಷಗಳು

## ಮಧ್ಯಸ್ಥಿಕೆದಾರರ ಮಂಡನೆ

ನಿರೀಕ್ಷಿತ ಫಲಿತಾಂಶ ಅಥವಾ ಫಲಶೃತಿಗಳನ್ನು ಸಾಧಿಸಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತಿಳಿಯುವುದು ಮುಖ್ಯ. ಇಂಥ ಮಾಹಿತಿ ಪಡೆಯುವುದರಿಂದ ವಾಸ್ತವ ಸಂಗತಿಗಳ ಪ್ರಕಾರ ಮಧ್ಯಸ್ಥಿಕೆ ಚಟುವಟಿಕೆಗಳ ಮತ್ತು ಗುರಿಗಳನ್ನು ಮರು ಹೊಂದಾಣಿಕೆ ಮಾಡಲು ಯೋಜನೆಗೆ ಅವಕಾಶ ನೀಡುತ್ತದೆ. ಮುಂದೆ. ಪರಿಸ್ಥಿತಿಯ ಬಗ್ಗೆ ಮುಂಜಾಗ್ರತೆ ವಹಿಸಲು ಯೋಜನೆ ಸಿಬ್ಬಂದಿ ಮತ್ತು ಆಡಳಿತ ಮಂಡಳಿಗೆ ಅವಕಾಶ ನೀಡಿ ಅದರ ಪ್ರಕಾರ ನಡೆಯಲು ಅನುವು ಮಾಡಿಕೊಡುತ್ತದೆ.

ಉಸ್ತುವರಿ ಮತ್ತು ಮೌಲ್ಯಮಾಪನವನ್ನು ಯೋಜನೆಯ ಅವಿಭಾಜ್ಯ ಅಂಗವಾಗಿ ಕಾಣಬೇಕು.

ಸಮೂಹ ಅಭಿವೃದ್ಧಿಗೊಳಿಸಿದ ಸೂಚನೆಗಳು, ಯೋಜನೆಯ ಪ್ರಗತಿಯನ್ನು ವೀಕ್ಷಿಸಲು ಆಧಾರ ಕಲ್ಪಿಸುತ್ತವೆ. ನಡೆಯುತ್ತಿರುವ ಕೆಲಸ ಮತ್ತು ಪ್ರಗತಿ (0\f4 ಏನಾದರು) ಸಾಧಿಸಿದ ಬಗ್ಗೆ ದಾಖಲಿಸಬೇಕಾದರೆ ಮಾಹಿತಿ ಸಂಗ್ರಹ ಮತ್ತು ದಾಖಲೆ ತುಂಬ ಮುಖ್ಯ ಎಂಬುದನ್ನು ವಿವರಿಸುವ ಅಗತ್ಯವಿದೆ ಇದರಲ್ಲಿ ಹಣಕಾಸು ಉಸ್ತುವಾರಿ ಸಹ ಒಳಗೊಂಡಿರುತ್ತದೆ.

ಸಮಯ: 15ನಿಮಿಷಗಳು

**ಅಭ್ಯಾಸ26: ಏನನ್ನು ಉಸ್ತುವಾರಿ ಮಾಡಬೇಕು?**

ಯೋಜನೆಯ ಕಾಲಾವಧಿ ವೇಳೆ ಮತ್ತು ನಂತರ ಸಂಗ್ರಹಿಸಬೇಕಾದ ಮತ್ತು ದಾಖಲಿಸಬೇಕಾದ ಎಲ್ಲ ಅಗತ್ಯ ಮಾಹಿತಿಗಳ ಪಟ್ಟಿಯನ್ನು ತಯಾರಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು ಸಂಗ್ರಹಿಸಿದ ಮಾಹಿತಿಯನ್ನು ಪ್ರಗತಿಯ ಮೌಲ್ಯಮಾಪನದ ಅರ್ಥಪೂರ್ಣ ತುಲನೆಗೆ ಬಳಸಬಹುದೆಂಬುದನ್ನು ದೃಢಪಡಿಸಿಕೊಳ್ಳಬೇಕು.

ಈ ಹಿನ್ನೆಲೆಯಲ್ಲಿ ಕಾರ್ಯ ಯೋಜನೆಯನ್ನು ಪರಾಮರ್ಶಿಸಿ, ಅಗತ್ಯವಿದ್ದರೆ ಯಾವುದಾದರೂ ಹೊಂದಾಣಿಕೆಗಳನ್ನು ಮಾಡುವಂತೆ ಸಮೂಹಗಳಿಗೆ ತಿಳಿಸಬೇಕು.

ಮಾಹಿತಿಗಳನ್ನು ಯಾರು ಸಂಗ್ರಹಿಸುತ್ತಾರೆ. ಯಾವಾಗ ಹೇಗೆ ಅದನ್ನು ದಾಖಲಿಸಲಾಗುತ್ತದೆ ಮತ್ತು ಯಾರು ಮಾಹಿತಿಯನ್ನು ಪರಾಮರ್ಶಿಸುತ್ತಾರೆ ಎಂಬುದನ್ನು ಗುರುತಿಸುವಂತೆ ಗುಂಪುಗಳಿಗೆ ತಿಳಿಸಬೇಕು.

ಸಮಯ: 30 ನಿಮಿಷಗಳು

ಇದಾದ ನಂತರ ತಮ್ಮ ಅನ್ವೇಷಣೆಗಳನ್ನು ಮಂಡಿಸುವಂತೆ ಪ್ರತಿ ಗುಂಪಿಗೂ ತಿಳಿಸಬೇಕು. ಪರಾಮರ್ಶಿಸಿ ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು. ಇದಾದ ಬಳಿಕ ಇತರ ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆಗಳಿಂದ ಬಳಸಲಾದ ಸರಣಿ IIIರ ದಾಖಲೆಯಲ್ಲಿ ಉಸ್ತುವಾರಿ ವಿಧಾನದ ಮೂಲಕ ಪ್ರದರ್ಶಿಸಬೇಕು.

ಈ ಅಂಕಿ-ಅಂಶಗಳ ಸಂಗ್ರಹವು ಪ್ರಮಾಣಾತ್ಮಕ ಮಾಹಿತಿ ಒದಗಿಸುತ್ತದೆ ಎಂಬುದನ್ನು ಪ್ರತಿನಿಧಿಗಳಿಗೆ ವಿವರಿಸಬೇಕು. ಸಾಧನೆ ಫಲಿತಾಂಶ/ಫಲಶೃತಿಯ ಪ್ರಗತಿಗೆ ಗುಣಾತ್ಮಕ ಮಾಹಿತಿ ಅಗತ್ಯ.

ಇದನ್ನು ಸಾಧಿಸುವ ವಿಧಾನಗಳನ್ನು ಚರ್ಚಿಸಿ

ಸಂದರ್ಶನಗಳು

ಸಮೂಹ ಚರ್ಚೆಗಳು

ಸಮೀಕ್ಷೆಗಳು

ಸಮಯ 45 ನಿಮಿಷಗಳು

## ಉದ್ದೇಶ

ಉಸ್ತುವಾರಿ ಉದ್ದೇಶಗಳಿಗೆ ಸೂಚನೆಗಳ ಬಳಕೆ ಮತ್ತು ಮಾಹಿತಿ ಸಂಗ್ರಹ ಪ್ರಕ್ರಿಯೆಯ ಕಲಿಕೆಗೆ

ಮಧ್ಯಸ್ಥಿಕೆದಾರರ ಟಿಪ್ಪಣಿಗಳು

ಉಸ್ತುವಾರಿ ಎಂದರೆ ಮಾಹಿತಿ ಸಂಗ್ರಹ ಯೋಜನಾ ಚಟುವಟಿಕೆಗಳು ಯೋಜನೆಯಂತೆ ನಡೆಯುತ್ತಿದೆಯೇ ಮತ್ತು ಯೋಜನಾ ಆಯವ್ಯಯದಲ್ಲಿ ತಿಳಿಸಿರುವ ವೆಚ್ಚದೊಳಗೆ ನಡೆಯುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕು. ಇದರಿಂದ ಯಾವುದೇ ಸಮಸ್ಯೆಗಳನ್ನು ಗುರುತಿಸಿ ಸರಿಪಡಿಸಬಹುದು.

ಉಸ್ತುವಾರಿ ವಿಧಾನಗಳನ್ನು ಯಾವಾಗ ನಡೆಸಬೇಕು ಮತ್ತು ಇದಕ್ಕೆ ಯಾರು ಹೊಣೆ ಎಂಬ ಬಗ್ಗೆ ಪ್ರತಿನಿಧಿಗಳು ಆಲೋಚಿಸಬೇಕು.

ಉಸ್ತುವಾರಿ ವಿಧಾನಗಳು ಯಾವಾಗ ಪೂರ್ಣಗೊಳ್ಳುತ್ತವೆ ಮತ್ತು ಇದಕ್ಕೆ ಯಾರು ಹೊಣೆ ಎಂಬ ಬಗ್ಗೆ ಪ್ರತಿನಿಧಿಗಳು ಆಲೋಚಿಸಬೇಕು ಹಾಗೂ ಈ ನಿರ್ಧಾರಗಳನ್ನು ಕಾರ್ಯ ಯೋಜನೆಯನ್ನು ಸೇರಿಸಬೇಕು.

ಉಸ್ತುವಾರಿ ಮಾಹಿತಿ ಪರಾಮರ್ಶೆಯಿಂದ ಕಾರ್ಯಯೋಜನೆ ಮೇಲೆ ಪರಿಣಾಮ ಉಂಟಾಗಬಹುದು. ಸಮಸ್ಯೆಗಳು ಉದ್ಭವಿಸಿ ಉಸ್ತುವಾರಿ ಮಾಹಿತಿಯನ್ನು ಪ್ರತಿಫಲಿಸಬಹುದು. ಇಂಥ ಸಮಸ್ಯೆಗಳನ್ನು ಕ್ಷಿಪ್ರವಾಗಿ ಬಗೆಹರಿಸುವ ಅಗತ್ಯವಿದೆ. ಇದರಿಂದಾಗಿ ಕಾರ್ಯಯೋಜನೆಯ ತಿದ್ದುಪಡಿಗೆ ಸಹಕಾರಿಯಾಗುತ್ತವೆ.

ಉದಾಹರಣೆಗೆ ನಿರ್ದಿಷ್ಟ ಸ್ಥಳದಲ್ಲಿ ಕಾಂಡೋಮ್‌ಗಳ ವಿತರಣೆಗೆ ಕಾರ್ಯಯೋಜನೆ ಅಗತ್ಯ. ಆದಾಗ್ಯೂ, ವಿವಿಧ ಅಂಶಗಳಿಂದಾಗಿ ಅದನ್ನು ಕೈಗೆತ್ತಿಕೊಳ್ಳುವುದು ತುಂಬಾ ಅಲ್ಪವಿರಬಹುದು. ಉದ್ದೇಶಗಳಿಂದಾಗಿ ಅಗತ್ಯಮಟ್ಟಗಳಿಗೆ ಕಾಂಡೋಮ್ ವಿತರಣೆ ಹೆಚ್ಚಿಸುವುದಕ್ಕೂ ಮುನ್ನ ಈ ಅಂಶಗಳನ್ನು ಮೊದಲು ಬಗೆಹರಿಸಬೇಕು.

## ಸಂಭವನೀಯ ಕ್ರಮ ಸೂಚನೆಗಳು

1. ಪುರುಷ ಲೈಂಗಿಕ ಜಾಲಗಳ ವಿಶಾಲ ವಲಯದೊಳಗೆ ಪುರುಷರ ಜೊತೆ ಲೈಂಗಿಕ ಕ್ರಿಯೆ ನಡೆಸುವ ಪುರುಷರಲ್ಲಿ ನಡೆಸಲಾದ ಲೈಂಗಿಕ ನಡವಳಿಕೆ ಸಮೀಕ್ಷೆಗಳು ಮತ್ತು ಅಗತ್ಯ ಅಂದಾಜುಗಳ ಮುಂದುವರಿಕೆ

2. ಲೈಂಗಿಕ ಆರೋಗ್ಯ ಸೇವೆಗಳು ಮತ್ತು ಸಂಪನ್ಮೂಲಗಳ ಮಾಹಿತಿಯನ್ನು ಪಡೆಯುವ ಪುರುಷರ ಸಂಖ್ಯೆ.

3. ಕಾಂಡೋಮ್ ಬಳಕೆಯಲ್ಲಿ ಹೆಚ್ಚಳ

4. ಲೈಂಗಿಕ ಅಭ್ಯಾಸಗಳ ಬದಲಾವಣೆ

5.ಎಸ್‌ಟಿಐ ಚಿಕಿತ್ಸೆ ಪಡೆಯುವಲ್ಲಿ ಹೆಚ್ಚಳ

6. ಎಚ್‌ಐವಿ ಕೌನ್ಸಿಲಿಂಗ್ ಮತ್ತು ಪರೀಕ್ಷೆಗಳ ಸೌಲಭ್ಯದಲ್ಲಿ ಹೆಚ್ಚಳ

7. ಸೂಕ್ತ ಬೆಂಬಲ ಮತ್ತು ಕೌನ್ಸಿಲಿಂಗ್ ಪಡೆಯುವಲ್ಲಿ ಹೆಚ್ಚಳ.

8. ಅಭಿವೃದ್ಧಿಗೊಳಿಸಲಾದ ಶೈಕ್ಷಣಿಕ ಸಂಪನ್ಮೂಲಗಳ ಸಂಖ್ಯೆ

9. ಲೈಂಗಿಕ ಆರೋಗ್ಯ ಚರ್ಚಾ ಸಮೂಹಗಳ ಶ್ರೇಣಿ

10. ವಿತರಿಸಲಾದ ಸಂಪನ್ಮೂಲಗಳ ಸಂಖ್ಯೆ

11. ತರಬೇತಿ ಕಾರ್ಯಕ್ರಮಗಳ ಸಂಖ್ಯೆ

12. ತರಬೇತಿ ಕಾರ್ಯಕ್ರಮಗಳಲ್ಲಿ ಹಾಜರಾದವರು ಮತ್ತು ಅವರಿಂದ ಮಾಹಿತಿ

13. ಪಾಲ್ಗೊಂಡ ಸಂಸ್ಥೆಗಳ ಶ್ರೇಣಿ

## ಪರಿಶೀಲನೆ ಅಂಶಗಳು

1. ಸ್ಥಳದಲ್ಲಿ ಕ್ಷೇತ್ರ ತಂಡಗಳು ನಡೆಸಿದ ಸಮೀಕ್ಷೆಯಲ್ಲಿ ಅವರು ನಿರ್ವಹಿಸಿದ ಕಾರ್ಯ

★ ಪ್ರಶ್ನಾವಳಿಗಳು

★ ವೈಯಕ್ತಿಕ ಸಂದರ್ಶನಗಳು

2. ಇಂಥ ಸಂಸ್ಥೆಯ ಉಸ್ತುವಾರಿ, ಅದರ ಸೇವೆಗಳು ಮತ್ತು ಉಲ್ಲೇಖಗಳು -ಕಾರ್ಯಕರ್ತರು ದಿನದ ಆಧಾರದ ಮೇಲೆ ಪೂರ್ಣಗೊಳಿಸಬೇಕು

3. ★ ವಿತರಿಸಲಾದ ಕಾಂಡೋಮ್‌ಗಳು/ಲೂಬ್ರಿಕೆಂಟ್‌ಗಳ ಸಂಖ್ಯೆ

★ ಸ್ಥಳದಲ್ಲಿ ಶಿಕ್ಷಕರು ನಡೆಸಿದ ಪ್ರಶ್ನಾವಳಿ/ಸಂದರ್ಶನಗಳು

★ ಎಸ್‌ಟಿಐ ಚಿಕಿತ್ಸೆ ಕುರಿತ ಉಸ್ತುವಾರಿ ಮಾಹಿತಿ ಪರಾಮರ್ಶೆ-ಲಾಗ್ ಪುಸ್ತಕಗಳು ಮತ್ತು ಕಾರ್ಡ್‌ಗಳನ್ನು ಅಭಿವೃದ್ಧಿಗೊಳಿಸುವ ಮೂಲಕ ಉಸ್ತುವಾರಿ ಪ್ರಕ್ರಿಯೆಯನ್ನು ನಡೆಸಬಹುದು.

4. ಸಂದರ್ಶನಗಳು ಮತ್ತು ಪ್ರಶ್ನಾವಳಿಗಳ ಮೂಲಕ ಕಾಲಾವಧಿಯನ್ನು ಸ್ಥಳವೊಂದರ ಏಕ ಸಮೂಹ ಕಾಲ ಸರಣಿ ವಿಶ್ಲೇಷಣೆಯಿಂದ ಸ್ಥಲಗಳಲ್ಲಿನ ಅಡ್ಡ ಭಾಗ ಕಾಲ ಸರಣಿ ವಿಶ್ಲೇಷಣೆಯಿಂದ ತುಲನೆ ಮಾಡಬೇಕು.

5. ಲೈಂಗಿಕ ಆರೋಗ್ಯ ಚರ್ಚಾ ಸಮೂಹಗಳ ಉಸ್ತುವಾರಿ ದಾಖಲೆಗಳು

6. ದೂರವಾಣಿ ಉಸ್ತುವಾರಿ ವ್ಯವಸ್ಥೆ: ದಿನದ ಕರೆಗಳು/ ವಿಷಯ/ ಪ್ರತಿಕ್ರಿಯೆ

7. ವಿತರಣೆ ದಾಖಲೆಗಳ ನಿರ್ವಹಣೆಗೆ ಕ್ಷೇತ್ರ ತಂಡಗಳು ಮತ್ತು ಕಚೇರಿ ಸಿಬ್ಬಂದಿ ಪ್ರತಿ ಕಾಂಡೋಮ್ ಮಾರಾಟ/ವಿತರಣೆಯೊಂದಿಗೆ ಶೈಕ್ಷಣಿಕ ಸಂಪನ್ಮೂಲಗಳ ನೀಡಿಕೆ

8. ತರಬೇತಿ ದಾಖಲೆಗಳ ನಿರ್ವಹಣೆ

9. ಕಾರ್ಯ ವರದಿಗಳ ಕ್ರಮಬದ್ಧ ಮಂಡನೆ

## ಟಿಪ್ಪಣಿ:

★ ಕೆಲವು ಸೂಚನೆಗಳು ಯೋಜನಾ ಪರಿಣಾಮದ ಕ್ರಮಗಳಾಗುತ್ತವೆ. ಆದ್ದರಿಂದ ಇವು ಯೋಜನೆಯ ನಿರ್ದಿಷ್ಟ ಸಮಯ ಅಥವಾ ಮುಕ್ತಾಯದ ಮೌಲ್ಯಮಾಪನಗಳನ್ನು ನಡೆಸುವ ಭಾಗವಾಗುತ್ತದೆ. ಇದರ ಸೂಚನೆಗಳು ನಿರ್ದಿಷ್ಟ ವಿರಾಮಗಳಲ್ಲಿ ವರದಿಮಾಡುವ ಚಟುವಟಿಕೆಗಳಿಗೆ ಉಲ್ಲೇಖಿಸಲ್ಪಡುತ್ತವೆ. ಇದನ್ನು ಉಸ್ತುವಾರಿ ವ್ಯವಸ್ಥೆಯ ಭಾಗವಾಗಿ ಪರಿಗಣಿಸಲಾಗುತ್ತದೆ.

★ ಕಾರ್ಯ ಯೋಜನೆಯು ಯೋಜನೆಯ ಚಟುವಟಿಕೆಗಳು ಅದರ ವೇಳಾ ಪಟ್ಟಿ ಮತ್ತು ಅದರ ಅನುಷ್ಠಾನಕ್ಕೆ ಹೊಣೆಗಾರರಾಗುವ ವ್ಯಕ್ತಿ(ಗಳ)ಯನ್ನು ನಮೂದಿಸಲ್ಪಡುತ್ತದೆ. ಕಾರ್ಯ ಯೋಜನೆಯ ನಿರಂತರ ಪರಾಮರ್ಶೆಯು ಉಸ್ತುವಾರಿ ವ್ಯವಸ್ಥೆಯ ಭಾಗವಾಗಿರುತ್ತದೆ.

★ ಆಯವ್ಯಯವು ಪ್ರತಿ ಚಟುವಟಿಕೆಯ ಅನುಷ್ಠಾನಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ತಿಳಿಸುತ್ತದೆ. ವೆಚ್ಚಗಳ ಕ್ರಮಬದ್ಧ ಪರಾಮರ್ಶೆಯು ಉಸ್ತುವಾರಿ ವ್ಯವಸ್ಥೆಯ ಪ್ರಮುಖ ಭಾಗವಾಗಿರುತ್ತದೆ.

ಬೆಳಿಗ್ಗೆ 11.15 ವಿರಾಮ

ಬೆಳಿಗ್ಗೆ 11.30 ಮೌಲ್ಯಮಾಪನ

## ಮಧ್ಯಸ್ಥಿಕೆದಾರರ ಮಂಡನೆ

ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆ ಹಿನ್ನೆಲೆಯಲ್ಲಿ ಮೌಲ್ಯಮಾಪನವನ್ನು ವ್ಯಾಖ್ಯಾನಿಸಿ ಇದನ್ನು ಹೇಗೆ ಮಾಡಬಹುದು ಮತ್ತು ಇದು ಯಾವ ಮಾಹಿತಿ ಮೂಲಗಳನ್ನು ಬಳಸುತ್ತದೆ ಎಂಬುದನ್ನು ವಿವರಿಸಿ.

ಸಮೂಹ ನೋಟ, ಸಮೀಕ್ಷೆಗಳು ಮತ್ತು ಸಂದರ್ಶನಗಳ ಬಗ್ಗೆ ಚರ್ಚಿಸಿ

ಸಮಯ: 30 ನಿಮಿಷಗಳು

## ಉದ್ದೇಶ

ಯೋಜನೆಯ ಪ್ರಗತಿಯ ಮೌಲ್ಯಮಾಪನ ಎಂದರೇನು ಹಾಗೂ ಪ್ರಮಾಣಾತ್ಮಕ ಮತ್ತು ಗುಣಾತ್ಮಕ ಉಸ್ತುವಾರಿ ಮಾಹಿತಿಯನ್ನು ಬಳಸಿ ಇದನ್ನು ಹೇಗೆ ಮಾಡಲಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು.

ಮಧ್ಯಾಹ್ನ 12.00 ವರದಿಗಳು

## ಮಧ್ಯಸ್ಥಿಕೆದಾರರ ಮಂಡನೆ

ಯಾವುದೇ ಯೋಜನೆಗೆ ದಾಖಲೆಗಳನ್ನು ಇಡುವುದು ತುಂಬಾ ಮುಖ್ಯ. ಮಾಹಿತಿಯನ್ನು ಸಂಕ್ಷಿಪ್ತ ಚೌಕಟ್ಟಿನಲ್ಲಿಡುವುದು ಯಾವುದೇ ಯೋಜನಾ ಕಾರ್ಯದ ಭಾಗ.

ಕ್ರಮಬದ್ಧ ವರದಿಗಳು, ಸಾರಾಂಶಗಳು ಮತ್ತು ಪ್ರಗತಿ ದಾಖಲೆಗಳ ಮಂಡನೆ ಅಗತ್ಯವನ್ನು ಪ್ರತಿನಿಧಿಗಳೊಂದಿಗೆ ಚರ್ಚಿಸಬೇಕು. ಯಾರು ವರದಿಯನ್ನು ಮಂಡಿಸಬೇಕು. ಯಾವ ವರದಿಗಳು, ಯಾವಾಗ ಮಂಡಿಸಬೇಕು ಮತ್ತು ಅದರಲ್ಲಿನ ಅಂಶಗಳ ಬಗ್ಗೆ ವಿವರಿಸಬೇಕು. ಇಂಥ ವರದಿಗಳು, ಸ್ವತಃ ಯೋಜನೆಯ ಆಡಳಿತ ಮಂಡಳಿ ಅಗತ್ಯಗಳನ್ನು ಪ್ರತಿಬಿಂಬಿಸುತ್ತವೆ. ಹಾಗೆಯೇ ದಾನಿಗಳಿಗೆ ಬೇಕಾದ ಪ್ರಗತಿ ವರದಿಗಳನ್ನು ನೀಡುತ್ತದೆ.

ಇತರ ಎಂಎಸ್‌ಎಂ ಲೈಂಗಿಕ ಆರೋಗ್ಯ ಯೋಜನೆಗಳ ಅನುಭವದಿಂದ ಮಾಡಲಾದ ಮಧ್ಯಸ್ಥಿಕೆದಾರಕ ಟಿಪ್ಪಣಿಗಳನ್ನು ಬಳಸಿ.

ವಿನ್ಯಾಸವನ್ನು ವಿವರಿಸಿ, ಉದಾಹರಣೆಯನ್ನು ಕೆಳಗೆ ತೋರಿಸಿ

ಸಮಯ: 45 ನಿಮಿಷಗಳು

## ಉದ್ದೇಶ

ವರದಿಯ ಸ್ವರೂಪ, ಅದರ ಅಗತ್ಯ, ಅಗತ್ಯವಿರುವ ವರದಿ ಶ್ರೇಣಿ ಮತ್ತು ಅದರ ಪರಿವಿಡಿಗಳನ್ನು ಪ್ರತಿನಿಧಿಗಳು ಅರ್ಥ ಮಾಡಿಕೊಳ್ಳುವಂತೆ ಮಾಡುವುದು.

## ಮಧ್ಯಸ್ಥಿಕೆದಾರರ ಟಿಪ್ಪಣಿಗಳು

ಕ್ರಮಬದ್ಧ ಉಸ್ತುವಾರಿ ವರದಿಗಳಲ್ಲದೇ, ಕ್ರಮಬದ್ಧ ಪ್ರಗತಿ ವರದಿಗಳೂ ಸಹ ತೀರಾ ಅಗತ್ಯ. ಇದರಿಂದಾಗಿ ಯೋಜನಾ ಅಭಿವೃದ್ಧಿಯ ಮೌಲ್ಯಮಾಪನ ಮತ್ತು ಸೇವಾ ಪೂರೈಕೆ ಅನುಷ್ಠಾನಕ್ಕೆ ಯೋಜನಾ ನಿರ್ವಹಣೆಗೆ ಅನುವೂ ಮಾಡಿಕೊಡುತ್ತದೆ. ಜೊತೆಗೆ ಯೋಜನಾ ಕಾರ್ಯಕ್ರಮದಲ್ಲಿ ತಮ್ಮ ಹೂಡಿಕೆಯನ್ನು

ಮೌಲ್ಯಮಾಪನ ಮಾಡಲು ದಾನಿಗಳಿಗೆ ಅವಕಾಶ ಕಲ್ಪಿಸುತ್ತದೆ. ಇದು ಹಣಕಾಸು ಹೂಡಿಕೆ ಉತ್ತಮವಾಗಿದೆಯೇ ಅಥವಾ ಹೂಡಿಕೆ ಮೇಲಿನ ಆದಾಯ ಕಳಪೆಯಾಗಿದೆಯೇ ಎಂಬುದನ್ನು ನಿರ್ಧರಿಸಲು ದಾನಿಗಳು ಮತ್ತು ಯೋಜನಾ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ.

ಇಂಥ ವರದಿಗಳ ಮೂಲಕ ಯೋಜನೆಯ ಮುಂದುವರಿಕೆ, ರೂಪುರೇಷೆಗಳ ಬದಲವಾಣೆಗಳು ಅಥವಾ ಮುಕ್ತಾಯದ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳಬಹುದು.

ಯೋಜನಾ ವರದಿಯನ್ನು ತಯಾರಿಸಿದಾಗಲೆಲ್ಲ ಯೋಜನಾ ದಾಖಲೆ / ಪ್ರಸ್ತಾವನೆ/ ಮಂಜೂರು ಒಪ್ಪಂದದಲ್ಲಿ ಸೇರಿಸಲಾದ ಉದ್ದೇಶಗಳು ಮತ್ತು ಕಾರ್ಯ ಯೋಜನೆಗಳೊಂದಿಗೆ ಸಾಧನೆಗಳನ್ನು ತುಲನೆ ಮಾಡುವ ಅಗತ್ಯವಿದೆ.

ಈ ಮೂಲಕ, ನಿಗದಿಯಂತೆ ಯಾವ ಚಟುವಟಿಕೆಗಳು ಪ್ರಗತಿಯಲ್ಲಿವೆ ಮತ್ತು ಎಲ್ಲಿ ಕೆಲಸ ಮಂದಗತಿಯಲ್ಲಿ ಸಾಗಿದೆ ಎಂಬುದನ್ನು ಎಲ್ಲರೂ ಮೌಲ್ಯಮಾಪನ ಮಾಡಬಹುದು. ಈ ಹೋಲಿಕೆಯು ಸಾಧನೆಗಳು ಮತ್ತು ಸಮಸ್ಯೆಗಳ ನಿವಾರಣೆ ಮೇಲೆ ಗಮನವನ್ನು ಕೇಂದ್ರೀಕರಿಸುತ್ತದೆ.

★ ಪ್ರಗತಿ ವರದಿಯ ಪರಿವಿಡಿ
★ ಯೋಜನೆಯ ಹೆಸರು
★ ಅನುಷ್ಠಾನ ಸಂಸ್ಥೆ
★ ಸಮನ್ವಯ ಅಧಿಕಾರಿ
★ ವರದಿಯ ಅವಧಿ
★ ವರದಿಯ ದಿನಾಂಕ

★ ಪರಿಚಯ
★ ಯೋಜಿತ ಫಲಶೃತಿ ಸಾಧನೆ
★ ಯೋಜನೆ ರಹಿತ ಸಾಧನೆಗಳು
★ ಸಾಧಿಸದ ಫಲಿತಾಂಶ
★ ಬಳಸಲ್ಪಟ್ಟ ನಿಧಿಗಳು
★ ಮುಂದಿನ ಅವಧಿಗೆ ಯೋಜಿತ ಫಲಿತಾಂಶಗಳು
★ ಯೋಜನಾ ಅನುಷ್ಠಾನಕ್ಕೆ ತೊಡಕುಂಟು ಮಾಡಿದ ಉದ್ಭವಿತ ಮತ್ತು ಸಂಭವನೀಯ ಸಮಸ್ಯೆಗಳು
★ ಈ ಸಮಸ್ಯೆಗಳನ್ನು ಎದುರಿಸಲು ಕೈಗೊಂಡ ಕ್ರಮಗಳು
★ ಯಾವುದೇ ಸೂಕ್ತ ಹೇಳಿಕೆಗಳು

ಇಂಥ ವರದಿಗಳನ್ನು ಸಂಕ್ಷಿಪ್ತವಾಗಿ ಇಡಬೇಕು. ಸಾಮಾನ್ಯವಾಗಿ 4ರಿಂದ 5 ಪುಟಗಳು ಸಾಕು. ಯೋಜನಾ ಪ್ರಗತಿ ವರದಿಗಳನ್ನು ಸಾಮಾನ್ಯವಾಗಿ ಆರು ತಿಂಗಳ ಆಧಾರದ ಮೇಲೆ ನೀಡಲಾಗುತ್ತದೆ.

## ವಾರ್ಷಿಕ ವರದಿಗಳು

ಇದೇ ರೀತಿ ಇದು ಸಂಸ್ಥೆಯ ವಾರ್ಷಿಕ ವರದಿ. ಯೋಜನೆಯು ಸಂಸ್ಥೆಯ ಏಕ ಕಾರ್ಯಕ್ರಮವಾಗಿದ್ದಲ್ಲಿ ವಾರ್ಷಿಕ ವರದಿಯು ವಾರ್ಷಿಕ ಅಂತ್ಯದ ಪ್ರಗತಿ ವರದಿಯಾಗಿರುತ್ತದೆ.

## ಲೆಕ್ಕಪರಿಶೋಧನೆ ವರದಿ

ಇದು ಸಂಸ್ಥೆಯ ಆರ್ಥಿಕ ವರ್ಷದ ಅಂತ್ಯದಲ್ಲಿ ನೀಡುವ ವರದಿಯಾಗಿದ್ದು, ವೃತ್ತಿಪರ ಲೆಕ್ಕ

ಪರಿಶೋಧಕರಿಂದ ಯೋಜನೆ/ ಸಂಸ್ಥೆಯ ಆದಾಯ ಮತ್ತು ವೆಚ್ಚಗಳನ್ನು ತಿಳಿಸುತ್ತದೆ. ಇದು ಎಲ್ಲ ವೆಚ್ಚಗಳು ಸರಿಯಾಗಿರುವ ಬಗ್ಗೆ ಮತ್ತು ಆಯವ್ಯಯದಲ್ಲಿ ತಿಳಿಸಿರುವ ಅಂಶಗಳಿಗೆ ಅನುಗುಣವಾಗಿದ್ದು, ಇದಕ್ಕೆ ದಾನಿಗಳು ಸಮ್ಮತಿಸಬೇಕಾಗುತ್ತದೆ.

**ಇತರ ವರದಿಗಳು**

## 1. ಕ್ಷೇತ್ರದಲ್ಲಿನ ವರದಿಗಳು

ಕ್ಷೇತ್ರ ಕಾರ್ಯಕರ್ತರು ವಾರಕ್ಕೊಮ್ಮೆ ಕ್ಷೇತ್ರದಲ್ಲಿರುವವರನ್ನು ಭೇಟಿಯಾಗಿ ಹೇಳಿಕೆ ಮತ್ತು ಕ್ಷೇತ್ರಗಳ ವಿಷಯಗಳ ಬಗ್ಗೆ ಆಲಿಸುತ್ತಾರೆ.

**ವಿಷಯಗಳು**

- ★ ಕಾಂಡೋಮ್ ಬಳಕೆ
- ★ ಎಸ್‌ಟಿಐ ಮಟ್ಟ
- ★ ಸಾಮಾಜಿಕ ವಿಷಯಗಳು
- ★ ಹೊಸ ಜನ
- ★ ಎಸ್‌ಟಿಐ ಚಿಕಿತ್ಸೆ
- ★ ಮಾಸ್ತಾನ್ /ಪೊಲೀಸ್
- ★ ಈ ವರದಿ ಕ್ಷೇತ್ರ ನಿರ್ದಿಷ್ಟ

ಕ್ಷೇತ್ರ ಕಾರ್ಯಕರ್ತ ಈ ಚರ್ಚೆಯ ವಾರದ ಸಾರಂಶವನ್ನು ತಯಾರಿಸಿ ಕ್ಷೇತ್ರ ಸಮನ್ವಯಕರಿಗೆ ನೀಡುತ್ತಾನೆ.

ವರದಿ ವೇಳಾ ಪಟ್ಟಿ: ಪ್ರತಿ ಸೋಮವಾರ

ಕ್ಷೇತ್ರ ಸಮನ್ವಯ ಓದಿ, ವಿಂಗಡಿಸುವ ಬಗ್ಗೆ: ಕ್ಷೇತ್ರದ ಹೆಸರು- ಕ್ಷೇತ್ರದಲ್ಲಿನ ವರದಿಗಳ

**ವೇಳಾ ಪಟ್ಟಿ : ಮಂಗಳವಾರ**

ಪ್ರತಿ ತಿಂಗಳು: ಕ್ಷೇತ್ರ ಸಮನ್ವಯಕ ಕ್ಷೇತ್ರದವಾರದ ಮಾಸಿಕ ಸಾರಾಂಶ ಸಿದ್ಧಪಡಿಸುತ್ತಾನೆ. ಸೇರಿಸಿದ ವಿಷಯಗಳು ಮತ್ತು ಇನ್ನಾವುದೇ ಶಿಫಾರಸುಗಳೊಂದಿಗೆ ಈ ವಾರದ ವರದಿಯನ್ನು ಓದಲು ಯೋಜನಾ ಸಮನ್ವಯಕರಿಗೆ ನೀಡಲಾಗುತ್ತದೆ. ಯಾವುದೇ ಕ್ರಮಕೈಗೊಳ್ಳಲು ನಂತರ ಅವರಿಗೆ ಅಧಿಕಾರ ನೀಡಲಾಗುತ್ತದೆ.

ಈ ವರದಿಯನ್ನು ನಂತರ ಇಂಗ್ಲಿಷ್‌ಗೆ ತರ್ಜುಮೆ ಮಾಡಿ, ಕ್ಷೇತ್ರದ ಹೆಸರಿನಲ್ಲಿ ಇರಿಸಲಾಗುವುದು ಕ್ಷೇತ್ರದಲ್ಲಿನ ವರದಿಗಳು

ವರದಿ ವೇಳಾಪಟ್ಟಿ ; ವರದಿ ತಿಂಗಳ ನಂತರ ಮೊದಲ ವಾರಾಂತ್ಯ

## 2. ಕ್ಷೇತ್ರ ಕಾರ್ಯಕರ್ತರ ವರದಿಗಳು

- ★ ದೈನಿಕ ವರದಿ-ನಿರ್ದಿಷ್ಟ ಕ್ಷೇತ್ರ- ಹೆಚ್ಚುವರಿ ಮಾಹಿತಿ
- ★ ಕಳೆದ 24ಗಂಟೆಗಳಲ್ಲಿ ಗ್ರಾಹಕ ಎಷ್ಟು ಬಾರಿ ಈ ಕೆಳಗಿನವುಗಳನ್ನು ಮಾಡಿದ
    - ★ ಯಾರನ್ನಾದರೂ ಓಲೈಸಿದನೇ
    - ★ ತಾವೇ ಇತರರ ಸಂಪರ್ಕ ಬೆಳೆಸಿದರೆ
    - ★ ಎಷ್ಟು ಬಾರಿ ಗ್ರಾಹಕ ಕಾಂಡೋಮ್ ಬಳಸಿಲ್ಲ?

ಇದು ವ್ಯಕ್ತಿಯ ನಿರ್ದಿಷ್ಟತೆ

ವರದಿ ವೇಳಾ ಪಟ್ಟಿ: ಕ್ಷೇತ್ರ ಭೇಟಿ ನಂತರದ ದಿನ

* ಈ ವರದಿಗಳನ್ನು ಕ್ಯಾಲೆಂಡರ್ ತಿಂಗಳಾಂತ್ಯದವರೆಗೂ ಇಡಬೇಕು

★ ಕ್ಯಾಲೆಂಡರ್ ಮಾಸಿಕ ಅಂತ್ಯದಲ್ಲಿ ತಿಂಗಳ ಮೊದಲದಿನ - ತಿಂಗಳ ಕಡೆ ದಿನಾಂಕದವರೆಗೆ ದೈನಿಕ ಕ್ಷೇತ್ರ ವರದಿಗಳನ್ನು ಕ್ಷೇತ್ರ ಸಮನ್ವಯಕರಿಗೆ ಸಲ್ಲಿಸಬೇಕು. ಕ್ಷೇತ್ರ ಸಮನ್ವಯ ನಂತರ ಸ್ಥಳದ ಮಾಸಿಕ ಸಾರಾಂಶ ವರದಿಯನ್ನು ತಯಾರಿಸುತ್ತಾನೆ. ಇದರಲ್ಲಿ ಒಳಗೊಂಡಿರುತ್ತದೆ.

- ★ ಪ್ರಮಾಣಾತ್ಮಕ ಮಾಹಿತಿ (ಸಂಖ್ಯಾತ್ಮಕ)
- ★ ಗುಣಾತ್ಮಕ ಮಾಹಿತಿ

ಶಿಫಾರಸ್ಸುಗಳು, ವಿಷಯಗಳು ಮತ್ತು ಕ್ರಿಯೆಗಳ ಜೊತೆ ವರದಿ ವೇಳಾಪಟ್ಟಿ ವರದಿ ತಿಂಗಳ ನಂತರ ಮೊದಲ ವಾರದ ಅಂತ್ಯದಲ್ಲಿ

★ ಈ ಮಾಸಿಕ ಸಾರಾಂಶ ವರದಿಯನ್ನು ಯೋಜನಾ ಸಮನ್ವಯಕರಿಗೆ ಸಲ್ಲಿಸಲಾಗುತ್ತದೆ. ಅವರು ಇದನ್ನ ಓದಿ ಸಾರಾಂಶವನ್ನು ಕ್ಷೇತ್ರ ವರದಿಗೆ ಸೇರಿಸಬೇಕಾದ ಕ್ರಿಯಾ ವರದಿಯನ್ನು ಸಲ್ಲಿಸುತ್ತಾರೆ.

★ ಈ ವರದಿಯನ್ನು ಯೋಜನಾ ಸಮನ್ವಯ ಓದಿದ ನಂತರ ಇದನ್ನು ತರ್ಜುಮೆಗಾಗಿ ಆಡಳಿತಗಾರರಿಗೆ ಸಲ್ಲಿಸಲಾಗುತ್ತದೆ. ಮಾಸಿಕ ವರದಿ

## 3. ಸಾಮಾಜಿಕ ಸಮೂಹ ವರದಿಗಳು

- ★ ಸಮೂಹ ಸಭೆ ಬಳಿಕ ಸಮೂಹ ಮಧ್ಯಸ್ಥಿಕೆದಾರರು ವರದಿ ಬರೆಯುತ್ತಾರೆ
- ★ ಸಭೆಗೆ ಹಾಜರಾದವರು ಸಂಖ್ಯೆ
- ★ ಚರ್ಚಿಸಲ್ಪಟ್ಟ ವಿಷಯಗಳು
- ★ ತೀರ್ಮಾನಗಳು/ ಶಿಫಾರಸುಗಳು
- ★ ವರದಿಯನ್ನು ಓದಲು ಯೋಜನಾ ಸಮನ್ವಯಕರಿಗೆ ನೀಡಲಾಗುತ್ತದೆ. ಇದಾದ ಬಳಿಕ ಇದನ್ನು ತರ್ಜುಮೆ ಮಾಡಿ ಕ್ಷೇತ್ರದ ಹೆಸರಿನಲ್ಲಿ ಇಡಲಾಗುತ್ತದೆ. ಸಾಮಾಜಿಕ ಸಭೆ ವರದಿಗಳು

## 4. ಕಚೇರಿ ವರದಿಗಳು

- ★ ಯೋಜನಾ ಸಮನ್ವಯಕರಿಗಾಗಿ ಆಡಳಿತಗಾರ ಮಾಸಿಕ ವೆಚ್ಚ ವರದಿಯನ್ನು ಸಿದ್ಧಪಡಿಸುತ್ತಾನೆ
- ★ ಮಾಸಿಕ ಕಚೇರಿ ವರದಿಗಳಿಗಾಗಿ ಸಿದ್ಧಪಡಿಸುವ ವಿಷಯಗಳು ಹೀಗಿವೆ.
- ★ ಸ್ವೀಕರಿಸಿದ ಪತ್ರಗಳು/ ಯಾರಿಂದ/ಏನು
- ★ ಸ್ವೀಕರಿಸಿದ ದೂರವಾಣಿ ಕರೆಗಳು/ ಯಾರಿಂದ /ಏನು
- ★ ಎಸ್‌ಟಿಐ ರೋಗಿಗಳು: ಎಷ್ಟು/ ಯಾವ ಸ್ಥಳದಿಂದ/ ಸಮಸ್ಯೆಗಳು
- ★ ಸಾಮಾಜಿಕ ಸಮೂಹ ವರದಿಗಳು/ ಎಷ್ಟು ಮಂದಿ ಹಾಜರಿದ್ದರು/ಯಾವ ವಿಷಯ ಚರ್ಚಿತವಾಯಿತು
- ★ ತರಗತಿಗಳು/ ಹಾಜರಾತಿ ದಾಖಲೆಗಳು
- ★ ವರದಿ ವೇಳಾಪಟ್ಟಿ: ವರದಿ ತಿಂಗಳ ನಂತರ ಮೊದಲ ವಾರಾಂತ್ಯ

## 5. ಕ್ಲಿನಿಕ್ ವರದಿಗಳು

ಕ್ಲಿನಿಕ್ ಕಲಾಪ ವರದಿಗಳಿಗೆ ನಿಯೋಜಿಸಲ್ಪಟ್ಟ ಆಡಳಿತಗಾರ, ಪ್ರತಿ ಕಲಾಪದ ನಂತರ ವೈದ್ಯರಿಂದ ಚೀಟಿಗಳನ್ನು ಸಂಗ್ರಹಿಸಿ ಸಾರಾಂಶ ಸಿದ್ದಪಡಿಸುತ್ತಾನೆ

- ★ ಕ್ಷೇತ್ರ

★ ಗ್ರಾಹಕನ ಸಂಖ್ಯೆ
★ ಎಸ್‌ಟಿಐಗಳು
★ ಇತರ ಆರೋಗ್ಯ ವಿಷಯಗಳು
★ ಕಲಾಪದ ಎಸ್‌ಟಿಐ ಸೇವಾ ವರದಿ
★ ಮಾಸಿಕ ಎಸ್‌ಟಿಐ ಸೇವಾ ವರದಿ ನಿರ್ದಿಷ್ಟ ಕ್ಷೇತ್ರ
★ ಸಾರಾಂಶ
★ ವರದಿ ವೇಳಾಪಟ್ಟಿ ಮಾಸಿಕ ವರಿದ ನಂತರ ಮೊದಲ ವಾರಾಂತ್ಯ

## 6.ಯೋಜನಾ ವರದಿಗಳು

ಯೋಜನಾ ಸಮನ್ವಯ ಮಾಸಿಕ ಯೋಜನಾ ವರದಿ ಸಿದ್ಧಪಡಿಸುತ್ತಾನೆ
ಇದರಲ್ಲಿ

★ ಕಛೇರಿ ವರದಿ
★ ವೆಚ್ಚ ವರದಿ
★ ಕ್ಷೇತ್ರ ವರದಿ
★ ಕ್ಲಿನಿಕ್ ವರದಿ

ವರದಿ ವೇಳಾಪಟ್ಟಿ: ಮಾಸಿಕ ವರದಿ ಬಳಿಕ ಎರಡನೇ ವಾರಾಂತ್ಯ

1. ಕ್ಷೇತ್ರದ ನಿರ್ದಿಷ್ಟ ವರದಿಗಳು

| | |
|---|---|
| ★ ಕ್ಷೇತ್ರದಲ್ಲಿರುವವರು: | |
| ★ ವಾರದ (ಸ್ಥಳದಲ್ಲಿನ) ಸ್ಥಳೀಯ ವರದಿಗಳು | ಕ್ಷೇತ್ರ ಕಾರ್ಯಕರ್ತರು |
| ★ ಮಾಸಿಕ (ಸ್ಥಳದಲ್ಲಿನ) ವರದಿಗಳು | ಕ್ಷೇತ್ರ ಸಮನ್ವಯಕರು |
| ★ ಯೋಜನಾ ಸಮನ್ವಯಕರಿಂದ ಓದುವಿಕೆ | ಆಡಳಿತಾಗರರ ತರ್ಜುಮೆ |
| ★ ಕ್ಷೇತ್ರ ಕಾರ್ಯಕರ್ತರು | |
|   ★ ದೈನಿಕ ಕ್ಷೇತ್ರ ಕಾರ್ಯ ವರದಿ | ಕ್ಷೇತ್ರ ಕಾರ್ಯಕರ್ತರು |
|   ★ ಮಾಸಿಕ ಕ್ಷೇತ್ರ ಕಾರ್ಯ ಸಾರಾಂಶ | ಕ್ಷೇತ್ರ ಸಮನ್ವಯಕರು |
|   ★ ಯೋಜನಾ ಸಮನ್ವಯಕರಿಂದ ಓದುವಿಕೆ | ಆಡಳಿತಗಾರ ತರ್ಜುಮೆ |
|   ★ ಹೆಚ್ಚುವರಿ ಹೇಳಿಕೆಗಳನ್ನು ಒದಗಿಸುವಿಕೆ | ಆಡಳಿತಗಾರರ ತರ್ಜುಮೆ |
| ★ ಎಸ್‌ಟಿಐ ಸೇವೆ: | |
|   ★ ಕಲಾಪ ವರದಿ | ಆಡಳಿತಗಾರ |
|   ★ ಯೋಜನಾ ಸಮನ್ವಯಕರಿಂದ ಮಾಸಿಕ ವರದಿ | ಆಡಳಿತಗಾರನ ವಿಚಾರಣೆ |
|   ★ ಹೆಚ್ಚುವರಿ ಹೇಳಿಕೆಗಳನ್ನು ಒದಗಿಸುವಿಕೆ | ಆಡಳಿತಗಾರರ ತರ್ಜುಮೆ |

2. ಪ್ರತಿ ಕಲಾಪಕ್ಕೆ ಸಾಮಾಜಿಕ ಬೆಂಬಲ, ಸಮೂಹಗಳ ಮಧ್ಯಸ್ಥಿಕೆ

3. ಮಾಸಿಕ ಕಚೇರಿ ವರದಿಗಳು:

★ ವೆಚ್ಚಗಳು
★ ಡ್ರಾಪ್-ಇನ್
★ ಹಾಟ್‌ಲೈನ್

- ★ ಎಸ್‌ಟಿಐ ಸೇವೆ
- ★ ಸಾಮಾಜಿಕ ಸಮೂಹಗಳು
- ★ ತರಗತಿಗಳು

4. ಯೋಜನಾ ವರದಿಗಳು

| | |
|---|---|
| ★ ಮಾಸಿಕ ಯೋಜನಾ ವರದಿ | ಯೋಜನಾ ವ್ಯವಸ್ಥಾಪಕ |
| ★ ತರ್ಜುಮೆ | ಆಡಳಿತಗಾರ |
| ★ 6ತಿಂಗಳ ವರದಿ | ಯೋಜನಾ ವ್ಯವಸ್ಥಾಪಕ |

ಮಿತ್ರುಡು ಮಾಸಿಕ ಪ್ರಗತಿ ವರದಿಯ ಉದಾಹರಣೆ ಒದಗಿಸಿ

**ಮಧ್ಯಾಹ್ನ 12.45 ಹಣಕಾಸು ನಿರ್ವಹಣೆ ಮತ್ತು ವರದಿಗಾರಿಕೆ**

**ಮಧ್ಯಸ್ಥಿಕೆದಾರರ ಮಂಡನೆ ಮತ್ತು ಸಮೂರ್ಹ ಚರ್ಚೆ**

ದಾನಿಯಿಂದ ಮತ್ತು/ ಅಥವಾ ಯೋಜನೆ ಆಡಳಿತ ಮಂಡಳಿಯಿಂದ ಸಮ್ಮತಿಸಲ್ಪಟ್ಟ ಯೋಜನಾ ಆಯವ್ಯಯವು ಯೋಜನೆಯ ಹಣಕಾಸು ನಿರ್ವಹಣೆಗೆ ತಳಹದಿ

ಯೋಜನಾ ವೆಚ್ಚಗಳ ಮೇಲೆ ಪರಿಣಾಮಕಾರಿ ಹಣಕಾಸು ಉಸ್ತುವಾರಿ ಮತ್ತು ದಾಖಲೆ ನಿರ್ವಹಣೆ ಮಾಡುವುದು ತುಂಬಾ ಮುಖ್ಯ. ಈ ರೀತಿ ಮಾಡುವುದರಿಂದ ಸಮ್ಮತಿಸಲ್ಪಟ್ಟ ಆಯವ್ಯಯಕ್ಕೆ ಅನುಗುಣವಾಗಿ ವೆಚ್ಚಗಳನ್ನು ನಿವಣಿಸಲು ಸಾಧ್ಯವಾಗುತ್ತದೆ ಮತ್ತು ಪ್ರಗತಿಗೆ ಸಂಬಂಧಪಟ್ಟಂತೆ ವೆಚ್ಚಗಳನ್ನು ಉಸ್ತುವಾರಿ ಮಾಡಲು ಸಹಕಾರಿಯಾಗುತ್ತದೆ. ಅಗತ್ಯವಾಗಿರುವ ಹೆಚ್ಚುವರಿ ಹಣ ಯಾವ ರೀತಿ ಬರುತ್ತದೆಂಬ ಬಗ್ಗೆ ಅಂಕಿಅಂಶ ನೀಡಬೇಕು.

ಆಯವ್ಯಯ ರೇಖೆಯು ಆಯವ್ಯಕ್ಕಿಂತ ಮೀರಬಾರದು ಎಂಬುದು ಏಕೆ ಮುಖ್ಯ ಎಂಬುದನ್ನು ವಿವರಿಸಿ ವೆಚ್ಚಗಳನ್ನು ಹೇಗೆ ನಿಭಾಯಿಸುತ್ತಾರೆ ಎಂಬ ಬಗ್ಗೆ ಪ್ರತಿನಿಧಿಗಳಿಗೆ ಕೇಳಿ ಪರಾಮರ್ಶೆ ಮತ್ತು ಟೀಕೆ

ಮಾಸಿಕ ಹಣಕಾಸು ವರದಿ ಮತ್ತು ಅದರ ನಕ್ಷೆ ಬಗ್ಗೆ ಚರ್ಚಿಸಿ ಎಲ್ಲ ಪ್ರಮುಖ ಅಂಶಗಳನ್ನು ಪಟ್ಟಿಮಾಡಿ ಅದನ್ನು ಪರಾಮರ್ಶಿಸಿ ಪ್ರತಿನಿಧಿಗಳಿಂದ ಮಾಹಿತಿ ಕೇಳಿ

ಸಮಯ: 45ನಿಮಿಷಗಳು

## ಉದ್ದೇಶ

ಪರಿಣಾಮಕಾರಿ ಹಣಕಾಸು ನಿರ್ವಹಣಾ ವ್ಯವಸ್ಥೆ ಮತ್ತು ವರದಿ ತಂತ್ರಗಾರಿಕೆಯ ಅಗತ್ಯದ ಬಗ್ಗೆ ಪ್ರತಿನಿಧಿಗಳಿಗೆ ಸ್ಪಷ್ಟವಾಗಿ ಅರ್ಥವಾಗುವಂತೆ ಅನುವು ಮಾಡಿಕೊಡುವುದು.

ಮಧ್ಯಸ್ಥಿಕೆದಾರರ ಟಿಪ್ಪಣಿಗಳು

ಮಂಜೂರಾದ ಆಯವ್ಯಯದಲ್ಲಿ ತೋರಿಸಲಾದ ವೆಚ್ಚಗಳೊಂದಿಗೆ ಯೋಜನೆಯ ವಾಸ್ತವ ವೆಚ್ಚದೊಂದಿಗೆ ತುಲನೆ ಮಾಡುವುದು ತೀರಾ ಮುಖ್ಯ. ಇದು ವೆಚ್ಚಗಳ ಮೇಲೆ ನಿಗಾ ವಹಿಸಲು ಸಹಾಯ ಮಾಡುವ ಜೊತೆಗೆ ಹಣಕಾಸು ಸಮಸ್ಯೆಗಳು ಎಲ್ಲಿ ಮತ್ತು ಹೇಗೆ ಉದ್ಭವವಾಗುತ್ತದೆ ಎಂಬ ಬಗ್ಗೆ ಮುನ್ಸೂಚನೆ ನೀಡುತ್ತದೆ. ಹಣಕಾಸು ಒದಗಿಸುವ ಸಂಸ್ಥೆಗೆ ನಿಯತಕಾಲಿಕ ಹಣಕಾಸು ವರದಿಗಳು ಬೇಕಾಗುತ್ತದೆ.

ಸುಲಭ ಕರಾರುವಕ್ಕಾದ ಮತ್ತು ಅನುಕೂಲಕರ ಆರ್ಥಿಕ ಉಸ್ತುವಾರಿಗೆ ಈ ಕೆಳಕಂಡ ಸರಳ ಮಾರ್ಗದರ್ಶನ ನೀಡಲಾಗಿದೆ.

- ★ ಪ್ರತಿ ವೆಚ್ಚದ ವಿವರ:
- ★ ಪ್ರತಿ ವೆಚ್ಚದ ರಶೀದಿ ಪಡೆಯಬೇಕು

★ ರಶೀದಿ ಸಾಧ್ಯವಾಗದ ಕಡೆ, ಸಣ್ಣ ವಸ್ತುಗಳಿಗೆ ಸ್ವ-ಲಿಖಿತ ರಶೀದಿ ಇಡಬೇಕು

★ ವೆಚ್ಚಕ್ಕೆ ಸಂಬಂಧಿಸಿದಂತೆ ರದ್ದಾದ ಚೆಕ್‌ಗಳು, ಬಿಲ್ಲುಗಳ ಪ್ರತಿ, ನೋಕರರ ವೇಳಾ ಪಟ್ಟಿಗಳು ಮತ್ತು ಇತರ ಯಾವುದೇ ದಾಖಲೆಗಳನ್ನು ಇಡಬೇಕು.

★ ಪ್ರತಿ ವೆಚ್ಚದ ವಿಭಾಗೀಕರಣ:

ಯೋಜನಾ ವೆಚ್ಚವು ಸಮ್ಮತಿಸಿದ ವೆಚ್ಚಗಳ ವಿಭಾಗಗಳನ್ನು ಹೊಂದಿರುತ್ತದೆ. ಇವುಗಳನ್ನು ರೇಖೆಯಲ್ಲಿನ ವಸ್ತುಗಳೆಂದು ಕರೆಯಲಾಗುತ್ತದೆ. ಪ್ರತಿ ವೆಚ್ಚದ ಹಣವನ್ನು ಸಮ್ಮತಿಸಿದ ವಿಭಾಗವೊಂದರಿಂದ ಪಡೆಯಲಾಗುತ್ತದೆ. ಆಯವ್ಯಯ ವೆಚ್ಚ ವಿಭಾಗದೊಂದಿಗೆ ಪ್ರತಿ ರಶೀದಿಯ ಸಂಖ್ಯೆಯನ್ನು ಬರೆಯುವುದರಿಂದ ಪ್ರಯೋಜನಕಾರಿ. ಪ್ರತಿ ವೆಚ್ಚ ವಿಭಾಗಕ್ಕೆ ಪ್ರತ್ಯೇಕ ಕಡತವನ್ನು ಇಡುವುದು ಉಪಯುಕ್ತಕಾರಿ ಸೂಕ್ತ ಕಡತದಲ್ಲಿ ಆಯಾ ವಿಭಾಗದಲ್ಲಿ ಸೇರಿಸಬೇಕಾದ ಎಲ್ಲ ರಶೀದಿಗಳನ್ನು ಕ್ರಮಬದ್ಧವಾಗಿ ಇಡಬೇಕು.

ವೇತನ ವೆಚ್ಚಕ್ಕೆ ಸಂಬಂಧಿಸಿದಂತೆ ವೇತನ ರಶೀದಿಯ ಪ್ರತಿಯನ್ನು ಸೂಕ್ತ ಕಡತದಲ್ಲಿ ಇಡಬೇಕು ಅಥವಾ ವೇತನ ಪಡೆದ ನಂತರ ಲೆಡ್ಜರ್ ಪುಸ್ತಕದಲ್ಲಿ ಸಿಬ್ಬಂದಿಯ ಸಹಿ ಪಡೆಯಬೇಕು.

ಸೂಚನೆ: ಕೆಲವು ಸಂಸ್ಥೆಗಳಲ್ಲಿ ಎರಡು ವಿಭಾಗದ ಸಿಬ್ಬಂದಿ ಇರುತ್ತಾರೆ. ಆದ್ದರಿಂದ ಎರಡು ಪ್ರತ್ಯೇಕ ಕಡತಗಳ ಅಗತ್ಯವಿರುತ್ತದೆ.

ಅವುಗಳೆಂದರೆ

★ ಆಡಳಿತ ಮತ್ತು ನಿರ್ಮಾಣ ಸಿಬ್ಬಂದಿ

★ ಯೋಜನಾ ಸಿಬ್ಬಂದಿ

★ ಲೆಕ್ಕದ ದಿನಾಂಕವನ್ನು ಇಡಬೇಕು ಸೂಕ್ತ ಸಿಬ್ಬಂದಿ ವ್ಯಕ್ತಿಯು(ಸಾಮನ್ಯವಾಗಿ ಲೆಕ್ಕಿಗ ಅಥವಾ ಕಚೇರಿ ಆಡಳಿತಗಾರ)ವೆಚ್ಚದ ಸವಿವರವನ್ನು ನಿರ್ವಹಿಸಬೇಕಾದದು ಅಗತ್ಯ. ಇದನ್ನು ಮಾಸಿಕ ಆಧಾರದಲ್ಲಿ ನಡೆಸಲಾಗುತ್ತದೆ. ಇದನ್ನು ಬಳಿಕ ಮಾಸಿಕ ಆಯವ್ಯಯದೊಂದಿಗೆ ತುಲನೆ ಮಾಡಲಾಗುತ್ತದೆ.

ಈ ರೀತಿ, ಚಟುವಟಿಕೆಗಳ ಯಶಸ್ವಿ ಮುಕ್ತಾಯಕ್ಕಾಗಿ ನಿರ್ದಿಷ್ಟ ವೆಚ್ಚಗಳಿಗೆ ಹೆಚ್ಚಿನ ಹಣ ವೆಚ್ಚವಾಗುವ ಸಾಧ್ಯತೆ ಇದ್ದರೆ, ಆಡಳಿತ ಮಂಡಳಿ ಉತ್ತಮ ಆಲೋಚನೆ ಹೊಂದುವುದು ಮುಖ್ಯ.

ಮಧ್ಯಾಹ್ನ 1.30 ಭೋಜನ

ಮಧ್ಯಾಹ್ನ 2.30 ಯೋಜನಾ ರೂಪರೇಷೆ ಅಭಿವೃದ್ಧಿ

ಮಧ್ಯಸ್ಥಿಕೆದಾರರ ಮಂಡನೆ ಮತ್ತು ಸಮೂಹ ಚರ್ಚೆ

ಯೋಜನಾ ರೂಪುರೇಷೆ ಅಭಿವೃದ್ಧಿ ಎಂದರೇನು ವಿವರಿಸಿ ಇದರ ಅಭಿವೃದ್ಧಿಯಿಂದ ಯೋಜನೆಗೆ ಏಕೆ ತುಂಬಾ ಮುಖ್ಯ ಎಂಬುದನ್ನು ತಿಳಿಸಿ ಈ ಕೆಳಗೆ ನೀಡಿರುವ ಕೋಷ್ಟಕ ಅಂಕಿ-ಅಂಶಗಳನ್ನು ಬಳಸಿ.

ಈಗಾಗಲೇ ಅಭಿವೃದ್ಧಿಗೊಳಿಸಲಾದ ಗುರಿ, ಉದ್ದೇಶ, ಫಲಿತಾಂಶ, ಚಟುವಟಿಕೆಗಳು ಮತ್ತು ಸೂಚನೆಗಳನ್ನು ಬಳಸಿ ಪ್ರತಿನಿಧಿಗಳೊಂದಿಗೆ ಸಂಭವನೀಯ ಯೋಜನಾ ರೂಪುರೇಷೆಯನ್ನು ರಚಿಸಿ.

ಸಮಯ : 75 ನಿಮಿಷಗಳು

## ಉದ್ದೇಶ

ಯೋಜನಾ ರೂಪುರೇಷೆಯ ಪರಿಕಲ್ಪನೆ ಮತ್ತು ಅದನ್ನ ಯಾವುದಕ್ಕೆ ಬಳಸಲಾಗುತ್ತದೆ ಎಂಬುದನ್ನು ಪ್ರತಿನಿಧಿಗಳು ಅರ್ಥ ಮಾಡಿಕೊಳ್ಳುವಂತೆ ಮಾಡುವುದು.

ಉದಾಹರಣೆಗೆ 'ನಿರ್ಮಾಣ' ಎಂಬ ಪದವು ಚಟುವಟಿಕೆಯನ್ನು ವ್ಯಾಖ್ಯಾನಿಸಲು ಬಳಸಿದರೆ, 'ನಿರ್ಮಾಣವಾಗಿದೆ' ಎಂಬುದನ್ನು ಭವಿಷ್ಯದಲ್ಲಿನ ಗುರಿಯನ್ನು ಸೂಚಿಸುತ್ತದೆ.

**ನೋಟ**

**ಮೊದಲ ಅಂಕಣ: ಸಾರಾಂಶ ಅಥವಾ ನಿರೂಪಣೆ**

| | |
|---|---|
| ಗುರಿ | ಉದ್ದೇಶವು ಯೋಜನೆಗಿಂತ ಮಿಗಿಲಾಗಿರಬೇಕು ಇತರ ಯೋಜನೆಗಳು ಗುರಿ ಸಾಧನೆಗೆ ನೆರವಾಗಬೇಕು |
| ಉದ್ದೇಶ | ಯೋಜನೆ ಅನುಷ್ಠಾನದ ಮೂಲಕ ಉದ್ದೇಶ ಈಡೇರಬೇಕು ಯೋಜನೆಯ ಅನುಕೂಲಗಳು ಫಲಾನುಭವಿಗಳಿಗೆ ಲಭಿಸುವ ಗುರಿ ಹೊಂದಿರಬೇಕು |
| ಫಲಿತಾಂಶಗಳು | ಕೈಗೊಂಡ ಚಟುವಟಿಕೆಗಳ ಫಲಶ್ರುತಿಯಿಂದಾಗಿ ಯೋಜನೆಯ ತ್ವರಿತ ಉದ್ದೇಶಗಳನ್ನು ಸಾಧಿಸಲು ಸಾಧ್ಯ |
| ಚಟುವಟಿಕೆಗಳು | ಫಲಿತಾಂಶಗಳ ಸಾಧನೆಗೆ ಕೈಗೊಳ್ಳಬೇಕಾದ ಕ್ರಮಗಳು |
| ದ್ವಿತೀಯ ಅಂಕಣ | ಪರಿಶೀಲನಾತ್ಮಕ ಸೂಚನೆಗಳು |

ಈ ಅಂಕಣದಲ್ಲಿ ಗುರಿ, ಉದ್ದೇಶ ಮತ್ತು ಫಲಿತಾಂಶಗಳನ್ನು ಪ್ರಮಾಣ, ಗುಣಮಟ್ಟ ಮತ್ತು ಕಾಲದ ಮೂಲಕ ವ್ಯಾಖ್ಯಾನಿಸಬಹುದು.

ಚಟುವಟಿಕೆಗಳ ಮಟ್ಟವನ್ನು ವೆಚ್ಚ ಮತ್ತು ಸಂಪನ್ಮೂಲಗಳಲ್ಲಿ ಎರಡನೇ ಅಂಕಣದ ನಾಲ್ಕನೇ ಸರಣಿಯಲ್ಲಿ ತೋರಿಸಲಾಗಿದೆ. ಫಲಿತಾಂಶ ಮತ್ತು ಚಟುವಟಿಕೆಗಳ ಸೂಚನೆಗಳನ್ನು ಒಟ್ಟಿಗೆ ತೆಗೆದುಕೊಂಡರೆ ವೆಚ್ಚ ಅನುಕೂಲ ವಿಶ್ಲೇಷಣೆಗೆ ಆಧಾರ ಕಲ್ಪಿಸುತ್ತದೆ.

ಮಧ್ಯಾಹ್ನ 3.45 ಯೋಜನಾ ಪ್ರಸ್ತಾವನೆ ಅಭಿವೃದ್ಧಿ

ಮಧ್ಯಸ್ಥಿಕೆದಾರರ ಮಂಡನೆ ಮತ್ತು ಸಮೂಹ ಚರ್ಚೆ

ಯೋಜನೆಗೆ ಬೆಂಬಲ ಕೋರಲು, ಸಂಭವನೀಯ ದಾನಗಳಿಗಾಗಿ ಯೋಜನಾ ಪ್ರಸ್ತಾವನೆ ಅಭಿವೃದ್ಧಿ ಅಗತ್ಯ ಎಂಬುದನ್ನು ಪ್ರತಿನಿಧಿಗಳಿಗೆ ವಿವರಿಸಬೇಕು.

ಪ್ರಸ್ತಾವನೆಯು ಎಚ್ಚರಿಕೆಯ ಯೋಜನೆಯ ಫಲಿತಾಂಶಗಳನ್ನು ಪ್ರತಿಬಿಂಬಿಸುತ್ತದೆ ಮತ್ತು ಸಂಭವನೀಯ ದಾನಿಗೆ (ಹಾಗೆಯೇ ಅನುಷ್ಠಾನ ಸಂಸ್ಥೆಗೆ) ಉದ್ದೇಶಿಕ ಚಟುವಟಿಕೆಗಳು, ನಿರೀಕ್ಷಿತ ಫಲಿತಾಂಶಗಳು ಮತ್ತು ಇಂಥ ಚಟುವಟಿಕೆಗಳ ವೆಚ್ಚದ ವಿವರಗಳನ್ನು ಒದಗಿಸುತ್ತದೆ. ಇದು ವೆಚ್ಚ ಉಪಯೋಗಿ ವಿಶ್ಲೇಷಣೆಯ ಸ್ವರೂಪ.

ಇಂಥ ಪ್ರಸ್ತಾವನೆಯು ದಾನಿಗಳ ರೂಪುರೇಷೆ ಮತ್ತು ಅದರಲ್ಲಿನ ಅಂಶಗಳ ಅಗತ್ಯತೆಗೆ ಅನುಗುಣವಾಗಿರಬೇಕು. ಹಾಗೆಯೇ ಅದು ದಾನಿಯ ಹಣಕಾಸು ಅಗತ್ಯತೆಯ ಪರಿಧಿಯೊಳಗಿರಬೇಕು.

ಇಂಥ ಯೋಜನಾ ಪ್ರಸ್ತಾವನೆಯ ವಿವಿಧ ಅಂಶಗಳನ್ನು ಗುರುತಿಸಿ, ಅದನ್ನು ಪಟ್ಟಿ ಮಾಡಬೇಕು.

ಈ ಕೆಳಕಂಡ ಮಧ್ಯಸ್ಥಿಕೆದಾರರ ಟಿಪ್ಪಣಿಗಳನ್ನು ಬಳಸಿ, ಪ್ರತಿ ಅಂಶಗಳನ್ನು ವಿವರಿಸಿ, ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು.

ಸಮಯ 30 ನಿಮಿಷಗಳು

**ಸಂಜೆ 4.15 ವಿರಾಮ**

**ಸಂಜೆ 4.30 ಯೋಜನಾ ಪ್ರಸ್ತಾವನೆ ಅಭಿವೃದ್ಧಿ ಮುಂದುವರಿಕೆ ಮಧ್ಯಸ್ಥಿಕೆದಾರರ ಮಂಡನೆ ಮತ್ತು ಸಮೂಹ ಚರ್ಚೆ**

ಕಾರ್ಯಾಗಾರದಲ್ಲಿ ಎಲ್ಲ ವಿಭಿನ್ನ ಅಂಶಗಳ ಬಗ್ಗೆ ಚರ್ಚಿಸಲಾಗಿದೆ ಎಂಬ ಬಗ್ಗೆ ಸಲಹೆ ನೀಡಿ ಈ ಅಂಶಗಳನ್ನು ಗುರುತಿಸಲಾದ ಹಿಂದಿನ ಕಾಗದಗಳಿಂದ ಈ ಮಾಹಿತಿ ಸಂಗ್ರಹಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು.

ಯೋಜನಾ ಪ್ರಸ್ತಾವನೆಯ ಗುರುತಿಸುವಿಕೆಗಾಗಿ ನಕ್ಷೆಯನ್ನು ರೂಪಿಸುವಂತೆ ಪ್ರತಿನಿಧಿಗಳಿಗೆ ತಿಳಿಸಬೇಕು

ಯೋಜನೆ ಪ್ರಸ್ತಾವನೆಗೆ ಅಗತ್ಯವಾದ ಅಂಶಗಳ ಬಗ್ಗೆ ಚರ್ಚಿಸುಬೇಕು. ಯಾವುದೇ ಅಂತರಗಳಿದ್ದರೆ ಗುರುತಿಸಬೇಕು. ಇದನ್ನು ಪ್ರತಿನಿಧಿಗಳಿಗೆ ವಿವರಿಸಬೇಕು

ಪ್ರಸ್ತಾಪಿಸಲ್ಪಟ್ಟ ಯಾವುದೇ ಅಂಶಗಳನ್ನು ಪಟ್ಟಿ ಮಾಡಬೇಕು. ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು

ಸಮಯ: 60 ನಿಮಿಷಗಳು

## ಉದ್ದೇಶ

ಯೋಜನಾ ಪ್ರಸ್ತಾವನೆಯ ಅಭಿವೃದ್ಧಿ ಪ್ರಕ್ರಿಯೆಯನ್ನು ಪ್ರತಿನಿಧಿಗಳು ಅರ್ಥ ಮಾಡಿಕೊಳ್ಳುವಂತೆ ಅನುವು ಮಾಡಿಕೊಡುವುದು ಮತ್ತು ಯೋಜನಾ ಪ್ರಸ್ತಾವದ ಕರಡನ್ನು ಸಿದ್ಧಪಡಿಸುವುದು.

## ಮಧ್ಯಸ್ಥಿಕೆದಾರರ ಟಿಪ್ಪಣಿಗಳು

ಪ್ರಸ್ತಾವನೆ ಪರಿವಿಡಿ ಮತ್ತು ರೂಪುರೇಷೆ ಬಗ್ಗೆ ಅನೇಕ ದಾನಿಗಳು ತಮ್ಮದೇ ಆದ ಮಾರ್ಗದರ್ಶನಗಳನ್ನು ಹೊಂದಿರುತ್ತಾರೆ. ಇಂಥ ಮಾರ್ಗಸೂಚಿಗಳು ಉದ್ಭವಿಸದಿದ್ದಲ್ಲಿ ಈ ಕೆಳಕಂಡವುಗಳನ್ನು ಬಳಸಬಹುದು.

ಮೊದಲ ಪುಟದಲ್ಲಿ

★ ಅನುಷ್ಠಾನ ಸಂಸ್ಥೆ
★ ಯೋಜನೆಯ ಶೀರ್ಷಿಕೆ
★ ಯೋಜನೆಯ ಸ್ಥಳ
★ ಯೋಜನೆಯ ಅವಧಿ
★ ದಾನಿ ಸಂಸ್ಥೆಯಿಂದ ಕೇಳಲಾದ ಮೊತ್ತ
★ ಸಲ್ಲಿಕೆ ದಿನಾಂಕ
★ ಸಂಪರ್ಕಿಸಬೇಕಾದ ವ್ಯಕ್ತಿ

## ಯೋಜನಾ ಸಾರಾಂಶ

ಯೋಜನೆಯ ಬಗ್ಗೆ ಅದರ ಅಗತ್ಯದ ಬಗ್ಗೆ ಮತ್ತು ಅದು ಸಾಧಿಸಬೇಕಾದ ಗುರಿ ಬಗ್ಗೆ ಸಂಕ್ಷಿಪ್ತ ಸಾರಾಂಶ (ಒಂದು ಪುಟ ಮೀರಬಾರದು)

★ ಉದ್ದೇಶ
★ ಮಾಹಿತಿ
★ ಯಾವುದೇ ಪಾಲುದಾರಿಕೆ ಸಂಸ್ಥೆಯ ಪಾತ್ರ
★ ಕಾಲಾವಧಿ
★ ನಿರೀಕ್ಷಿತ ಆರಂಭ ದಿನಾಂಕ

## ಉದ್ದೇಶ

★ ಗುರಿಯ ಬಗ್ಗೆ ಹೇಳಿಕೆ(ಉದ್ದೇಶ)
★ ಉದ್ದೇಶಗಳು (ನಿರೀಕ್ಷಿತ ಫಲಿತಾಂಶ)
★ ನಿರೀಕ್ಷಿತ ಫಲಶೃತಿಗಳು

## ವೆಚ್ಚ ಸಾರಾಂಶ

## ಹಿನ್ನೆಲೆ

ಇದು ಯೋಜನೆಯ ಹಿನ್ನೆಲೆಯ ಸಾರಾಂಶ ಯೋಜನಾ ಪರಿಕಲ್ಪನೆ ಸೃಷ್ಟಿಗೆ ಪೂರಕವಾದ ವಿಚಾರಗಳು ಯಾವುವು. ಯಾವುದೇ ಅಧ್ಯಯನದಿಂದ ಸಾರಾಂಶ ಮಾಹಿತಿ ಸೇರ್ಪಡೆ

ತಾಂತ್ರಿಕ ಸಾಧನಾ ಶ್ರೇಣಿ

ಇದು ಯೋಜನೆಯ ಸಮಸ್ಯೆಯನ್ನು ಬಗೆಹರಿಸುವ ವಿವರವನ್ನು ಒಳಗೊಂಡಿರಬೇಕು. ಇದಕ್ಕೆ ಆಯ್ಕೆ ಮಾಡಿದ ವಿಷಯಗಳು ಮತ್ತು ಉದ್ದೇಶಿತ ಫಲಿತಾಂಶವನ್ನು ತಿಳಿಸಬೇಕು (ಸಮಸ್ಯೆ ಇತ್ಯರ್ಥಕ್ಕೆ ಪರ್ಯಾಯ ಅಥವಾ ಅಸ್ತಿತ್ವದಲ್ಲಿನ ರೂಪುರೇಷೆಗೆ ಸಂಬಂಧಪಟ್ಟಂತೆ) ಯೋಜನೆ ಸ್ಥಳೀಯ ಮಾಲೀಕತ್ವದ ಪಾತ್ರದ ಬಗ್ಗೆಯೂ ವಿವರಿಸಬೇಕು. ವೈಯಕ್ತಿಕ ಆಯ್ಕೆಯನ್ನೂ ಸಮರ್ಥಿಸಿಕೊಳ್ಳಬೇಕು.

## ಸಾಮಾಜಿಕ ಕಾರ್ಯ ಸಾಧನೆ ಪರಿಶೀಲನೆ

ಇದು ಉದ್ದೇಶಿತ ಫಲಾನುಭವಿಗಳ ಬಗ್ಗೆ ಮಾಹಿತಿ ನೀಡಬೇಕು ಹಾಗೂ ಅವರನ್ನು ಎಲ್ಲಿಯವರೆಗೆ ಸಂಪರ್ಕಿಸಬೇಕೆಂಬುದನ್ನು ತಿಳಿಸಬೇಕು. ಯೋಜನಾ ಅನುಷ್ಠಾನದಲ್ಲಿ ಅವರ ಪಾತ್ರದ ಬಗ್ಗೆ ಮಾಹಿತಿ ಇರಬೇಕು. ಅವರ ಜೀವನದ ಮೇಲೆ ಯಾವ ರೀತಿ ಯೋಜನೆಯು ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಸೂಚಿಸಬೇಕು.

## ಸಾಂಸ್ಥಿಕ ಸಾಧನಾ ಶ್ರೇಣಿ

ಇದು ಭಾಗವಹಿಸುವ ಸಂಸ್ಥೆ(ಗಳ)ಬಗ್ಗೆ, ಆದರೆ ಪರಿಣಿತರ ಬಗ್ಗೆ ಅವರ ಹಿನ್ನೆಲೆ ಮತ್ತು ಅವರ ಅನುಭವಗಳ ಬಗ್ಗೆ ವಿವರ ನೀಡಬೇಕು.

## ಯೋಜನಾ ಅನುಷ್ಠಾನ

3ತಿಂಗಳು ಮತ್ತು ವರ್ಷದ ಹಂತಗಳಲ್ಲಿನ ಯೋಜನಾ ಅನುಷ್ಠಾನಕ್ಕಾಗಿ ವಿವಿಧ ಹಂತಗಳಲ್ಲಿ ಕೈಗೊಳ್ಳುವ ಕ್ರಮಗಳ ವಿವರಗಳನ್ನು ಹೊಂದಿರಬೇಕು. ಅನುಬಂಧ ದಾಖಲೆಯಾಗಿ ವೇಳಾ ಪಟ್ಟಿಯನ್ನು ಲಗ್ಗತಿಸಬೇಕು.

## ಹೊಣೆ ಮತ್ತು ಕಲ್ಪನೆಗಳು

ಯೋಜನೆಯ ಅನುಷ್ಠಾನ ಕೈಗೊಳ್ಳುವೆ ವೇಳೆ ಸಂಸ್ಥೆ ಹೊರಬೇಕಾದ ಹೊಣೆಗಳನ್ನು ಮತ್ತು ಮುಂದಿನ ಕಲ್ಪನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಬೇಕು.

- ಉಸ್ತುವಾರಿ, ಮೌಲ್ಯಮಾಪನ ಮತ್ತು ವರದಿಗಾರಿಕೆ ವ್ಯವಸ್ಥೆಗಳು
- ಕ್ರಮದ ಸೂಚನೆಗಳು
- ಪರಿಶೀಲನೆ ವಿಧಾನಗಳು
- ಮೌಲ್ಯಮಾಪನ ವಿಧಾನಗಳು
- ವರದಿಗಾರಿಕೆ ತಂತ್ರಗಳು ಮತ್ತು ಅವಧಿಗಳು

## ಮುಂದುವರಿಕೆ

ಹಣ ನೀಡಿಕೆಯ ಕಾಲದ ನಂತರವೂ (ಅಗತ್ಯವಿದ್ದರೆ) ಯೋಜನೆಯನ್ನು ಹೇಗೆ ಮುಂದುವರಿಸಬೇಕು.

ಸಂಜೆ 5.30 ಸಾಂಸ್ಥಿಕ ಸಾಮರ್ಥ್ಯ ಅಭಿವೃದ್ಧಿ

## ಸಮೂಹ ಚರ್ಚೆ

ಯೋಜನಾ ಅನುಷ್ಠಾನ ಅಭಿವೃದ್ಧಿಗೆ ಕೌಶಲಗಳ ಅಗತ್ಯ ಎಂಬುದನ್ನು ಪ್ರತಿನಿಧಿಗಳಿಗೆ ವಿವರಿಸಬೇಕು. ಕಳೆದ ಐದು ದಿನಗಳಿಂದ ಕೈಗೊಂಡ ಎಲ್ಲ ಕಾರ್ಯಗಳಿಂದ ಅಗತ್ಯವಾದ ಕೌಶಲ್ಯಗಳನ್ನು ಪಟ್ಟಿ ಮಾಡುವಂತೆ ಸಮೂಹಕ್ಕೆ ತಿಳಿಸಬೇಕು. ಸುದ್ದಿಯ ಅಂಶಗಳನ್ನು ಪಟ್ಟಿ ಮಾಡಬೇಕು. ಪರಮರ್ಶಿಸಿ ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು.

## ಪ್ರತಿನಿಧಿಗಳಿಗೆ ಕೇಳಬೇಕಾದ ಪ್ರಶ್ನೆಗಳು

ಇಂಥ ಕೌಶಲಗಳು ಕಾರ್ಯಾಗಾರ ಸಮೂಹದಲ್ಲಿ ಯಾರಿಗಿದೆ. ಇಂಥ ಕೌಶಗಳನ್ನು ಅವರು ಎಲ್ಲಿ ಮತ್ತು ಹೇಗೆ ಪಡೆದರು ಅವರಿಗೆ ಬೆಂಬಲ ನೀಡುವವರು ಯಾರು.

ತಾಂತ್ರಿಕ ಸಹಕಾರ, ಸಾಂಸ್ಥಿಕ ಮತ್ತು ಸಾಮರ್ಥ್ಯ ನಿರ್ಮಾಣದ ಪರಿಕಲ್ಪನೆಗಳನ್ನು ವಿವರಿಸಿ, ಸಾಂಸ್ಥಿಕ ಅಗತ್ಯಗಳ ಪಟ್ಟಿಯನ್ನು ಗುರುತಿಸಬೇಕು. ಈ ಪಟ್ಟಿ ಸಿದ್ಧಪಡಿಸಲು ಪ್ರತಿನಿಧಿಗಳಿಂದ ಮಾಹಿತಿ ಕೇಳಬೇಕು.

ಸಮಯ: 30 ನಿಮಿಷಗಳು

## ಉದ್ದೇಶ

ಸಾಂಸ್ಥಿಕ ಕೌಶಲಗಳ ಕೊರತೆಯನ್ನು ಗುರುತಿಸಿ ಅದನ್ನು ಹೇಗೆ ಬಗೆಹರಿಸಬಹುದೆಂಬ ಬಗ್ಗೆ ತಿಳಿಯಲು ಪ್ರತಿನಿಧಿಗಳಿಗೆ ಅನುವು ಮಾಡಿಕೊಡುವುದು

ಸಂಜೆ 6.00 ಮುಂದಿನ ಯೋಜನೆ ಮತ್ತು ಮುಕ್ತಾಯ ಸಮೂಹ ಚರ್ಚೆ

ಮುಂದುವರೆಯುವ ಪ್ರಕ್ರಿಯೆ ಬಗ್ಗೆ ಪ್ರತಿನಿಧಿಗಲಿಗೆ ವಿವರಿಸಿ

- ★ ಸಿಬಿಓ ರಚನೆ ಮತ್ತು ಕಾನೂನು ನೋಂದಣಿ
- ★ ಯೋಜನಾ ಪ್ರಸ್ತಾವನೆ ಬರವಣಿಗೆ
- ★ ಸೂಕ್ತ ಸಿಬ್ಬಂದಿಯನ್ನು ಗುರುತಿಸುವಿಕೆ
- ★ ಪ್ರಸ್ತಾವನೆ ಸಲ್ಲಿಕೆ
- ★ ನಿಧಿ ಕೊರತೆ ನಂತರ ಅನುಷ್ಠಾನ ಅವಧಿ
- ★ ಕೌಶಲ್ಯ ಮತ್ತು ಸಾಮರ್ಥ್ಯ ನಿರ್ಮಾಣ

ಎಲ್‌ಇಪಿ ಈಗ ಈ ಪ್ರಕ್ರಿಯೆಯ ಪ್ರಗತಿಯ ಹೊಣೆ ಹೊಂದಿದೆ. ಸೂಕ್ತ ಸಂಪನ್ಮೂಲ ವ್ಯಕ್ತಿಗಳು ಮತ್ತು ಸಂಸ್ಥೆಗಳಿಂದ ಸಹಕಾರ ಒದಗಿಸಬಹುದು.

ಎಲ್ಲ ಪ್ರತಿನಿಧಿಗಳಿಗೆ ಧನ್ಯವಾದಗಳು

ಸಮಯ: 15 ನಿಮಿಷಗಳು

ದಿನದ ಸಮಸ್ಯೆಗಳು ಮತ್ತು ಅವರು ಎದುರಿಸಿದ ಸವಾಲುಗಳ ಮತ್ತು ತಾವು ಹಂಚಿಕೊಂಡ ವಿಷಯಗಳ ಬಗ್ಗೆ ಹಾಸ್ಯಮಯವಾಗಿ ಕೆಲವು ಪೂರಕ ಹೇಳಿಕೆಗಳನ್ನು ನೀಡುವಂತೆ ತಿಳಿಸಬೇಕು.

ಪ್ರತಿನಿಧಿಗಳಿಗೆ ಪ್ರವಾಸ ಚೀಲ ಮತ್ತು ಯಾವುದೇ ಬಾಕಿ ಪಾವತಿ ಇದ್ದರೆ ನೀಡಬೇಕು. ಅವರ ಹೆಸರನ್ನು ನೋಂದಣಿ ಅರ್ಜಿಯಲ್ಲಿ ಗುರುತು ಹಾಕಿಕೊಳ್ಳಬೇಕು.

## ಅನುಸರಣೆ

## ಸಿಬಿಓ ಅಭಿವೃದ್ಧಿ

ಇದನ್ನು ಅಧ್ಯಯನ ಅವಧಿಯ ವೇಳೆ ನಡೆಸದಿದ್ದರೆ, ಟ್ರಸ್ಟಿಯಾಗುವವರು (ಟ್ರಸ್ಟ್‌ರಚಿಸಿದ್ದರೆ) ಗುರುತಿಸುವ ಅಗತ್ಯವಿದೆ.

ಸೊಸೈಟಿ ಅಥವಾ ಟ್ರಸ್ಟ್ ಆಗಿ ನೋಂದಣಿ ಮಾಡಿಸಲು ಅಗತ್ಯವಾದ ಕಾನೂನು ದಾಖಲೆಯನ್ನು ನೀಡಲು ಸಲಹೆ ಪಡೆಯುವುದು ಅಗತ್ಯ.

## ಪ್ರಸ್ತಾವನೆ ಅಭಿವೃದ್ಧಿ

ಕಾರ್ಯಾಗಾರ ಮತ್ತು ಸೂಕ್ತ ತಾಂತ್ರಿಕ ಸಹಕಾರದಿಂದ ಈಗ ಅಂತಿಮ ಯೋಜನಾ ಪ್ರಸ್ತಾವನೆ ಮತ್ತು ಆಯವ್ಯಯ ಮಂಡಿಸಲು ಸಾಧ್ಯವಾಗುತ್ತದೆ. ದ್ವಿತೀಯ ಕಾರ್ಯಾಗಾರದ ನಂತರ ಆದಷ್ಟು ಶೀಘ್ರ ಇದನ್ನು ಮಾಡಬೇಕು.

ಆರಂಭಿಕ ಹೆಜ್ಜೆಯಾಗಿ ಪರಮರ್ಶೆ ಮತ್ತು ಪ್ರತಿಕ್ರಿಯೆಗಾಗಿ ಇದನ್ನು ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ (ಎಸ್‌ಎಸಿಎಸ್) ಸಲ್ಲಿಸಬೇಕು. ಎಸ್‌ಎಸಿಎಸ್ ಅಗತ್ಯತೆಗಳಿಗೆ ಅನುಗುಣವಾಗಿ ತಿದ್ದುಪಡಿಗಳನ್ನು ಮಾಡಬಹುದು.

## ವಸತಿ ಮತ್ತು ಸಿಬ್ಬಂದಿ ಆಯ್ಕೆ

ಅಧ್ಯಯನ ಅವಧಿ ವೇಳೆ, ಪುಟ್ಟ ಡ್ರಾಪ್- ಇನ್‌ಕೇಂದ್ರವನ್ನು ಒದಗಿಸಬೇಕು. ಯೋಜನೆಯನ್ನು ಮೇಲ್ದರ್ಜೆಗೇರಿಸಲು ಇದು ಅಗತ್ಯವಿದೆ. ವಿವಿಧ ಸೇವೆಗಳು ಮತ್ತು ಸಿಬ್ಬಂದಿಗೆ ಸ್ಥಳ ಕಲ್ಪಿಸಲು ಇಲ್ಲಿ ಸಾಕಷ್ಟು ಅವಕಾಶಗಳಿರಬೇಕು. ಆಯವ್ಯಯದಲ್ಲಿ ಅಭಿವೃದ್ಧಿಗೊಳಿಸಲಾದ ವೆಚ್ಚಕ್ಕೆ ಈ ವೆಚ್ಚಗಳು ಅನುಗುಣವಾಗಿರಬೇಕು. ಸೂಕ್ತ ಸಿಬ್ಬಂದಿಯನ್ನು ಗುರುತಿಸುವ ಅಗತ್ಯವಿದೆ. ಉದ್ಯೋಗ ವಿವರ ಗುತ್ತಿಗೆ ನೀತಿ ಮತ್ತು ನಿಬಂಧನೆಗಳು, ಅಗತ್ಯ ಯೋಜನಾ ಉಸ್ತುವಾರಿ ದಾಖಲೆಗಳು, ಹಣಕಾಸು ನಿರ್ವಹಣೆ ವ್ಯವಸ್ಥೆಗಳನ್ನು ಅಭಿವೃದ್ಧಿಗೊಳಿಸುವ ಅಗತ್ಯವಿದೆ.

## ಯೋಜನೆ ಅನುಷ್ಠಾನ

ಹಣಲಭಿಸಿದ ನಂತರ, ಅನುಷ್ಠಾನ ವೇಳಾ ಪಟ್ಟಿ (ಕಾರ್ಯಾಗಾರದಲ್ಲಿ ಅಭಿವೃದ್ಧಿಗೊಳಿಸಿದ್ದು ಮತ್ತು 'ಸರಣಿ III' ವಿಭಾಗದ ಉದಾಹರಣೆಯಾಗಿ ಗುರುತಿಸಿದ್ದು) ರಚಿಸಬೇಕು ಅಗತ್ಯವಾದ ಎಲ್ಲ ದಾಖಲೆಗಳು, ಸಿಬ್ಬಂದಿ ಗುತ್ತಿಗೆ, ನಿರ್ವಹಣಾ ವ್ಯವಸ್ಥೆ ಸೂಕ್ತ ವಸತಿ, ಯಂತ್ರೋಪಕರಣ ಮತ್ತು ಪೀಠೋಪಕರಣ ಎಲ್ಲವೂ ಸ್ಥಳದಲ್ಲಿರಬೇಕು. 'ಸರಣಿ III' ವಿಭಾಗದ ಪಟ್ಟಿಯನ್ನು ನೋಡಿ

## ತಾಂತ್ರಿಕ ಸಹಕಾರ ಮತ್ತು ಬೆಂಬಲ

ಯೋಜನೆಗಾಗಿ ಹೊಸ ಸಿಬಿಓಗೆ ನೆರವು ಒದಗಿಸಲು ಸೂಕ್ತ ತಾಂತ್ರಿಕ ಪರಿಣಿತರ ಸಹಕಾರ ಮತ್ತು ಬೆಂಬಲ ದೊರೆತಿದೆಯೇ ಎಂಬ ಬಗ್ಗೆ ಮನದಟ್ಟು ಮಾಡಿಕೊಳ್ಳಬೇಕು. ಯೋಜನೆಗೆ ವೆಚ್ಚವಿಲ್ಲದೆ ಇಂಥ ನೆರವನ್ನು ಯಾರು ಒದಗಿಸುತ್ತಾರೆ ಎಂಬ ಬಗ್ಗೆ ಎಸ್‌ಎಸಿಎ ಪ್ರತಿನಿಧಿಗಳ ಜೊತೆ ಚರ್ಚಿಸಬೇಕು.

# ಎರಡನೇ ಹಂತ: ಎಂ.ಎಸ್.ಎಂ. ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ

## ಸಂಕ್ಷಿಪ್ತ ರೂಪ

AIDS -ಅಕ್ವೈರ್ಡ್ ಇಮ್ಯೂನೋ ಡೆಫಿಶಿಯನ್ಸಿ ಸಿಂಡ್ರೊಮ್

ARV -ಆಂಟಿರಿಟ್ರೋವಿರಲ್(ಏಡ್ಸ್ ವೈರಾಣು ಪ್ರತಿರೋಧಕ)

BCC -ಬಿಹೆವಿಯರ್ ಚೆಂಜ್ ಕಮ್ಯೂನಿಕೇಷನ್ - (ವರ್ತನೆ ಬದಲಾವಣೆ ಸಂವಹನ)

CBO -ಕಮ್ಯೂನಿಟಿ ಬೇಸ್ಡ್ ಅರ್ಗನೈಸೆಷನ್ - ಸಮುದಾಯ ಆಧರಿತ ಸಂಸ್ಥೆ

IDU -ಇಂಜೆಕ್ಟಿಂಗ್ ಡ್ರಗ್ ಯೂಸರ್

IEC -ಇನ್‌ಫರ್ಮೆಷನ್, ಎಜುಕೇಷನ್ ಅಂಡ್ ಕಮ್ಯೂನಿಕೇಷನ್

HIV -ಹ್ಯುಮನ್ ಇಮ್ಯಾನ್ ಡೆಫಿಶಿಯನ್ಸಿ ವೈರಸ್

MSM -ಮೇಲ್ಸ್ ಹೂ ಹಾವ್ ಸೆಕ್ಸ್ ವಿಥ್ ಮೇಲ್ಸ್ - (ಪುರುಷ - ಪುರುಷ ನೊಂದಿಗೆ ಲೈಂಗಿಕ ಕ್ರಿಯೆ ಹೊಂದಿರುವವರು)

MSW -ಮೇಲೆ ಸೆಕ್ಸ್ ವರ್ಕರ್

NGO -ನಾನ್- ಗೌರ್ನ್‌ಮೆಂಟ್ ಆರ್ಗನೈಸೆಷನ್

NFI -ನಾಜ್ ಫೌಂಡೇಶನ್ ಇಂಟರ್‌ನ್ಯಾಷನಲ್

STD -ಸೆಕ್ಸುದಲ್ಲಿ ಟ್ರಾನ್ಸ್‌ಮೀಟೆಡ್ ಡೀಸಿಸ್

STI -ಸೆಕ್ಶುವಲ್ಲಿ ಟ್ರಾನ್ಸ್‌ಮೀಟೆಡ್ ಇನ್‌ಫೆಕ್ಷನ್

UNAIDS -ಯುನೈಟೆಡ್ ನೇಷನ್, ಜಾಯಿಂಟ್ ಪ್ರೋಗ್ರಾಂ ಆನ್ ಏಡ್ಸ್

## ಎರಡನೇ ಹಂತ: ಎಂ.ಎಸ್.ಎಂ. ಲೈಂಗಿಕ ಆರೋಗ್ಯ ಯೋಜನೆ ಅನುಷ್ಠಾನ ಗ್ರಂಥ ಋಣ

ಈ ಕೆಳಕಂಡ ಮೂಲಗಳಿಗೆ ನಾವು ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತೇವೆ


★ ದಿ ವರ್ಕಸ್ ಹ್ಯಾಂಡ್‌ಬುಕ್: ದಿ ಸೆಕ್ಸ್ ವರ್ಕರ್ಸ್ ಔಟ್‌ರೀಚ್ ಪ್ರಾಜೆಕ್ಟ್ ಆಸ್ಟ್ರೇಲಿಯಾ, 1922

★ ದಿ ಅನ್‌ಸೆನ್ಸಾರ್ಡ್ ಗೈಡ್ ಟು ಸೆಕ್ಸುಯಲ್ ಹೆಲ್ತ್, ಹೆಲೆನ್ ನಾಕ್ಸ್, ನಾಕ್ಸ್ ಪಬ್ಲಿಷಿಂಗ್, ಯುಕೆ, 1995

★ ಮೇಕಿಂಗ್ ಸೆಕ್ಸ್ ವರ್ಕ ಸೆಫ್, ನೆಟ್‌ವರ್ಕ್ ಆಫ್ ಸೆಕ್ಸ್ ವರ್ಕ್ ಪ್ರಾಜೆಕ್ಟ್, ಯು.ಕೆ 1997

★ ಎಬಿಸಿ ಆಫ್ ಸೆಕ್ಸುವಲ್ಲಿ ಟ್ರಾನ್ಸ್‌ಮೀಟೆಡ್ ಡೀಸಿಸಸ್, ಎಡಿಟೆಡ್ ಬೈ ಮೈಕೆಲ್ ಅಡ್ಲೆರ್, ಬಿಎಂಜೆ, ಯುಕೆ 1995

★ ಎಬಿಸಿ ಆಫ್ ಏಡ್ಸ್ ಎಡಿಟೆಡ್ ಟೈ ಮೈಕೆಲ್ ಆಡ್ಲೆರ್, ಬಿಎಂಜೆ, 1997

★ ವರ್ಕಿಂಗ್ ವಿಥ್ ಅನ್‌ಸರ್‌ರಿನಿಟಿ, ಹಿಲರಿ ಡಿಕ್ಸನ್ ಮತ್ತು ಪೀಟರ್ ಗಾರ್ಡನ್, ಇಪಿಎ ಎಜುಕೇಷನ್ ಯೂನಿಟ್,ಯು.ಕೆ1987

★ ವೆಸ್ಸೆಕ್ಸ್ ಗೇ ಮೆನ್ಸ್ ಹೆಲ್ತ್ ಫ್ಲೋರಮ್, ಯುಕೆ ಫಾರ್ ಎಸ್‌ಟಿಡಿ ಟೆಕ್‌ಸ್ಟ್

★ ಎಸ್‌ಟಿಡಿ/ ಏಡ್ಸ್ ಪೀರ್ ಎಜುಕೇಟರ್ ಟ್ರೈನಿಂಗ್ ಮ್ಯಾನುಯಲ್, ನ್ಯಾಷನಲ್ ಏಡ್ಸ್ ಕಂಟ್ರೋಲ್ ಪ್ರೇಗ್ರಾಮ್, ತಾಂಜಾನಿಯಾ, 1992

★ ಯುಎನ್‌ಡಿಪಿ: ಎಚ್‌ಐವಿ/ ಏಡ್ಸ್ ಪ್ರಾಜೆಕ್ಟ್ ಪ್ಲಾನಿಂಗ್ ಮ್ಯಾನುಯಲ್

★ ಡಿಪಾರ್ಟ್‌ಮೆಂಟ್ ಆಪ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್, ಯುಕೆ, ಪ್ರಾಜೆಕ್ಟ್ ಲಾಜಿಕಲ್ ಫ್ರೆಮ್‌ವರ್ಕ್

★ ಯುಎನ್‌ಏಡ್ಸ್: ಪ್ಲಾನಿಂಗ್ ಅಂಡ್ ಇಂಪ್ಲಿಮೆಂಟಿಂಗ್ ಆಫ್ ಟಾರ್‌ಗೇಟಡ್ ಇಂಟರ್‌ವೆನ್‌ಷನ್ಸ್- ಪಾರ್ಟಿಸಿಪೆಂಟ್ಸ್ ಗೈಡ್ (ಡ್ರಾಫ್ಟ್)


ಈ ಸಂಪನ್ಮೂಲದ ಅಭಿವೃದ್ಧಿ ಮತ್ತು ನಿರ್ಮಾಣಕ್ಕೆ ಬೆಂಬಲ ನೀಡಿದ ಯುಎನ್‌ಏಡ್ಸ್ ಮತ್ತು ಪಾರ್ಟ್‌ನರ್‌ಶಿಪ್ ಯೂನಿಟ್‌ನ ಕ್ಯಾಲೆ ಅಲೆಮೆಡಲ್ ಅವರಿಗೆ ನಮ್ಮ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

The End